ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಮಂಗಳವಾರ 2023

₹4

ಸಂಪುಟ: 44 | ಸಂಚಿಕೆ: 23 | ಪುಟಗಳು: 12 + IV

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಸಿದ್ದರಾಮಯ್ಯ ಬೆಂಬಲಿಸಿ: ಡಾ.ತಿಮ್ಮಯ್ಯ ಮನವಿ



ಮೈಸೂರು, ಮೇ 8– ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರವರನ್ನು ಬೆಂಬಲಿಸುವಂತೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮನವಿ ಮಾಡಿದರು.

ವರುಣಾ ವಿಧಾನಸಭಾ ಕ್ಷೇತ್ರದ ನಗರ್ಲೆ, ಕುಪ್ಪರವಳ್ಳಿ, ದಾಸನೂರು, ಕಾರೇಪುರ ಗ್ರಾಮಗಳಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡುತ್ತಾ, ಸಿದ್ದರಾಮಯ್ಯ ಎಂದೂ ಮಾತಿಗೆ ತಪ್ಪುವವರಲ್ಲ, ನುಡಿದಂತೆ ನಡೆಯುವವರು. ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಕೊಟ್ಟ ಭರವಸೆಗಳೆಲ್ಲವನ್ನೂ ಬಹುತೇಕ ಈಡೇರಿಸಿದ್ದಾರೆ. ಅನ್ನಭಾಗ್ಯ, ಕ್ಷೀರಭಾಗ್ಯ, ಮನಸ್ವಿನಿ, ವಿದ್ಯಾಸಿರಿಯಂತಹ ಅನೇಕ ಜನಪರ ಕಾರ್ಯಕ್ರಮ ನೀಡಿದರು. ಇಂತಹ ಧೀಮಂತ ಮತ್ತು ಸಾಧನೆಗಳ ಸರದಾರ ಸಿದ್ಧರಾಮಯ್ಯರವರನ್ನು ಗೆಲ್ಲಿಸಬೇಕೆಂದರು. ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸಬಲ್ಲ ಪ್ರಾಮಾಣಿಕ ನಾಯಕ ಸಿದ್ದರಾಮಯ್ಯರವರಿಂದ ಮಾತ್ರ ಕ್ಷೇತ್ರ ಅಭಿವೃದ್ಧಿಯಾಗಬಲ್ಲದು. ಬಿಜೆಪಿಯವರು ಕೋಮುವಾದ ಸಮಾಜದ ಸಾಮರಸ್ಯವನ್ನು ಹಾಳು ಮಾಡುತ್ತಾರೆ. ಆದ್ದರಿಂದ ಅಭಿವೃದ್ಧಿಗಾಗಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯರವರನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಮಾಧ್ಯಮ ವಕ್ತಾರ ಎಡತೊರೆ ನಿಂಗರಾಜ್, ಮಾಜಿ ಕೌನ್ಸಿಲರ್ ಸ್ವಾಮಿ, ಸ್ವಾಮಿ ಹಳಿಮಾವು, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ದೇವರಾಜು, ಧರ್ಮೇಂದ್ರ, ದಾಸನೂರು ಗ್ರಾ.ಪಂ. ಅಧ್ಯಕ್ಷ ಲೋಕೇಶ್, ಯುವ ಮುಖಂಡರಾದ ರಾಜಪ್ಪ, ರೇವಣ್ಣ, ಸೌರಭ ಉಪಸ್ಥಿತರಿದ್ದರು.

ಈ ಬಾರಿ ಸಂವಿಧಾನ ವರ್ಸಸ್ ಕೋಮುವಾದ



ಮೈಸೂರು, ಮೇ 8(ಎಂಟಿವೈ)– ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣೆ ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಕೋಮುವಾದ ನಡುವೆ ನಡೆಯುತ್ತಿರುವ ಚುನಾವಣೆಯಾಗಿದೆ. ಈ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಗೆಲ್ಲಿಸಿದರೆ ಮತ್ತೊಮ್ಮೆ ಉನ್ನತ ಸ್ಥಾನ ಅಲಂಕರಿಸುತ್ತಾರೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ವರುಣ ಕ್ಷೇತ್ರದ ಮರಡಿಹುಂಡಿ, ನಂದಗುಂದ, ನಂದಗುಂದಪುರ ಗ್ರಾಮಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರ ಬಿರುಸಿನ ಮತಯಾಚಿಸಿದರು.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಸಂವಿಧಾನದ ಆಶಯವನ್ನು ಕಡೆಗಣಿಸಿ, ಆಡಳಿತ ನಡೆಸುತ್ತಿದೆ. ಇದರಿಂದ ಸ್ವೇಚ್ಛಾಚಾರ, ಸರ್ವಾಧಿಕಾರಿ ಧೋರಣೆಯೊಂದಿಗೆ ಆಡಳಿತ ಯಂತ್ರ ಕಾರ್ಯನಿರ್ವಹಿಸುತ್ತಿದೆ. ಬಡವರು, ದೀನ ದಲಿತರು, ರೈತರ ಸಂಕಷ್ಟದ ಕೂಗು ಕೇಳುವವರೇ ಇಲ್ಲದಂತಾಗಿದೆ. ಹಿಟ್ಲರ್ ಮಾದರಿಯ ಆಡಳಿತವಿದ್ದು, ಜನರನ್ನು ಹತ್ತಿಕ್ಕುವ ಸಂಚು ನಡೆಯುತ್ತಿದೆ ಎಂದು ಆರೋಪಿಸಿದರು.

ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರ ದುರಾಡಳಿತ ನಡೆಸುತ್ತಿದೆ. ಇದರಿಂದ ಇಂಧನ ಬೆಲೆ, ಸಿಲಿಂಡರ್, ರಸಗೊಬ್ಬರ, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಬಡ ಹಾಗೂ ಮಧ್ಯಮ ವರ್ಗ ಜನ ತತ್ತರಿಸುತ್ತಿದ್ದಾರೆ. ಜೀವನ ನಡೆಸುವುದೇ ಕಷ್ಟಕರವಾಗಿದೆ. ಈ ನಡುವೆ ಅನ್ನಭಾಗ್ಯ ಯೋಜನೆಯ ಅಕ್ಕಿ ಕಡಿತಗೊಳಿಸಿದ್ದಾರೆ. ಇಷ್ಟೆಲ್ಲಾ ಸಂಕಷ್ಟವನ್ನು ಕೊಡುಗೆಯಾಗಿ ನೀಡಿರುವ ಬಿಜೆಪಿ, ಯಾವ ಮುಖ ಇಟ್ಟುಕೊಂಡು ಓಟ್ ಕೇಳಲು ಬರುತ್ತಿದ್ದಾರೆ ಎನ್ನುವುದೇ ಪ್ರಶ್ನೆ. ಜನ ಬಿಜೆಪಿ ತಿರಸ್ಕರಿಸುವ ಮೂಲಕ ತಮ್ಮ ಹಕ್ಕುಗಳ ರಕ್ಷಣೆ ಮಾಡಿಕೊಳ್ಳಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಅಕ್ರಮ ನೇಮಕಾತಿ, ಶೇ.40 ಕಮಿಷನ್ ದಂಧೆಯಿಂದ ಜನ ಬೇಸತ್ತಿದ್ದಾರೆ. ಇದರಿಂದ ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷಕ್ಕೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ. ಈ ಬಾರಿ ಕಾಂಗ್ರೆಸ್ 140 ಸ್ಥಾನ ಗೆಲ್ಲುವ ಮೂಲಕ ಅಧಿಕಾರಕ್ಕೆ ಬರಲಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದ ಜನಪರ ಕಾರ್ಯಕ್ರಮಗಳನ್ನು ಬಿಜೆಪಿ ಸರ್ಕಾರ ನಿಲ್ಲಿಸಿದ್ದು ಜನರ ಆಕ್ರೋಶಕ್ಕೆ ಗುರಿಯಾಗಿದೆ. ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ, ನಡ್ಡಾರವರು ಎಷ್ಟು ಬಾರಿ ಕರ್ನಾಟಕಕ್ಕೆ ಭೇಟಿ ನೀಡಿದರೂ, ಬಿಜೆಪಿಗರ ಆಟ ವರುಣ ಕ್ಷೇತ್ರದ ಜನರ ಮುಂದೆ ನಡೆಯುವುದಿಲ್ಲ. ಸಿದ್ದರಾಮಯ್ಯ ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಾವಿರಾರು ಕೋಟಿ ರೂ. ಅನುದಾನ ನೀಡಿದ್ದಾರೆ. ಎಲ್ಲಾ ಜಾತಿಯ ಜನಾಂಗದವರಿಗೂ ಸಹಾಯ ಮಾಡಿದ್ದಾರೆ ಎಂದರು. ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯ ಬುಲೆಟ್ ಮಹದೇವು, ನಾಗೇಂದ್ರ, ನಾಡನಹಳ್ಳಿ ರವಿ, ಹೊಸಕೋಟೆ ಶಿವಣ್ಣ, ಕರಿಯಪ್ಪ, ಚಿನ್ನ ಸೋಮಯ್ಯ, ಪಟೇಲ್ ಕುಮಾರ್, ಶಿವಣ್ಣ, ಕುಮಾರ್, ಮುಟ್ಟಸ್ವಾಮಿ ಹಾಜರಿದ್ದರು.



ಮೈಸೂರಿನ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರ ಪರ ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮಾಜಿ ಕಾರ್ಪೋರೇಟರ್ ನಂದೀಶ್ ಪ್ರೀತಂ, ಮುಖಂಡರಾದ ಕೆ.ಜಿ.ಕೊಪ್ಪಲು ರಾಜಣ್ಣ, ಮಂಚೇಗೌಡನಕೊಪ್ಪಲು ರವಿ ಇತರರು ಬಹಿರಂಗ ಪ್ರಚಾರಕ್ಕೆ ಕೊನೇ ದಿನವಾದ ಸೋಮವಾರ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಕೆಆರ್ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಗೆಲುವಿನ ವಿಶ್ವಾಸ



ಮೈಸೂರು,ಮೇ 8(ಪಿಎಂ)–ಕೃಷ್ಣರಾಜ ಕ್ಷೇತ್ರದಲ್ಲಿ ಗೆಲುವು ಸಾಧಿಸುವುದಾಗಿ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಎಸ್.ಪ್ರಕಾಶ್ ಪ್ರಿಯಾದರ್ಶನ್ ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ರಮ ಸಂಖ್ಯೆ 14ರ ಸೇಬಿನ ಗುರುತಿಗೆ ಕ್ಷೇತ್ರದ ಜನತೆ ಮತ ನೀಡಿ ಬೆಂಬಲಿಸುವಂತೆ ಕೋರಿದರು. ಜನರಿಂದ ಮತ ಸಿಗುವ ಭರವಸೆ ಸಿಕ್ಕಿದೆ ಎಂದರು. ಮುಖಂಡರಾದ ದೀಪಕ್, ರೋಷನ್, ವೀರಭದ್ರ ಸ್ವಾಮಿ, ಮಾಧವಿ ಗೋಷ್ಠಿಯಲ್ಲಿದ್ದರು.



ಮೈಸೂರಿನ ಹೆಬ್ಬಾಳು ಬಡಾವಣೆಯ ಮಾನಸ ಭಂಡಾರ್ ವೃತ್ತದಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶಾಸಕ ಎಲ್.ನಾಗೇಂದ್ರ ಕೊನೆ ದಿನ ಬಿರುಸಿನ ಮತಯಾಚನೆ ನಡೆಸಿದರು. ಈ ವೇಳೆ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ, ಶಕ್ತಿ ಕೇಂದ್ರದ ಅಧ್ಯಕ್ಷ ರಾಜೇಂದ್ರ, ಅರುಣ್ ಕಟಕರ್, ಯೋಗಿಗೌಡ, ದೀಪಕ್, ಹರೀಶ್, ದಶರಥ ಚಕ್ರೆ, ಮಧು, ಸಂತೋಷ ಇನ್ನಿತರರಿದ್ದರು.



ಹುಣಸೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರ ಪರವಾಗಿ ಚಿಕ್ಕ ಹುಣಸೂರು ಹಾಗೂ ಬನ್ನಿಬೀದಿಯಲ್ಲಿ ಹುಯಿಲಾಳು ರಾಮಸ್ವಾಮಿ ಮತಯಾಚನೆ ಮಾಡಿದರು. ಈ ವೇಳೆ ಬಿ.ಕೆ.ಬಸವರಾಜು, ರಾಮಣ್ಣ, ಚಲುವರಾಜು ಇತರರಿದ್ದರು.

ಅರ್ಜಿ ಆಹ್ವಾನ

ಮೈಸೂರು: 2022–23ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಇಂಜಿನಿಯರಿಂಗ್, ಪ್ಯಾರಾಮೆಡಿಕಲ್, ನರ್ಸಿಂಗ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ವಿದ್ಯಾರ್ಥಿಗಳ ಹಾಗೂ ಪರಿಶಿಷ್ಟ ಜಾತಿಯ ಎಲ್ಲಾ ಕೋರ್ಸ್ ವಿದ್ಯಾರ್ಥಿಗಳಿಗೆ ಸ್ಟೇಟ್ ಹಾಸ್ಟಲ್ ಪೋರ್ಟಲ್‌ನಲ್ಲಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, sw.kar.nic.inನಲ್ಲಿ ಮೇ 15 ರೊಳಗೆ ಅರ್ಜಿ ಸಲ್ಲಿಸುವುದು.

ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಅಗತ್ಯ ದಾಖಲೆ ಲಗತ್ತಿಸಿ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ಕಚೇರಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ: 0821–2520910) ಅವರನ್ನು ಸಂಪರ್ಕಿಸಬಹುದು.

ನೇಮಕ



ಮೈಸೂರು: ನಗರ ಹಿಂದುಳಿದ ವರ್ಗಗಳ ವಿಭಾಗದ ನರಸಿಂಹರಾಜ ಕ್ಷೇತ್ರದ ಸಾಹುಕಾರ್ ಚೆನ್ನಯ್ಯ ಬ್ಲಾಕ್‌ನ ಉಪಾಧ್ಯಕ್ಷರನ್ನಾಗಿ ಮೈಸೂರಿನ ಹರೀಶ್ ನಂಜಯ್ಯ ಅವರನ್ನು ನೇಮಕ ಮಾಡಲಾಗಿದೆ.

ಸಂಜೆ ಮಳೆಗೆ ಜನಜೀವನ ಅಸ್ತವ್ಯಸ್ತ



ಮೈಸೂರು, ಮೇ 8(ಎಂಕೆ)– ಮೈಸೂರಿನಲ್ಲಿ ಮಳೆ ಅಬ್ಬರ ಮುಂದುವರೆದಿದ್ದು, ಸೋಮವಾರ ತಡರಾತ್ರಿಯವರೆಗೂ ಸುರಿಯಿತು. ಸಂಜೆ 7 ಗಂಟೆ ಸುಮಾರಿಗೆ ಆರಂಭವಾದ ಮಳೆ ಸರಿರಾತ್ರಿವರೆಗೂ ಧೋ ಎಂದು ಸುರಿಯುತ್ತಲೇ ಇತ್ತು. ಪರಿಣಾಮ ರಸ್ತೆ–ಚರಂಡಿಗಳು ತುಂಬಿ ಹರಿದಿದ್ದು, ತಗ್ಗು ಪ್ರದೇಶಗಳು ಜಲಾವೃತವಾಗಿತ್ತು. ಎಡೆಬಿಡದೆ ಸುರಿದ ಮಳೆಯಿಂದಾಗಿ ಉಂಟಾದ ಟ್ರಾಫಿಕ್‌ನಿಂದಾಗಿ ವಾಹನ ಸವಾರರು, ಪ್ರವಾಸಿಗರು ಕಿರಿಕಿರಿ ಅನುಭವಿಸುವಂತಾಯಿತು. ನಗರದ ಹಾರ್ಡಿಂಜ್ ವೃತ್ತದಲ್ಲಿ ಮರದ ಕೊಂಬೆಯೊಂದು ಮುರಿದು ಬಿದ್ದು, ಕೆಲಕಾಲ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಾಲಿಕೆ ಅಭಯ ತಂಡದವರು ಕೊಂಬೆಯನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮಳೆ ನಿರಂತರವಾಗಿ ಸುರಿಯುತ್ತಿದ್ದರೂ ಗುಡುಗು–ಮಿಂಚು ಹಾಗೂ ಗಾಳಿಯ ವೇಗ ಕಡಿಮೆ ಇರುವುದರಿಂದ ಯಾವುದೇ ತೊಂದರೆಯಾಗಿಲ್ಲ. ವಿದ್ಯುತ್ ಕಂಬಗಳು ಮುರಿದು ಬಿದ್ದಿರುವ ಕುರಿತು ವರದಿಯಾಗಿಲ್ಲ ಎಂದು ನಗರಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ ತಿಳಿಸಿದ್ದಾರೆ.

ಕೆ.ಆರ್. ಕ್ಷೇತ್ರಕ್ಕೆ ವೆಚ್ಚ ವೀಕ್ಷಕರ ನೇಮಕ

ಮೈಸೂರು, ಮೇ 8(ಆರ್‌ಕೆ)– ಕೆ.ಆರ್.ಕ್ಷೇತ್ರದ ವೆಚ್ಚ ವೀಕ್ಷಕರಾಗಿ ನಿತಿನ್‌ಕುಮಾರ್ ಜೈಮನ್ ಅವರನ್ನು ಚುನಾವಣಾ ಆಯೋಗವು ನೇಮಿಸಿದೆ. ಚುನಾವಣಾ ಅಕ್ರಮ ಸಂಬಂಧ ಸಾರ್ವಜನಿಕರು 7338581298 ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಬಹುದು.

ಅತ್ಯುನ್ನತ ಶ್ರೇಣಿಯಲ್ಲಿ ಲೋಹಿತ್ ತೇರ್ಗಡೆ

ಮೈಸೂರು, ಮೇ 8– ಮೈಸೂರಿನ ರಾಜೇಂದ್ರನಗರದಲ್ಲಿರುವ ಶ್ರೀ ಛಾಯಾದೇವಿ ವಿದ್ಯಾನಿಕೇತನ ಪ್ರೌಢಶಾಲೆ ವಿದ್ಯಾರ್ಥಿ ಎಸ್.ಲೋಹಿತ್, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 535 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಈತ ಶಿವಕುಮಾರ್ ಮತ್ತು ಕವಿತಾ ದಂಪತಿ ಪುತ್ರ.





ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರ ಪರ ಕಾಂಗ್ರೆಸ್ ಯುವ ಮುಖಂಡ ಹಾಗೂ ವಕೀಲ ಎಂ.ಪ್ರಫುಲ್‌ಕುಮಾರ್ ಕೈಲಾಸಪುರಂನಲ್ಲಿ ಮನೆ ಮನೆಗೆ ತೆರಳಿ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮಲ್ಲಿಕ್, ಸುರೇಶ್, ದುರ್ಗೇಶ್, ಕಾಳಸೂರಿ, ಸುಭಾಷ್ ಇತರರಿದ್ದರು.

ಕಾಂಗ್ರೆಸ್‌ಗೆ ಮತ ನೀಡಿ; ದಸಂಸ ಮನವಿ



ಮೈಸೂರು,ಮೇ 8(ಪಿಎಂ)– ಕೋಮುವಾದಿ, ಭ್ರಷ್ಟ 40 ಪರ್ಸೆಂಟ್ ಬಿಜೆಪಿ ಸರ್ಕಾರ ಕಿತ್ತೊಗೆಯಲು ಕಾಂಗ್ರೆಸ್‌ಗೆ ಮತ ನೀಡುವಂತೆ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಮುಖಂಡ ದೇವಗಳ್ಳಿ ಸೋಮಶೇಖರ್, ಬಿಜೆಪಿ ಕಪಿಮುಷ್ಠಿಗೆ ಸಿಲುಕಿ ನರಳಾಡುತ್ತಿರುವ ಭಾರತ ಮಾತೆಯನ್ನು ರಕ್ಷಿಸಿಕೊಳ್ಳಲು ಅಡಿಪಾಯ ಹಾಕುವ ಅತ್ಯಂತ ಮಹತ್ವದ ಚುನಾವಣೆ ಇದಾಗಿದೆ. ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಕಾಂಗ್ರೆಸ್ ಬೆಂಬಲಿಸಬೇಕಿದೆ ಎಂದರು.

ಜೊತೆಗೆ ಬಿಎಸ್‌ಪಿ, ಎಎಪಿ, ಆರ್‌ಪಿಐ, ಜೆಡಿಎಸ್ ಪಕ್ಷಗಳಿಗೆ ಮತ ನೀಡಿದರೆ ಅದು ಸಹ ಬಿಜೆಪಿಗೆ ವರದಾನವಾಗಲಿದೆ. ಹಾಗಾಗಿ ಈ ಬಗ್ಗೆಯೂ ಎಚ್ಚರ ವಹಿಸಬೇಕಿದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಗಟ್ಟಿ ಧ್ವನಿಯಾಗಿರುವ ಸಿದ್ದರಾಮಯ್ಯ ಮತ್ತು ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಕಾಂಗ್ರೆಸ್ ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಅತ್ಯಂತ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲಿಸಿ, ಕಾಂಗ್ರೆಸ್ ಅಧಿಕಾರಕ್ಕೆ ತರಬೇಕೆಂದು ಮನವಿ ಮಾಡಿದರು.

ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಮಾತನಾಡಿ, ರಾಜ್ಯದಲ್ಲಿ ಬಿಜೆಪಿಗೆ ಎಂದೂ ಸ್ಪಷ್ಟ ಬಹುಮತ ಬಂದಿಲ್ಲ. ಇದು ಹಿಂಬಾಗಿಲಿನಿಂದ ಸರ್ಕಾರ ರಚಿಸಿ ವ್ಯಾಪಕ ಭ್ರಷ್ಟಾಚಾರ ನಡೆಸಿದೆ. ಇವರ ಆಡಳಿತದಲ್ಲಿ ಸಾಮಾನ್ಯ ಜನತೆ ಬದುಕು ಕಡುಕಷ್ಟ. ಬಿಜೆಪಿ ಆಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ ಎಂದು ದೂರಿದರು. ಮುಖಂಡರಾದ ಜವರಪ್ಪ, ಮಹೇಶ್ ಸೋಸಲೆ, ಬೆಲವತ್ತ ರಾಮಚಂದ್ರ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ವ್ಯಕ್ತಿಗಿಂತ ಪಕ್ಷ, ಪಕ್ಷಕ್ಕಿಂತ ದೇಶ ದೊಡ್ಡದು: ಶ್ರೀವತ್ಸ



ಮೈಸೂರು: ನಾನು ಎಂದಿಗೂ ದೊಡ್ಡವನೆಂಬ ಧೋರಣೆ ಇಲ್ಲ. ಪಕ್ಷದಲ್ಲಿ ಶಿಸ್ತಿನ ಸಿಪಾಯಿ ಯಾಗಿಯೇ ದುಡಿದವನು. ಪಕ್ಷ ಹೇಳಿದಂತೆ ಕಾರ್ಯ ನಿರ್ವಹಿಸುವುದು ಅಷ್ಟೇ ನನ್ನ ಜವಾಬ್ದಾರಿ ಎಂದು ಕೆಆರ್ ಕ್ಷೇತ್ರದ ಅಭ್ಯರ್ಥಿ ಟಿ.ಎಸ್. ಶ್ರೀವತ್ಸ ತಿಳಿಸಿದರು.

ಚಾಮುಂಡಿಬೆಟ್ಟದ ಪಾದದ ಬಳಿ ವಾಯುವಿಹಾರಕ್ಕೆ ಬರುವ ಮತದಾರರಲ್ಲಿ ಅವರು ಮತಯಾಚಿಸಿದರು. ಈ ವೇಳೆ ಮಾತನಾಡಿದ ಟಿ.ಎಸ್. ಶ್ರೀವತ್ಸ, ನನಗಿಂತ ಪಕ್ಷ ದೊಡ್ಡದು, ಪಕ್ಷಕ್ಕಿಂತ ದೇಶ ದೊಡ್ಡದು. ಪ್ರಧಾನಿ ಮೋದಿ ಅವರ ಮಾರ್ಗದರ್ಶನದಲ್ಲಿ 140 ಕೋಟಿ ಜನತೆ ನೆಮ್ಮದಿಯ ಬದುಕು ಸಾಗಿಸುತ್ತಿದ್ದು, ಈ ಬಾರಿ ಕೃಷ್ಣರಾಜ ಕ್ಷೇತ್ರದಲ್ಲಿ ನನಗೆ ಮತ ನೀಡುವ ಮೂಲಕ ಆಶೀರ್ವಾದ ಮಾಡುವಲ್ಲಿ ಜನತೆ ಹೆಚ್ಚಿನ ಉತ್ಸಾಹ ತೋರಿರುವುದು ಸಂತೋಷ ಎಂದರು. ಮಾಧ್ಯಮ ಸಂಚಾಲಕ ಪ್ರದೀಪ್‌ಕುಮಾರ್, ರಾಜ್ಯ ಯುವ ಮೋರ್ಚಾ ಉಪಾಧ್ಯಕ್ಷ ಜೈ ಶಂಕರ್, ಮೃಗಾಲಯ ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್, ಸುರೇಶ್, ಪಾರ್ಥ ಸಾರಥಿ, ವಾಣಿಶ್, ಕಿಶೋರ್, ಶಿವರಾಜ್, ಕೀರ್ತಿ ಉಪಸ್ಥಿತರಿದ್ದರು.

ಡಿ ನೋಟಿಫಿಕೇಷನ್ ಜಮೀನು ಮಾಜಿ ಸಿಎಂ ಪತ್ನಿಗೆ ಗಿಫ್ಟ್


ನಿಯಮ ಉಲ್ಲಂಘನೆ: ಬಿಜೆಪಿ ಆರೋಪ

ಮೈಸೂರು,ಮೇ 8(ಎಂಟಿವೈ)– ಮುಡಾದಿಂದ ಸ್ವಾಧೀನಪಡಿಸಿಕೊಂಡ ಜಮೀನನ್ನು ಡಿ ನೋಟಿಫೀಕೇಶನ್ ಮಾಡಿಸಿ, ಆ ಭೂಮಿಯನ್ನು ಖರೀದಿಸಿದವರು ಮಾಜಿ ಸಿಎಂ ಪತ್ನಿಗೆ ದಾನ ಮಾಡಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಮೈಸೂರಿನ ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಸುದ್ದಿಗೋಷ್ಠಿ ನಡೆಸಿ, ಬಡಾವಣೆ ನಿರ್ಮಿಸಲು ಮುಡಾ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಡಿ ನೋಟಿಫಿಕೇಷನ್ ಮಾಡಲಾಗಿತ್ತು. ಅದನ್ನು ಮಾಜಿ ಮುಖ್ಯಮಂತ್ರಿ ಭಾಮೈದ ಖರೀದಿಸಿ, ತನ್ನ ಸಹೋದರಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಯವರಿಗೆ ಗಿಫ್ಟ್ ರೂಪದಲ್ಲಿ ನೀಡಿದ್ದಾರೆ. ಇಲ್ಲಿ ಬಡಾವಣೆ ನಿರ್ಮಿಸಲು ಮುಡಾ ಮತ್ತೆ ಈ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಪರಿಹಾರವಾಗಿ 50:50 ಪರಿಹಾರ ಸೂತ್ರದಡಿ ವಿಜಯನಗರದಲ್ಲಿ 14 ನಿವೇಶನ ನೀಡಲಾಗಿದೆ ಎಂದು ದೂರಿದ್ದು, ಈ ಸಂಬಂಧ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಪಡೆಯಲಾದ ಕೆಲ ದಾಖಲೆಗಳು ನಮ್ಮ ಬಳಿ ಇವೆ ಎಂದು ಹೇಳಿದ್ದಾರೆ.

ಅಮೆರಿಕಾದಲ್ಲಿ ಶೂಟೌಟ್: 9 ಮಂದಿಯ ಹತ್ಯೆ

ದಲ್ಲಾಸ್: ಅಮೆರಿಕಾದ ದಲ್ಲಾಸ್‌ನಲ್ಲಿ ಶನಿವಾರ ನಡೆದ ಶೂಟೌಟ್‌ನಲ್ಲಿ ಹೈದ್ರಾಬಾದ್ ಮೂಲದ ಮಹಿಳೆ ಸೇರಿದಂತೆ 9 ಮಂದಿ ಹತ್ಯೆಯಾಗಿದ್ದಾರೆ. ದಲ್ಲಾಸ್‌ನ ಮಾಲ್‌ವೊಂದರ ಹೊರಗೆ ಬಂದೂಕುಧಾರಿಯೊಬ್ಬ ಗುಂಡು ಹಾರಿಸಿದ ನಂತರ ಹತ್ಯೆಗೀಡಾದ ಒಂಬತ್ತು ಜನರ ಪೈಕಿ ಭಾರತೀಯ ಮೂಲದ ಇಂಜಿನಿಯರ್ ಐಶ್ವರ್ಯಾ ತಾಟಿಕೊಂಡ ಕೂಡ ಒಬ್ಬರಾಗಿದ್ದಾರೆ ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ. ಖಾಸಗಿ ಕಂಪನಿಯಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿದ್ದ ತಾಟಿಕೊಂಡ ಹೈದರಾಬಾದ್‌ನ ಸರೂರ್‌ನಗರ ನಿವಾಸಿ. ಭಾರತದಿಂದ ಅಮೆರಿಕಕ್ಕೆ ತೆರಳಿದ್ದರು. 27 ವರ್ಷದ ತಾಟಿಕೊಂಡ ದಲ್ಲಾಸ್ ಹೊರವಲಯ ಅಲ್ಲೆನ್ ಪ್ರೀಮಿಯಂನ ಮಳಿಗೆಯೊಂದರಲ್ಲಿ ಶಾಪಿಂಗ್ ಮಾಡುತ್ತಿದ್ದಾಗ ಗುಂಡಿನ ದಾಳಿ ನಡೆಸಿದ್ದಾನೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.5.2023 ಮಂಗಳವಾರ, ಮಳೆ ನಕ್ಷತ್ರ: ಭರಣಿ, 28.04.2023 ರಿಂದ 10.05.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಪದ ಸಂಸ್ಕೃತಿ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ–ಉಮೇಶ್. ಎಸ್.ಎಸ್., 8.30 ಕಾಫಿ ತಿಂಡಿ–ಖ್ಯಾತ ಹಿನ್ನೆಲೆ ಗಾಯಕ ವಿಜಯ ಪ್ರಕಾಶ್ ಅವರೊಂದಿಗಿನ ಸಂದರ್ಶನದ ಆಯ್ದ ಭಾಗಗಳು ಸಂದರ್ಶಕರು –ಎಸ್.ಲಕ್ಷ್ಮೀನಾರಾಯಣ, 10.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ. ನಿರ್ದೇಶನ ಹಾಗೂ ನಿರೂಪಣಾ ಸಾಹಿತ್ಯ–ಎಸ್.ಶಂಕರ್, ನಿರ್ಮಾಣ–ಗೀತಾ ರಮಾನಂದ್, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ–ಪಿ.ಎಸ್. ರಂಜನಿ, 1.00 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 1.20 ಭಾವಗೀತೆಗಳು–ಮಂಜುಳಾ ಗುರುರಾಜ್, 3.00 ಆರ್.ಮೋಹನ್–ಕ್ಲಾರಿಯೋನೆಟ್ ವಾದನ, 4.00 ಕಥಾ ಕಾಲಕ್ಷೇಪ "ಶ್ರೀ ಸತ್ಯನಾರಾಯಣ ವ್ರತ", ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತ ದಾಸರು, 5.05 ಮಿಶ್ರ ಮಾಧುರ್ಯ, 6.55 ಕೃಷಿರಂಗ–ಕಿಸಾನ್‌ವಾಣಿ–ಹಣ್ಣಿನ ಮರಗಳ ಕೃಷಿ, ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಕೆ.ಬಿ.ಪ್ರಭೋದ್ ಅವರೊಂದಿಗೆ ಸಂದರ್ಶನ, 9.15 ಯಕ್ಷಗಾನದ ಹಾಡುಗಳು–ಪ್ರದೀಪ್‌ಕುಮಾರ್ ಗಟ್ಟಿ ಮತ್ತು ತಂಡದವರು, 9.30 ಕೆ.ಸುಧಾ–ಹಾಡುಗಾರಿಕೆ, 10.30 ಗಮಕ ವ್ಯಾಖ್ಯಾನ, ವಾಚನ–ಸುಮಾ ವಿಜಯ್, ವ್ಯಾಖ್ಯಾನ–ಶ್ರೀನಿವಾಸ್ ಫಣಿ

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ :** 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ, ಶ್ರೀ ಶಂಕರಾಚಾರ್ಯ ಸನ್ನಿಧಿಯಲ್ಲಿ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಅಲಂಕಾರಗಳು, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಬೆಳಗ್ಗೆ 8ಕ್ಕೆ ಸಹಸ್ರಮೋದಕ ಗಣಪತಿ ಹೋಮ, ಬೆಳಗ್ಗೆ 11ಕ್ಕೆ ಪೂರ್ಣಾಹುತಿ, ಸಮಜೆ 6.30ಕ್ಕೆ ಎಸ್. ಶ್ರೇಯಸ್ ಅವರಿಂದ ಹಾಡುಗಾರಿಕೆ, ರಾತ್ರಿ 9ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶೃಂಗೇರಿ ಶ್ರೀ ಶಂಕರಮಠ, ಫೋರ್ಟ್ ಮೊಹಲ್ಲಾ.

■ **ಸುರಭಿ ಗಾನಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಸಂಗೀತಾಮೃತ ವರ್ಷಿಣಿ ರಾಗಾಧಾರಿತ–ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಶ್ರೀ ಗುರುವಾದಿರಾಜರ ಪಂಚರಾತ್ರೋತ್ಸವ ವೈಭವ, ಗಾನಸಿರಿ–ವೇದಾಂತ ಲಹರಿ ವಿನೂತನ ಕಾರ್ಯಕ್ರಮ, ಸಂಜೆ 5ರಿಂದ ಕಲಾವಿದರಿಂದ ವಾದಿರಾಜ ವೈಭವ ಯಕ್ಷಗಾನ ತಾಳಮದ್ದಳೆ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ನೆಲೆ ಹಿನ್ನೆಲೆ ಹಾಗೂ ಜನಮನ ಸಾಂಸ್ಕೃತಿಕ ಸಂಘಟನೆ ಮತ್ತು ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆ:** ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ರಂಗ ಭೀಷ್ಮ ಬಿ.ವಿ.ಕಾರಂತರಂಗ, ಮಕ್ಕಳ ಲೋಕ ಬೇಸಿಗೆ ಶಿಬಿರ, ಉಪಸ್ಥಿತರು: ಹಿರಿಯ ರಂಗಕರ್ಮಿ ಪ್ರಕಾಶ್ ರೈ, ರಂಗ ನಿರ್ದೇಶಕ ಬಿ.ಸುರೇಶ್, ಸಮಾಜ ಸೇವಕ ಜವರಪ್ಪ ಅಹಿಂದ, ಶ್ರೀಮತಿ ಶೃತಿ ರಂಗ, ಕೆ.ಆರ್.ಸುಮತಿ, ಹೆಚ್.ಜನಾರ್ಧನ್, ಕೆ.ಆರ್.ಗೋಪಾಲಕೃಷ್ಣ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 5.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಮಂಗಳವಾರ 2023

ಸಂಪುಟ: 44 | ಸಂಚಿಕೆ: 23 | ಪುಟಗಳು: 12+IV

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಹಿರಂಗ ಪ್ರಚಾರಕ್ಕೆ ತೆರೆ

■ ಹೊರಗಿನವರು ಕ್ಷೇತ್ರ ತೊರೆಯಲು ಸೂಚನೆ ■ ಇನ್ನೇನಿದ್ದರೂ ಮನೆಮನೆಗೆ ಹೋಗಿ ಮನವೊಲಿಕೆ ■ ಮೇ 11ರ ಮುಂಜಾನೆವರೆಗೂ ಮದ್ಯ ಮಾರಾಟ ನಿಷಿದ್ಧ



ಬೆಂಗಳೂರು, ಮೇ8(ಕೆಎಂಶಿ)– ರಾಜ್ಯದ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿದ್ದು, ಕ್ಷೇತ್ರವಲ್ಲದ ಅಭ್ಯರ್ಥಿಗಳು ಮತ್ತು ಕಾರ್ಯಕರ್ತರು ಕ್ಷೇತ್ರ ತೊರೆಯುವಂತೆ ಆಯೋಗ ಸೂಚಿಸಿದೆ.

ಮೇ 10 ರಂದು ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಬಹಿರಂಗ ಪ್ರಚಾರಕ್ಕೆ ತೆರೆ ಎಳೆದಿರುವುದಲ್ಲದೆ, ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಮೇ 11 ಮುಂಜಾನೆಯವರೆಗೂ ಮದ್ಯ ಮಾರಾಟ ನಿಷೇಧಿಸಲಾಗಿದೆ. ಕಂದಾಯ ಸಚಿವ ಆರ್. ಅಶೋಕ್, ವಸತಿ ಸಚಿವ ವಿ.ಸೋಮಣ್ಣ ಸೇರಿದಂತೆ ಸುಮಾರು 35ಕ್ಕೂ ಹೆಚ್ಚು ಅಭ್ಯರ್ಥಿಗಳು ಮತ ಪಟ್ಟಿಯಲ್ಲಿ ಇಲ್ಲದ ಕ್ಷೇತ್ರಗಳಲ್ಲಿ ಕಣಕ್ಕಿಳಿದಿದ್ದಾರೆ. ಅವರೂ ಕೂಡ ಆ ಕ್ಷೇತ್ರಗಳಲ್ಲಿ ಉಳಿಯುವಂತಿಲ್ಲ. ಮಂಗಳವಾರ ಅಭ್ಯರ್ಥಿಗಳು ಮನೆ ಮನೆಗೆ ಹೋಗಿ ಮತಯಾಚಿಸಲು ಅವಕಾಶವಿದೆಯೇ ಹೊರತು, ಬಹಿರಂಗವಾಗಿ ಪ್ರಚಾರ ಅಥವಾ ಸಭೆಗಳನ್ನು ನಡೆಸಲು ಅವಕಾಶವಿರುವುದಿಲ್ಲ. ಮೇ 10ರಂದು ಬೆಳಗ್ಗೆ 7ಗಂಟೆಯಿಂದ ಸಂಜೆ 6 ಗಂಟೆಯವರೆಗೆ ರಾಜ್ಯದ 224 ಕ್ಷೇತ್ರಗಳಲ್ಲಿ ಏಕಕಾಲಕ್ಕೆ ಮತದಾನ ನಡೆಯಲಿದೆ. ಎಡಗೈ ತೋರು ಬೆರಳಿಗೆ ಶಾಹಿಹಾಕಲಾಗುತ್ತದೆ.

ಬಹಿರಂಗ ಪ್ರಚಾರದ ಅವಧಿ ಮುಗಿಯುತ್ತಿದ್ದಂತೆ ನಿಷೇಧಾಜ್ಞೆ ಜಾರಿಯಾಗಲಿದೆ. ಅಭ್ಯರ್ಥಿಗಳ ಚುನಾವಣಾ ಪ್ರಚಾರದಲ್ಲಿ ನಿರತರಾಗಿರುವ ತಾರಾ ಪ್ರಚಾರಕರು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಕ್ಷೇತ್ರ ಬಿಟ್ಟು ತೆರಳಬೇಕಾಗಿದೆ. ಪ್ರಧಾನಿ ಮೋದಿ ಅವರ ವರ್ಚಸ್ಸಿನ ಮೂಲಕವೇ ಕರ್ನಾಟಕದಲ್ಲಿ ಪುನಃ

● 6ನೇ ಪುಟಕ್ಕೆ

ರಾಜ್ಯದಾದ್ಯಂತ 2615 ಮಂದಿ ಕಣದಲ್ಲಿ

ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಮಾಹಿತಿ ಪ್ರಕಾರ 224 ಕ್ಷೇತ್ರಗಳಲ್ಲಿ 2430 ಪುರುಷರು, 184 ಮಹಿಳೆಯರು, ಒಬ್ಬರು ತೃತೀಯಲಿಂಗಿ ಸೇರಿದಂತೆ ಒಟ್ಟು 2615 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಬಿಜೆಪಿ –224, ಕಾಂಗ್ರೆಸ್–223, ಜೆಡಿಎಸ್–209, ಆಮ್ ಆದ್ಮಿ ಪಾರ್ಟಿ–209, ಸಿಪಿಐ (ಎಂ)–4,ಬಹುಜನ ಸಮಾಜ ಪಾರ್ಟಿ–133, ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ನೋಂದಾಯಿತ, ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಂದ 254 ಹಾಗೂ 918 ಸ್ವತಂತ್ರ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಇನ್ನು ಮನೆಮನೆ ಪ್ರಚಾರ


● ಮನೆ ಮನೆಗೆ ತೆರಳಿ 5 ಮಂದಿ ಮಾತ್ರ ಮತಯಾಚನೆಗೆ ಅವಕಾಶ ● ನಾಳೆ ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ● ಮೈಸೂರು ಜಿಲ್ಲೆಯಲ್ಲಿ 13,38,637 ಮಹಿಳೆಯರು ಸೇರಿ 26,55,988 ಮತದಾರರು ● ಇಂದು ಬೆಳಗ್ಗೆ 8 ಗಂಟೆಯಿಂದ 11 ಕ್ಷೇತ್ರಗಳ ಸ್ಟ್ರಾಂಗ್ ರೂಂಗಳಲ್ಲಿ ಮಸ್ಟರಿಂಗ್ ● ಜಿಲ್ಲೆಯ 11 ಕ್ಷೇತ್ರಗಳಲ್ಲಿ ಒಟ್ಟು 143 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ

ಮೈಸೂರು, ಮೇ 8(ಆರ್‌ಕೆ)– ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಬಹಿರಂಗ ಪ್ರಚಾರ ಇಂದು ಸಂಜೆ 6 ಗಂಟೆಗೆ ಅಂತ್ಯಗೊಂಡಿತು. ಕಳೆದ ಹಲವು ದಿನಗಳಿಂದ ಅಭ್ಯರ್ಥಿಗಳು, ಪಕ್ಷದ ನಾಯಕರು, ಬೆಂಬಲಿಗರು ನಡೆಸುತ್ತಿದ್ದ ಬಹಿರಂಗ ಪ್ರಚಾರ ಸಭೆ, ರೋಡ್ ಶೋ, ರ್‍ಯಾಲಿ, ಧ್ವನಿವರ್ಧಕಗಳ ಚುನಾವಣಾ ಪ್ರಚಾರಕ್ಕೆ ಸಂಜೆ ತೆರೆ ಬಿದ್ದಿದ್ದು, ಸಂಜೆ 6 ಗಂಟೆ ನಂತರ ಸೆಕ್ಷನ್ 144 ರೀತ್ಯಾ ಮೈಸೂರು ಜಿಲ್ಲೆಯಾದ್ಯಂತ ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಮನೆ ಮನೆಗೆ ತೆರಳಿ 5 ಮಂದಿ ಮತಯಾಚನೆಗೆ ಅವಕಾಶವಿರುತ್ತದೆ.

ಮೇ 10ರಂದು ಮತದಾನ: ಬುಧವಾರ (ಮೇ 10) ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದ್ದು, ಮೇ 13ರಂದು ಮೈಸೂರಿನ ವಾಲ್ಮೀಕಿ ರಸ್ತೆಯ ಮಹಾರಾಣಿ ಸರ್ಕಾರಿ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್ ಮಹಿಳಾ ಕಾಲೇಜು ಕೇಂದ್ರದಲ್ಲಿ ಮತ ಎಣಿಕೆ ನಡೆಯಲಿದೆ.

● 8ನೇ ಪುಟಕ್ಕೆ

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ನಾಳೆ ಬೆಳಗಾದರೆ ಯಾರ ನೆನೆಯಲಿ ನಾನು?
ಮತದಾರನ ಧರ್ಮಸಂಕಟ

■ ಪುಟ–4

ಈ ಬಾರಿ SSLC ಫಲಿತಾಂಶ ಕುಸಿತ

● ಶೇ.83.89ರಷ್ಟು ತೇರ್ಗಡೆ; ಬಾಲಕಿಯರೇ ಮೇಲುಗೈ ● ಕಳೆದ ಬಾರಿ ಶೇ.85.13 ಫಲಿತಾಂಶ ಬಂದಿತ್ತು; ಈ ಸಲ ಶೇ.1.24ರಷ್ಟು ಕಡಿತ ● ಚಿತ್ರದುರ್ಗ, ಮಂಡ್ಯ, ಹಾಸನಕ್ಕೆ ಮೊದಲ ಮೂರು, ಯಾದಗಿರಿಗೆ ಕೊನೆ ಸ್ಥಾನ ● ನಾಲ್ವರು ವಿದ್ಯಾರ್ಥಿಗಳು ಪೂರ್ಣಾಂಕದೊಂದಿಗೆ ತೇರ್ಗಡೆ ● 1517 ಸರ್ಕಾರಿ, 482 ಅನುದಾನಿತ, 1824 ಅನುದಾನ ರಹಿತ ಶಾಲೆಗಳಿಗೆ 100ಕ್ಕೆ ನೂರರಷ್ಟು ಫಲಿತಾಂಶ ● ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಕಡೇ ದಿನಾಂಕ ಮೇ 15


ಭೂಮಿಕಾ ಪೈ


ಅನುಪಮಾ ಶ್ರೀಶೈಲ


ಯಶಸ್‌ಗೌಡ


ಭೀಮನಗೌಡ

ಬೆಂಗಳೂರು, ಮೇ 8(ಕೆಎಂಶಿ)–ಕಳೆದ ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಂಡಿದ್ದು, ಈ ಬಾರಿ ಶೇ. 83.89ರಷ್ಟು ತೇರ್ಗಡೆ ಹೊಂದಿದ್ದಾರೆ. ಪದವಿ ಪೂರ್ವ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ದಾಖಲೆ ಪ್ರಮಾಣದಲ್ಲಿ ತೇರ್ಗಡೆಗೊಂಡು ಇತಿಹಾಸ ನಿರ್ಮಿಸಿದ್ದರೆ, ಎಸ್‌ಎಸ್‌ಎಲ್‌ಸಿಯಲ್ಲಿ ವಿದ್ಯಾರ್ಥಿಗಳು ಕಳೆದ ಬಾರಿಗಿಂತ ಕಡಿಮೆ ಪ್ರಮಾಣದಲ್ಲಿ ಉತ್ತೀರ್ಣರಾಗಿದ್ದಾರೆ. ಕಳೆದ ಬಾರಿ 85.13ರಷ್ಟು ಫಲಿತಾಂಶ ಬಂದಿತ್ತು. ಈ ಬಾರಿ 1.24 ರಷ್ಟು ಇಳಿಕೆಯಾಗಿದೆ. ಬಾಲಕೀಯರೇ ಮೇಲುಗೈ ಸಾಧಿಸಿದ್ದು, ನಾಲ್ಕು ಗ್ರಾಮೀಣ ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದು, ಮೊದಲ ಸ್ಥಾನ ಗಳಿಸಿದ್ದಾರೆ.

ಬೆಂಗಳೂರಿನ ನ್ಯೂ ಮೆಕಾಲ ಇಂಗ್ಲೀಷ್ ಸ್ಕೂಲ್‌ನ ವಿದ್ಯಾರ್ಥಿನಿ ಭೂಮಿಕಾ ಪೈ, ಚಿಕ್ಕಬಳ್ಳಾಪುರದ ಬಾಲಗಂಗಾಧರನಾಥ ಹೈಸ್ಕೂಲ್‌ನ ವಿದ್ಯಾರ್ಥಿ ಯಶಸ್‌ಗೌಡ, ಬೆಳಗಾವಿ ಜಿಲ್ಲೆಯ ಸವದತ್ತಿಯ ಕುಮಾರೇಶ್ವರ ಶಾಲೆಯ ವಿದ್ಯಾರ್ಥಿನಿ ಅನುಪಮಾ ಶ್ರೀಶೈಲ ಹಾಗೂ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಆಕ್ಸ್‌ಫರ್ಡ್ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿ ಭೀಮನಗೌಡ ಹನುಮಂತಗೌಡ ಪಾಟೀಲ್ ಅವರು 100ಕ್ಕೆ 100 ಅಂಕ ಪಡೆದಿದ್ದಾರೆ. ಕಳೆದ ಸಾಲಿನಲ್ಲಿ 145 ವಿದ್ಯಾರ್ಥಿಗಳು ಪೂರ್ಣ ಪ್ರಮಾಣದ ಅಂಕ ಗಳಿಸಿ, ಮೊದಲ ಸ್ಥಾನಕ್ಕೆ ಭಾಜನರಾಗಿದ್ದರು. ಜಿಲ್ಲಾವಾರು ಫಲಿತಾಂಶದಲ್ಲಿ ಚಿತ್ರದುರ್ಗ (96.8%) ಮೊದಲ ಸ್ಥಾನದಲ್ಲಿದ್ದರೆ, ಮಂಡ್ಯ (96.74%),

● 8ನೇ ಪುಟಕ್ಕೆ

ಮೇ 20, 21ರಂದು ಸಿಇಟಿ

ಬೆಂಗಳೂರು, ಮೇ 8– ಎಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರ್ನರಿ, ಬಿ.ಎಸ್ಸಿ (ನರ್ಸಿಂಗ್) ಮುಂತಾದ ವೃತ್ತಿಪರ ಕೋರ್ಸುಗಳಿಗೆ ಮೇ 20 ಮತ್ತು 21ರಂದು ಸಿಇಟಿ ಪರೀಕ್ಷೆ ನಡೆಯಲಿದ್ದು, ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inಗೆ ಹೋಗಿ, ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ರಮ್ಯಾ ಅವರು ಸೋಮವಾರ ಪತ್ರಿಕಾ ಪ್ರಕಟಣೆ ಮೂಲಕ ಈ ವಿಷಯ ತಿಳಿಸಿದ್ದು, ಅಭ್ಯರ್ಥಿಗಳು ಸಿಇಟಿ ಸಂಬಂಧ ನೀಡಿರುವ ಸೂಚನೆಗಳನ್ನು ಕೂಡ ಸರಿಯಾಗಿ ಪಾಲಿಸಬೇಕು ಎಂದಿದ್ದಾರೆ. ಜತೆಗೆ, ಗಡಿನಾಡು ಮತ್ತು ಹೊರನಾಡು ಕನ್ನಡ ವಿದ್ಯಾರ್ಥಿಗಳಿಗೆ ಮೇ 22ರಂದು ಕನ್ನಡ ಪರೀಕ್ಷೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮೈಸೂರು ಜಿಲ್ಲೆಗೆ 16ನೇ ಸ್ಥಾನ

ವಿಜಯ ವಿಠಲ ಶಾಲೆಯ ಅನಘ ಟಾಪರ್, ಅಜಯ್, ಅರ್ಜುನ್, ರಕ್ಷಾಗೆ 621 ಅಂಕ

“ದಿನಕ್ಕೆ 4–5 ಗಂಟೆ ಓದುತ್ತಿದ್ದೆ. ಶಾಲೆಯಲ್ಲಿನ ಕಲಿಕೆಯೊಂದಿಗೆ ಮನೆ ಪಾಠಕ್ಕೂ ಹೋಗುತ್ತಿದ್ದೆ. 623 ಅಂಕ ಬಂದೇ ಬರುತ್ತದೆ ಎಂದು ನನಗೆ ವಿಶ್ವಾಸವಿತ್ತು. ನಾನು ಮೈಸೂರಿಗೆ ಟಾಪರ್ ಎಂದು ತಿಳಿದು ತಂದೆ ಶ್ರೀನಿವಾಸ್ ಕಾರ್ನಿಸ್ ಹಾಗೂ ತಾಯಿ ವಾಣಿ ಅವರಿಗೆ ತುಂಬಾ ಸಂತೋಷವಾಗಿದೆ. ಎಸ್‌ಬಿಐನಲ್ಲಿ ಕೆಲಸ ಮಾಡುತ್ತಾರೆ. ಮುಂದೆ ನಾನು ಆಸ್ಟ್ರೋ ಫಿಸಿಕ್ಸ್ ಓದಬೇಕೆಂಬ ಆಸೆ ಇದೆ.

–ಅನಘ ಎಸ್.ಕಾರ್ನಿಕ್ಸ್,
ವಿಜಯ ವಿಠಲ ಶಾಲೆಯ ವಿದ್ಯಾರ್ಥಿನಿ



ಮೈಸೂರು, ಮೇ 8(ಎಂಟಿವೈ)– ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ಮೈಸೂರು ಜಿಲ್ಲೆಯ ಫಲಿತಾಂಶ ರಾಜ್ಯದಲ್ಲಿ 16ನೇ ಸ್ಥಾನ ಪಡೆದುಕೊಂಡಿದೆ ಶೇ.89.75ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಅನಘ 623 ಅಂಕ ಹಾಗೂ ಮೂವರು ವಿದ್ಯಾರ್ಥಿಗಳು 621 ಅಂಕ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಪ್ರೌಢಶಾಲೆಯ ವಿದ್ಯಾರ್ಥಿನಿ ಅನಘ ಎಸ್ ಕಾರ್ನಿಸ್ 625ಕ್ಕೆ 623 ಅಂಕ ಪಡೆದು ಜಿಲ್ಲೆಗೆ ಟಾಪರ್ ಎನಿಸಿದ್ದರೆ, ಯರಗನಹಳ್ಳಿಯ ಸರ್ಕಾರಿ ಶಾಲೆಯ ವಿದ್ಯಾರ್ಥಿ ಎಸ್.ಅಜಯ್ 621, ಸದ್ವಿದ್ಯಾ ಶಾಲೆಯ ಎಂ.ಆರ್.ಅರ್ಜುನ್ 621, ಐಡಿಯಲ್ ಜಾವ ರೋಟರಿ ಶಾಲೆಯ ಎನ್.ರಕ್ಷ 621 ಅಂಕ ಪಡೆದು ಗಮನ ಸೆಳೆದಿದ್ದಾರೆ. ಜಿಲ್ಲೆಯ ಫಲಿತಾಂಶ ಕಳೆದ ಬಾರಿಗಿಂತ ಶೇ.1.63 ರಷ್ಟು ಕುಸಿತ ಕಂಡಿದೆ. 2021–22ನೇ ಸಾಲಿನಲ್ಲಿ 91.38 ರಷ್ಟಾಗಿತ್ತು. 2020–21ನೇ ಸಾಲಿನಲ್ಲಿ ಕೊರೊನಾ ಹಿನ್ನೆಲೆಯಲ್ಲಿ ನೂರಕ್ಕೆ ನೂರರಷ್ಟು ಫಲಿತಾಂಶ ಪ್ರಕಟಿಸಲಾಗಿತ್ತು.


ಎನ್.ರಕ್ಷಾ–621
ಐಡಿಯಲ್ ಜಾವಾ ರೋಟರಿ ಶಾಲೆ


ಅಜಯ್–621
ಯರಗನಹಳ್ಳಿ ಸರ್ಕಾರಿ ಶಾಲೆ

2019–20ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟಾರೆ ಫಲಿತಾಂಶ ಶೇ.74.45ರಷ್ಟು ಬಂದಿತ್ತು. ರಾಜ್ಯ ಪಟ್ಟಿಯಲ್ಲಿ ಜಿಲ್ಲೆ 16ನೇ ಸ್ಥಾನ ಪಡೆದುಕೊಂಡಿದೆ. ಮಂಡ್ಯ 2, ಹಾಸನ 3, ಚಾಮರಾಜನಗರ 7ನೇ ಸ್ಥಾನ ಗಳಿಸಿದೆ. ಆದರೆ ಮೈಸೂರು ಜಿಲ್ಲೆಯ ಫಲಿತಾಂಶ ತೀವ್ರತರವಾಗಿ ಕುಸಿತ ಕಂಡಿದೆ. ಆದರೂ ಜಿಲ್ಲೆಯು ಎ+ ಪಡೆದುಕೊಂಡಿದೆ.

31,615 ವಿದ್ಯಾರ್ಥಿಗಳು ಪಾಸ್: ಪರೀಕ್ಷೆ ಬರೆದ 34,991 ಹೊಸ ವಿದ್ಯಾರ್ಥಿಗಳಲ್ಲಿ

● 8ನೇ ಪುಟಕ್ಕೆ

ವಿಧಾನಸಭಾ ಚುನಾವಣೆ 2023
ಕ್ಷಣಗಣನೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಒಂದು ಪುಟ್ಟ ಜಗಳದ ನಂತರ, ಗಂಡನಿಗೆ) ನಿಮ್ಮನ್ನು ಮದುವೆಯಾದ ನಾನು ಮೂರ್ಖಳು.

ಗಂಡ : ಹೌದು ಡಿಯರ್, ನಿನ್ನನ್ನು ಪ್ರೀತಿಸುವ ಭರದಲ್ಲಿ ನಾನಿದನ್ನು ಗಮನಿಸಲೇ ಇಲ್ಲ!

ಮೈಸೂರು ಮಿತ್ರ
ಮಂಗಳವಾರ, 9 ಮೇ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇನ್ನೊಬ್ಬರ ಮಾತು-ಕೃತಿಗಳಿಂದ ನೋವು ಅನುಭವಿಸುವುದು ನಿಮಗೆ ಸಾಧ್ಯವಿಲ್ಲ ಎಂದಾದರೆ, ನಿಮ್ಮ ಮಾತು-ಕೃತಿಗಳು ಇನ್ನೊಬ್ಬನನ್ನು ನೋಯಿಸದಂತೆ ನೋಡಿಕೊಳ್ಳಿ. –ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಾಟಿ ರಾಗವಾದರೂ ಪಾಠವಿಲ್ಲದೆ ಬಾರದು

ನಿಮ್ಮ ಪತ್ರಗಳು

ಪಾರ್ಕುಗಳಲ್ಲಿ ಪ್ರವೇಶ ಸಮಯದಿಂದ ತೊಂದರೆ

ಮಾನ್ಯರೆ,

ಮೈಸೂರು ನಗರ ಉದ್ಯಾನಗಳಿಂದ ಕೂಡಿದ ಸುಂದರ ಹಸಿರು ನಗರಿ. ಎಲ್ಲಾ ಬಡಾವಣೆಗಳಲ್ಲಿ ದೊಡ್ಡದು-ಚಿಕ್ಕದು ಎಂದು ಹಲವು ನಮೂನೆಯ ಉದ್ಯಾನವನಗಳಿವೆ. ನೆರಳು ನೀಡುವ ಬೃಹತ್ ಮರಗಳು, ಕುಳಿತುಕೊಳ್ಳಲು ಆಸನ, ಮಕ್ಕಳಿಗೆ ಆಟವಾಡಲು, ದೊಡ್ಡವರಿಗೆ ವ್ಯಾಯಾಮ ಮಾಡಲು ಅನುಕೂಲವಾಗುವಂತೆ ಪಾರ್ಕುಗಳನ್ನು ವಿನ್ಯಾಸಗೊಳಿಸಲಾಗಿದೆ.

ಆದರೆ ವಿಷಾದಕರ ಸಂಗತಿಯೆಂದರೆ, ಕೆಲವು ಬಡಾವಣೆಗಳಲ್ಲಿ ಪಾರ್ಕುಗಳಿಗೆ ಸಮಯ ನಿಗದಿ ಮಾಡಲಾಗಿದೆ. ಬೆಳಗ್ಗೆ 6.30, 7 ರಿಂದ 10, ಸಂಜೆ 4 ರಿಂದ 8 ಹೀಗೆ. ಇದರಿಂದ ಬಹುತೇಕ ಉದ್ಯೋಗಸ್ಥ ಜನರಿಗೆ ಅದರಲ್ಲೂ ಪ್ರಚಾರ ವೃತ್ತಿಯವರು (ಮಾರ್ಕೆಟಿಂಗ್) ಹಾಗೂ ಹೊರಗಡೆ ದುಡಿಯುವ ಇನ್ನಿತರ ವೃತ್ತಿಯವರಿಗೆ (ಚಾಲಕರು, ಡೆಲಿವರಿ ಹುಡುಗರು) ಈ ಸಮಯ ಪಾಲನೆಯಿಂದ ಬಹಳ ಅನಾನುಕೂಲವಾಗಿದೆ. ಬಿಸಿಲಿನ ಶಾಖದಿಂದ ವಿರಾಮ ತೆಗೆದುಕೊಳ್ಳಲು ಬಯಸುವ ಈ ಬಡಪಾಯಿಗಳನ್ನು ಪಾರ್ಕಿನ ಕಾವಲುಗಾರರು ಒಳಗೆ ಸೇರಿಸುವುದಿಲ್ಲ. ಕಾರಣ ಕೇಳಿದರೆ, ಪಾರ್ಕಿನ ನಿರ್ವಹಣೆ ಹೊತ್ತ ಕಮಿಟಿಯವರು ಅವಕಾಶ ನೀಡುವುದಿಲ್ಲ ಎಂದು ಹೇಳುತ್ತಾರೆ. ಈ ಕಮಿಟಿಯಲ್ಲಿ ಬಹುತೇಕರು ನಿವೃತ್ತರು ಅಥವಾ ಉದ್ಯಮಿಗಳೇ ಆಗಿರುತ್ತಾರೆ. ಅವರವರ ಮನೆಗಳಲ್ಲಿ, ಕಾರುಗಳಲ್ಲಿ ಎಸಿ ಇರುತ್ತದೆ. ಆದರೆ ದ್ವಿಚಕ್ರ ವಾಹನಗಳಲ್ಲಿ ಓಡಾಡುವ ಸಾಮಾನ್ಯ ಜನರ ಪಾಡೇನು? ಉದ್ಯಾನಗಳಿರುವುದು ವಿಶ್ರಾಂತಿ, ಮನಃಶಾಂತಿ ಪಡೆಯಲು. ಅದಕ್ಕೇ ಅವಕಾಶ ಇಲ್ಲ ಎಂದರೆ ಹೇಗೆ? ಎಷ್ಟೋ ಜನರು ಪಾರ್ಕಿನ ಕಾಂಪೌಂಡ್ ಪಕ್ಕ ನಿಂತುಕೊಂಡು ಮನೆಯಿಂದ ತಂದ ಉಪಾಹಾರವನ್ನು ಸೇವಿಸುತ್ತಾರೆ. ಇದನ್ನೆಲ್ಲಾ ನೋಡುವಾಗ ಮನಸ್ಸಿಗೆ ಬೇಜಾರಾಗುತ್ತದೆ.

ಪ್ರೇಮಿಗಳು ಕಂಡು ಬಂದರೆ ಪಾರ್ಕಿನಲ್ಲಿ ಹುಟ್ಟುಹಬ್ಬ ಇನ್ನಿತರ ಪಾರ್ಟಿಗಳನ್ನು ಮಾಡುತ್ತಾ ಸ್ವಚ್ಛತೆಗೆ ಧಕ್ಕೆ ತಂದರೆ, ಗುಂಪು ಕಟ್ಟಿಕೊಂಡು ವಿಕೃತವಾಗಿ ಹುಚ್ಚಾಟ ಆಡುತ್ತಿದ್ದರೆ ಇಂತಹವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಿ. ಇದಕ್ಕೆ ಸಂಬಂಧಿಸಿದಂತೆ ಸೂಚನಾ ಫಲಕಗಳನ್ನು ದೊಡ್ಡದಾಗಿ ಪಾರ್ಕಿನ ನಾಲ್ಕು ಮೂಲೆಗಳಲ್ಲೂ ಹಾಕಲಿ. ಅದು ಬಿಟ್ಟು ಸಾಮಾನ್ಯರಿಗೆ ಕುಳಿತುಕೊಳ್ಳಲು ಅವಕಾಶ ನೀಡುವುದಿಲ್ಲ ಎಂದರೆ ಹೇಗೆ. ಸಂಬಂಧಪಟ್ಟ ಅಧಿಕಾರಿಗಳು, ವಾರ್ಡಿನ ಪಾಲಿಕೆ ಸದಸ್ಯರು, ಸಂಘ ಸಂಸ್ಥೆಗಳು ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ದರ್ಶನ್, ಲಕ್ಷ್ಮೀಕಾಂತನಗರ, ಮೈಸೂರು.

ಮತದಾನ

ಮಾನ್ಯರೆ,

ಸಂವಿಧಾನವು ಪ್ರಜೆಗಳಿಗಾಗಿ ನೀಡಿದ ಹಕ್ಕು ಈ ಮತ
ಪ್ರಜೆಗಳೇ ತಮ್ಮ ನಾಯಕನನ್ನು ಚುನಾಯಿಸುವ ಈ ಮತ
ಆಸೆ ಆಮಿಷಗಳನ್ನು ಒಡ್ಡಿ ಅಭ್ಯರ್ಥಿಯು ಬೇಡುವ ಈ ಮತ
ಐದು ವರ್ಷಕ್ಕೊಮ್ಮೆ ತಮ್ಮ ಶಕ್ತಿಯನ್ನು ತೋರ್ಪಡಿಸುವ ಈ ಮತ
ಜನತೆಯು ಸದುಪಯೋಗ ಮಾಡಿಕೊಳ್ಳಬೇಕು ಈ ಮತ ಶಕ್ತಿಯನ್ನು
ಕಾಟಾಚಾರದ ಚುನಾವಣೆಯಾಗದೆ ತಮ್ಮ ಅಳಲನು ನೀಗಿಸಬೇಕು ಈ ಶಕ್ತಿ
ಸೂಕ್ತ ನಾಯಕನ ಆಯ್ಕೆ ಮಾಡಲು ದೇವರು ವರ ಕರುಣಿಸಿದ ಹಾಗೇ ಈ ಮತ ಶಕ್ತಿ
ಬನ್ನಿ ಎಲ್ಲರೂ ಒಮ್ಮತವಾಗಿ ಸಹೃದಯಿ ದಕ್ಷ ನಾಯಕನ
ಆಯ್ಕೆಗೆ ಮತಗಟ್ಟೆಗೆ ಸಾಗೋಣ.

– ಅನಿಲ್ ರಾಜ, ಸಹಶಿಕ್ಷಕ, ಗೀತಾ ಭಾರತಿ ಶಾಲೆ, ಮೈಸೂರು

ಗೆದ್ದ ಪಕ್ಷಗಳು ಪ್ರಣಾಳಿಕೆಯ ಭರವಸೆಯನ್ನು ಈಡೇರಿಸಲಿ

ಮಾನ್ಯರೆ,

2023 ರ ಕರ್ನಾಟಕ ರಾಜ್ಯ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಮುಖ ಪಕ್ಷಗಳು ಜನ ಸಾಮಾನ್ಯರ ನಿರೀಕ್ಷೆಗೂ ಮೀರಿದಂತೆ ಪ್ರಣಾಳಿಕೆಯಲ್ಲಿ ಭರವಸೆಯನ್ನು ಮತದಾರರಿಗೆ ನೀಡುತ್ತಿವೆ. ಆದರೆ ಇಲ್ಲಿಯ ತನಕ ಗೆದ್ದಂತಹ ಪಕ್ಷಗಳು ಪೂರ್ಣ ಪ್ರಮಾಣದಲ್ಲಿ ತಾವು ನೀಡಿದಂತಹ ಭರವಸೆಯನ್ನು ಈಡೇರಿಸಲು ಸಾಧ್ಯವಾಗಿಲ್ಲ. ಇಲ್ಲ ಮುಂದಾಗಿಲ್ಲ.

ಈ ಬಾರಿ ಎಲ್ಲಾ ಪಕ್ಷಗಳ ಪ್ರಣಾಳಿಕೆಯ ಭರವಸೆಯ ದೊಡ್ಡ ಗಾತ್ರವೇ ಇದೆ. 200 ಯುನಿಟ್ ವಿದ್ಯುತ್ ಉಚಿತ, 10 ಕೆಜಿ ಅಕ್ಕಿ ಭಾಗ್ಯ, ಪದವೀಧರರಿಗೆ ಪ್ರತಿ ತಿಂಗಳು 3000 ರೂ. ನಿರುದ್ಯೋಗ ಭತ್ಯೆ, ಗೃಹಲಕ್ಷ್ಮಿಯಡಿ ಮಹಿಳೆಯರಿಗೆ ತಿಂಗಳು 2000 ರೂ. ಹಾಗೂ ಉಚಿತ ಬಸ್ ಪಾಸ್, ಬಿಪಿಎಲ್ ಪಡಿತರ ಕಾರ್ಡ್‌ಗೆ 3 ಸಿಲಿಂಡರ್ ಉಚಿತ, ಪ್ರತಿದಿನ ಅರ್ಧ ಲೀಟರ್ ನಂದಿನಿ ಹಾಲು ಉಚಿತ, ಅನ್ನ ಶ್ರೀ ಯೋಜನೆ, ಎಸ್‌ಸಿ, ಎಸ್‌ಟಿ ಮಹಿಳೆಯರಿಗೆ ಐದು ವರ್ಷಕ್ಕೆ 10 ಸಾವಿರ ಠೇವಣಿ, ಶಿಕ್ಷಣ ಆಧುನಿಕ ಶಕ್ತಿಯ ಪ್ರೌಢಶಾಲಾ ಮಕ್ಕಳಿಗೆ ಸೈಕಲ್, ಆರ್ಥಿಕವಾಗಿ ಹಿಂದುಳಿದ 18 ವರ್ಷದ ವಿದ್ಯಾರ್ಥಿನಿಯರಿಗೆ ವಿದ್ಯುತ್ ಚಾಲಿತ ಉಚಿತ ಮೊಪೆಡ್ ಸ್ಕೂಟರ್, ಹಿಂದುಳಿದ ಪದವೀಧರರಿಗೆ, ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಉಚಿತ ಪ್ರವೇಶ. ಹೀಗೆ ಇನ್ನೂ ಅನೇಕ ಭರವಸೆಗಳನ್ನು ಕೊಟ್ಟಿದ್ದಾರೆ. ಈಗಲಾದರೂ, ಯಾವುದೇ ಪಕ್ಷ ಗೆದ್ದು ಬಂದರು ಸರಿ ತಾವು ಹೊರಡಿಸಿರುವ ಪ್ರಣಾಳಿಕೆಯ ಭರವಸೆಯನ್ನು ಕಾರ್ಯರೂಪಕ್ಕೆ ತಂದು ಜನ ಸಾಮಾನ್ಯರ ನಂಬಿಕೆಯನ್ನು ಗಟ್ಟಿಗೊಳಿಸಿ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು


(ಆತ್ಮ)ಕಥೆ

ಮಾನ್ಯರೆ,

ಅನೇಕ ದೊಡ್ಡ ದೊಡ್ಡವರು ಕೂಡ ಆತ್ಮಕಥೆ ಬರೆದಿದ್ದಾರೆ (ಬರೆಯುತ್ತಾರೆ). ಸ್ವಾರಸ್ಯವೆಂದರೆ ಅವರು ಬರೆದಿರುವುದೆಲ್ಲ, ಬರೆಯುವುದೆಲ್ಲ ನಿಸ್ಸಂದೇಹವಾಗಿ ಪ್ರಾಮಾಣಿಕ; ಆದರೆ ಅವರು ಎಲ್ಲವನ್ನೂ ಬರೆಯದೆ, ಎಷ್ಟೋ ವಿಷಯಗಳನ್ನು ಬಿಡುತ್ತಾರೆ (ಪ್ರಾಮಾಣಿಕವಾಗಿ ಹೇಳಿಕೊಳ್ಳಲಾರದ್ದಕ್ಕೆ!) ಈ ಲೋಪ ಅನಿವಾರ್ಯ ಕೂಡ; ಎಂದ ಮೇಲೆ ಬರೆಯುವುದೇ ಬೇಡ! ಇನ್ನು ಕೆಲವರು ಬರೆಯುವುದೆಲ್ಲ ಅನಾತ್ಮ ಕಥೆ; ಅನಾಥ(ಪ್ರಜ್ಞೆಯ) ಕಥೆ!

ಕವಿತೆ : ಎಲ್ಲೆಡೆ ಕವಿಗೋಷ್ಠಿಗಳ ಭರಾಟೆ; ಸಭಾಂಗಣಗಳಲ್ಲಿ ಬೆಳಗು, ಬೆಡಗು, ಬೆರಗು! ಆದರೆ ವಾಸ್ತವ ಜೀವನ ನಿಸ್ತೇಜ; ಬರಿಯ (ಕೆಟ್ಟ) ಮಾತೆ! ವಾಣಿ, ಮಾತನ್ನೆಲ್ಲ ಕವಿತೆಯಾಗಿಸು, ಮಾತೆ(ಯೆ)!

– ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ನಾಳೆ ಬೆಳಗಾದರೆ ಯಾರ ನೆನೆಯಲಿ ನಾನು? ಮತದಾರನ ಧರ್ಮಸಂಕಟ



ಮತದಾನ ಮಾಡುತ್ತಿರುವ 104 ವರ್ಷದ ಉಡುಪಿಯ ವಿದ್ವಾನ್ ಶ್ರೀ ಕೃಷ್ಣ ಭಟ್





ನಿನ್ನೆಯಿಂದ ನನ್ನ ಮನಸ್ಸು ನಮ್ಮ ಕರ್ನಾಟಕದ ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ವಿಷಯದಲ್ಲಿ ಒಂದು ರೀತಿಯ ಗೊಂದಲಕ್ಕೆ ಒಳಗಾಗಿದೆ. ಹೇಳಬೇಕೆಂದರೆ ಬಹುಶಃ ಎಲ್ಲಾ ಮತದಾರರು ಈ ರೀತಿಯ ಧರ್ಮಸಂಕಟ ಇಲ್ಲವೇ ಗೊಂದಲಮಯ ಪರಿಸ್ಥಿತಿ ಅನುಭವಿಸುತ್ತಿರಬಹುದು. ಇಂತಹ ಸಂದರ್ಭದಲ್ಲಿ ಇದು ಅನಿವಾರ್ಯವೂ ಆಗಿರಬಹುದು.

ನಮ್ಮ ಮತದಾರರ ಮುಂದೆ ಆಯ್ಕೆಗಾಗಿ ಹಲವು ಪಕ್ಷಗಳಿರಬಹುದು. ಆದರೆ ಪ್ರಮುಖವಾಗಿ ಮೂರು ಪಕ್ಷಗಳಿವೆ – ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್. ಇದರಲ್ಲಿ ಯಾರಿಗೆ ಮತ ಚಲಾಯಿಸಬೇಕು ಎನ್ನುವ ವಿಷಯಕ್ಕೆ ಸಂಬಂಧಪಟ್ಟಂತೆ ಮತದಾರನಿಗೆ ಅವನ ಮುಂದೆ ಇರುವ ಮಾನದಂಡವೇನು?

ಒಬ್ಬ ಮತದಾರ ಅವನಿಗೆ ಒಪ್ಪಿಗೆ ಇರುವ ಸಿದ್ಧಾಂತವನ್ನು ಅನುಸರಿಸುವ ಪಕ್ಷ ಅಥವಾ ಅವನಿಗೆ ಒಪ್ಪಿಗೆ ಇರುವ ಪ್ರಾಮಾಣಿಕ ಅಭ್ಯರ್ಥಿಯನ್ನು ಆಯ್ಕೆ ಮಾಡಬಹುದು. ಆದರೆ ಕಾರಣಾಂತರದಿಂದ ಅವನಿಗೆ ಒಪ್ಪಿಗೆ ಇರುವ ಪಕ್ಷವು ತನ್ನ ಸಿದ್ಧಾಂತವನ್ನು ರಾಜೀ ಮಾಡಿಕೊಂಡರೆ ಹಾಗೂ ಮತದಾರನಿಗೆ ಆಯ್ಕೆ ಮಾಡಲು ಆ ಪಕ್ಷದಿಂದ ಅಭ್ಯರ್ಥಿಯಾಗಿ ನಿಂತ ವ್ಯಕ್ತಿಯ ಚಾರಿತ್ರ್ಯ ಹಾಗೂ ಹಿನ್ನೆಲೆ ದೋಷಪೂರಿತವಾಗಿದ್ದರೆ ಒಬ್ಬ ರಾಷ್ಟ್ರಪ್ರೇಮಿ ಮತದಾರನಿಗೆ ಅಭ್ಯರ್ಥಿ ಆಯ್ಕೆಯೇ ಒಂದು ಸಮಸ್ಯೆಯಾಗುತ್ತದೆ.

ಇಂತಹ ಸಂದರ್ಭದಲ್ಲಿ ಮತದಾರ ಒಂದೋ ಪಕ್ಷದ ವರಿಷ್ಠ ನಾಯಕರ (ಹೈಕಮಾಂಡ್) ಮುಖ ನೋಡಿ ಮತ ಚಲಾಯಿಸಬಹುದು. ಇಲ್ಲವೇ ಬೇರೆ ಪಕ್ಷದಲ್ಲಿರುವ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಈ ಯಾವ ಗೊಂದಲವೂ ಬೇಡ ಎಂದರೆ ನಮ್ಮ ಚುನಾವಣಾ ಆಯೋಗವು ಒಂದು ಸುಗಮವಾದ ಮಾರ್ಗವನ್ನು ಮತದಾರನಿಗೆ ಕಲ್ಪಿಸಿಕೊಟ್ಟಿದೆ. ಅದೇನೆಂದರೆ ಮತಯಂತ್ರದಲ್ಲಿರುವ (ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್) ಒಂದು ವಿಶೇಷ ಗುಂಡಿ (ಬಟನ್) **ನೋಟಾ (NOTA).**

ಈ ಗುಂಡಿಯನ್ನು ಒತ್ತಿದರೆ ಅದು ಏನನ್ನು ಸೂಚಿಸುತ್ತದೆ ಎಂದರೆ ನನಗೆ ಮೇಲೆ ಇರುವ ಯಾವ ಅಭ್ಯರ್ಥಿಯೂ ಒಪ್ಪಿಗೆ ಇಲ್ಲ (None of the above). ಇದರಿಂದ ಅಭ್ಯರ್ಥಿಗಳ ಆಯ್ಕೆಯ ಮೇಲೆ ಯಾವ ಪರಿಣಾಮ ಬೀರಬಹುದು ಎಂದು ನಿಖರವಾಗಿ ಹೇಳುವುದು ಕಷ್ಟ. ಆದರೆ ಅದು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ರಾಜಕೀಯ ಪಕ್ಷಗಳಿಗೆ ಒಂದು ಸಂದೇಶವನ್ನು ಕಳುಹಿಸಿದಂತೆ ಆಗುತ್ತದೆ. ಆ ಸಂದೇಶ ಏನೆಂದರೆ: **'ಎಲೈ ರಾಜಕೀಯ ಪಕ್ಷಗಳೇ ಇನ್ನು ಮುಂದೆ ದಯವಿಟ್ಟು ಒಳ್ಳೆಯ ಚಾರಿತ್ರ್ಯ ಇರುವ ಅರ್ಹ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿ ಚುನಾವಣಾ ಕಣಕ್ಕೆ ಇಳಿಸಿ'.**

ಈ ಬಾರಿಯ ಚುನಾವಣೆಯಲ್ಲಿ ಸಂತೋಷದ ವಿಷಯವೆಂದರೆ ಚುನಾವಣಾ ಆಯೋಗವು ಮತದಾರನಿಗೆ ಅನೇಕ ರೀತಿಯಲ್ಲಿ ಮತ ಹಾಕಲು ಪ್ರೇರೇಪಿಸುವುದರ ಜೊತೆಗೆ ನಾನಾ ಅನುಕೂಲಗಳನ್ನು ಮಾಡಿಕೊಟ್ಟಿದೆ. ಮತಗಟ್ಟೆಗಳ ಸಂಖ್ಯೆಗಳನ್ನು ಹೆಚ್ಚು ಮಾಡಿ ಮತದಾರ ಹೆಚ್ಚು ದೂರ ಪ್ರಯಾಣಿಸದೆ ತಾನಿರುವ ಸಮೀಪದಲ್ಲೇ ಸುಲಭವಾಗಿ ಮತ ಚಲಾಯಿಸಲು ಅನುಕೂಲ ಮಾಡಿಕೊಟ್ಟಿದೆ.

> **ನನಗೆ ವಾಟ್ಸಾಪ್‌ನಲ್ಲಿ ಬಂದ ಮತದಾನದ ಸ್ವಾರಸ್ಯಕರ ಪಾಠವಿದು**
>
> ಒಂದು ಎರಡು
> ಬೂತಿಗೆ ಹೊರಡು
>
> ಮೂರು ನಾಲ್ಕು
> ನಿನ್ನದೇ ಹಕ್ಕು
>
> ಐದು ಆರು
> ಜಾಣ್ಮೆಯ ತೋರು
>
> ಏಳು ಎಂಟು
> ಅವಕಾಶ ಉಂಟು
>
> ಒಂಭತ್ತು ಹತ್ತು
> ಯೋಗ್ಯರಿಗೇ ಬಟನ್ ಒತ್ತು

ಅಷ್ಟೇ ಅಲ್ಲ, ಮತಗಟ್ಟೆಗಳನ್ನು ಮತದಾರ ಸ್ನೇಹಿಯಾಗಿ ರೂಪಿಸುವುದರೊಂದಿಗೆ ಸ್ವಚ್ಛತೆ ಕಾಪಾಡಿ, ಕೆಲವು ವಿಶೇಷ ಮತಗಟ್ಟೆಗಳನ್ನು ಅಲಂಕರಿಸಲಾಗಿದೆ. ಇನ್ನೂ ಒಂದು ವಿಷಯವೆಂದರೆ ಈ ಬಾರಿ ವಯೋವೃದ್ಧರು ಹಾಗೂ ವಿಶೇಷಚೇತನರಿಗೆ ಅವರಿರುವ ಸ್ಥಳದಲ್ಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಿದ್ದು.

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಇರುವುದರಿಂದ ಒಬ್ಬ ನಾಗರಿಕ ಮತದಾನ ಮಾಡದೆಯೂ ಇರಬಹುದು. ಮತ ಚಲಾಯಿಸದಿದ್ದರೆ ಅವನಿಗೆ ಯಾವುದೇ ರೀತಿಯ ಶಿಕ್ಷೆಯಾಗಲೀ ಅಥವಾ ಸರಕಾರ ಒದಗಿಸುವ ಸವಲತ್ತುಗಳ ನಿರಾಕರಣೆಯಾಗಲಿ ಇಲ್ಲ. ಬಹುಶಃ ಈ ಕಾರಣಕ್ಕಾಗಿ ಶೇಕಡವಾರು ಮತದಾನ ತುಂಬಾ ಕಡಿಮೆಯಾಗುವುದನ್ನು ನಾವು ಗಮನಿಸುತ್ತಾ ಬಂದಿದ್ದೇವೆ.

ಈ ರೀತಿಯ ಮತದಾನದ ಇಳಿಕೆಗೆ ಒಂದು ಮುಖ್ಯವಾದ ಕಾರಣವೇನೆಂದರೆ ಮತದಾನದ ದಿನವನ್ನು **ಸಾರ್ವತ್ರಿಕ ರಜೆ ದಿನ** ಎಂದು ಘೋಷಿಸುವುದು. ಎಷ್ಟೋ ಮತದಾರರು ಈ ದಿನದಂದು ಮತ ಹಾಕುವ ಪ್ರಜಾಪ್ರಭುತ್ವದ ಕರ್ತವ್ಯ ಮಾಡುವುದನ್ನು ಬಿಟ್ಟು, ಮೋಜು ಮಾಡಲು ಪ್ರವಾಸಕ್ಕೆ ಹೋಗುತ್ತಾರೆ. ಪ್ರಜ್ಞಾವಂತ ಪ್ರಜೆಗಳು, ದೇಶಪ್ರೇಮಿಗಳು ಖಂಡಿತವಾಗಿಯೂ ಮತದಾನ ಮಾಡಲು ಕೊಟ್ಟ ರಜೆಯನ್ನು ಈ ರೀತಿ ದುರುಪಯೋಗಪಡಿಸಿಕೊಳ್ಳಬಾರದು.

ಮತ ಹಾಕುವುದು ದೇಶದ ಪ್ರತಿಯೊಬ್ಬ ನಾಗರಿಕನ ನೈತಿಕ ಹಾಗೂ ರಾಜಕೀಯ ಕರ್ತವ್ಯ. ಮತ ಹಾಕದಿದ್ದರೆ ಅದು ನಮ್ಮ ಸಂವಿಧಾನದಲ್ಲಿ ಕೊಟ್ಟ ವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಂತಾಗುತ್ತದೆ. ಆದುದರಿಂದ ಪ್ರತಿಯೊಬ್ಬ ಪ್ರಜೆಯೂ ಜವಾಬ್ದಾರಿಯಿಂದ, ದೇಶದ ಮೇಲಿನ ಪ್ರೀತಿಯಿಂದ ಸಂತೋಷದಿಂದಲೇ ಸ್ವಯಂ ಮತಗಟ್ಟೆಗೆ ಹೋಗಿ ನಮ್ಮ ಈ ಪ್ರಜಾಪ್ರಭುತ್ವದ ಹಬ್ಬವನ್ನು ಹಾಗೂ ನಮಗೆ ನಮ್ಮದೇ ಆದ ಸರ್ಕಾರವನ್ನು ಆಯ್ಕೆ ಮಾಡುವ ಅಧಿಕಾರವನ್ನು ಚಲಾಯಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಿಮಗೆ ಬೇಡವಾದ ಅಥವಾ ಕೆಟ್ಟ ಹಾಗೂ ಭ್ರಷ್ಟ ಸರ್ಕಾರ ಬಂದರೆ ಅದಕ್ಕೆ ನೀವೇ ಹೊಣೆಗಾರರಾಗಿರುತ್ತೀರಿ. ನೆನಪಿರಲಿ...

ಈಗಾಗಲೇ ವಯೋವೃದ್ಧರು ಹಾಗೂ ವಿಕಲಚೇತನರಿಗೆ ಅವರಿದ್ದ ಸ್ಥಳದಲ್ಲೇ ಮತ ಚಲಾಯಿಸುವ ಅವಕಾಶ ಅಂತ್ಯವಾಗಿದೆ. ಮೇಲಿನ ಚಿತ್ರದಲ್ಲಿ ಕಾಣುವ 104 ವರ್ಷ ವಯೋವೃದ್ಧರಾದ ವಿದ್ವಾನ್ ಶ್ರೀ ಕೃಷ್ಣ ಭಟ್ ಅವರು ಉಡುಪಿಯ ಶ್ರೀ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರ ತಂದೆ. ಅವರು 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಮತವನ್ನು ತಮ್ಮ ಮನೆಯಲ್ಲೇ ಚುನಾವಣಾ ಅಧಿಕಾರಿಗಳ ಸಮ್ಮುಖದಲ್ಲಿ ಚಲಾಯಿಸಿದರು.

ಕೊನೆಯದಾಗಿ, ನನಗೆ ವಾಟ್ಸಾಪ್‌ನಲ್ಲಿ ಬಂದ ಮತದಾನದ ಸ್ವಾರಸ್ಯಕರ ಪಾಠವಿದು:

ಒಂದು ಎರಡು
ಬೂತಿಗೆ ಹೊರಡು

ಮೂರು ನಾಲ್ಕು
ನಿನ್ನದೇ ಹಕ್ಕು

ಐದು ಆರು
ಜಾಣ್ಮೆಯ ತೋರು

ಏಳು ಎಂಟು
ಅವಕಾಶ ಉಂಟು

ಒಂಭತ್ತು ಹತ್ತು
ಯೋಗ್ಯರಿಗೇ ಬಟನ್ ಒತ್ತು.

ಜೈಹಿಂದ್, ಜೈ ಕರ್ನಾಟಕ

email:
voice @starofmysore.com

ಎಸ್‌ಎಸ್‌ಎಲ್‌ಸಿಯಲ್ಲಿ ಚಾಮರಾಜನಗರ ಜಿಲ್ಲೆಗೆ ಶೇ. 94.37ರಷ್ಟು ಫಲಿತಾಂಶ

ರಾಜ್ಯದಲ್ಲೇ 7ನೇ ಸ್ಥಾನ

• ಮೂವರು ವಿದ್ಯಾರ್ಥಿನಿಯರಿಗೆ 619 ಅಂಕ • 49 ಶಾಲೆಗಳಿಗೆ ಶೇ. 100ರಷ್ಟು ಫಲಿತಾಂಶ



ಜಿ.ಬಿ. ಶ್ರೀಜಾ



ಕೆ. ಪಲ್ಲವಿ



ಆರ್. ತೇಜಸ್ವಿನಿ

ಚಾಮರಾಜನಗರ, ಮೇ 8– ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಸೋಮವಾರ ಪ್ರಕಟಗೊಂಡಿದ್ದು, ಜಿಲ್ಲೆಗೆ ಶೇ 94.37ರಷ್ಟು ಫಲಿತಾಂಶ ದೊರೆತಿದೆ.

ಈ ಮೂಲಕ ರಾಜ್ಯದ ಗಡಿ ಜಿಲ್ಲೆಗಳಲ್ಲಿ ಒಂದಾಗಿರುವ ಚಾಮರಾಜನಗರವು ಒಟ್ಟಾರೆ ಫಲಿತಾಂಶದಲ್ಲಿ ರಾಜ್ಯದಲ್ಲಿ 7ನೇ ಸ್ಥಾನ ಪಡೆದುಕೊಂಡಿದೆ. ಜಿಲ್ಲೆಯ ಮೂವರು ವಿದ್ಯಾರ್ಥಿನಿಯರು 625ಕ್ಕೆ ತಲಾ 619 ಅಂಕಗಳನ್ನು ಗಳಿಸುವ ಮೂಲಕ ಜಿಲ್ಲೆಯ ಟಾಪರ್‌ಗಳಾಗಿ ಹೊರ ಹೊಮ್ಮಿದ್ದಾರೆ. ಈ ಮೂವರು ಸಹ ಕೊಳ್ಳೇಗಾಲ ಪಟ್ಟಣದ ಖಾಸಗಿ ಶಾಲೆ ಮಕ್ಕಳು.

ಜಿಲ್ಲೆಯಲ್ಲಿ 12,093 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಣಿ ಮಾಡಿಕೊಂಡಿದ್ದರು. ಈ ಪೈಕಿ 11,146 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 10,468ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಪೈಕಿ ಪರೀಕ್ಷೆ ಎದುರಿಸಿದ ಬಾಲಕಿಯರ ಪೈಕಿ ಶೇ. 95.73 ರಷ್ಟು ಮಂದಿ ಉತ್ತೀರ್ಣರಾಗಿದ್ದರೆ, ಬಾಲಕರಲ್ಲಿ ಶೇ. 92.07 ಮಂದಿ ತೇರ್ಗಡೆ ಹೊಂದಿದ್ದಾರೆ. ಹಾಗಾಗಿ ಬಾಲಕಿಯರೇ ಈ ಬಾರಿಯ ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ.

ಇನ್ನು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇ. 92.10ರಷ್ಟು ತೇರ್ಗಡೆ ಹೊಂದಿದ್ದರೆ, 97.55 ರಷ್ಟು ಸಂಖ್ಯೆಯಲ್ಲಿ ತೇರ್ಗಡೆ ಹೊಂದಿರುವ ಆಂಗ್ಲ ಮಾಧ್ಯಮದ ಮಕ್ಕಳು ಸಹ ಫಲಿತಾಂಶದಲ್ಲಿ ಮುನ್ನಡೆ ಹೊಂದಿದ್ದಾರೆ.

ಕೊಳ್ಳೇಗಾಲಕ್ಕೆ ಮೊದಲ ಸ್ಥಾನ: ಇನ್ನು ಒಟ್ಟಾರೆ ಫಲಿತಾಂಶದಲ್ಲಿ ಕೊಳ್ಳೇಗಾಲ ತಾಲೂಕು 98.09ರಷ್ಟು ಫಲಿತಾಂಶ ಪಡೆಯುವ ಮೂಲಕ ಜಿಲ್ಲೆಯಲ್ಲಿ ಮೊದಲ ಸ್ಥಾನ ಪಡೆದಿದೆ. ಯಳಂದೂರು ತಾಲೂಕು ಶೇ. 96.26ರಷ್ಟು ಫಲಿತಾಂಶ ಪಡೆದು ದ್ವಿತೀಯ ಸ್ಥಾನವನ್ನೂ, 95.03ರಷ್ಟು ಫಲಿತಾಂಶ ಪಡೆದಿರುವ ಹನೂರು ತೃತೀಯ ಸ್ಥಾನವನ್ನು ಗಳಿಸಿವೆ. ಶೇ. 93.20ರಷ್ಟು ಫಲಿತಾಂಶವನ್ನು ಪಡೆದಿರುವ ಗುಂಡ್ಲುಪೇಟೆ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟರೆ, ಶೇ. 90.80ರಷ್ಟು ಫಲಿತಾಂಶ ಪಡೆದಿರುವ ಚಾಮರಾಜನಗರ ತಾಲೂಕು ಕೊನೇ ಸ್ಥಾನ ಪಡೆದಿದೆ.

619 ಅಂಕ ಗಳಿಸಿದ ಮೂವರು ಟಾಪರ್ಸ್: ಜಿಲ್ಲೆಯ ಕೊಳ್ಳೇಗಾಲ ಪಟ್ಟಣದ ವಾಸವಿ ಶಾಲೆಯ ಜಿ.ಬಿ. ಶ್ರೀಜಾ, ಅದೇ ಶಾಲೆ ಕೆ. ಪಲ್ಲವಿ ಹಾಗೂ ನಿಸರ್ಗ ವಿದ್ಯಾಲಯದ ಆರ್. ತೇಜಸ್ವಿನಿ ತಲಾ 619 ಅಂಕಗಳನ್ನು ಗಳಿಸುವ ಮೂಲಕ ಮೊದಲ ಸ್ಥಾನವನ್ನು ಹಂಚಿಕೊಂಡಿದ್ದಾರೆ. ಈ ಮೂವರು ಸಹ ಕೊಳ್ಳೇಗಾಲದವರು ಎಂಬುದು ವಿಶೇಷ.

ಇನ್ನು ಗುಂಡ್ಲುಪೇಟೆ ಪಟ್ಟಣದ ಸೈಂಟ್ ಜಾನ್ ಶಾಲೆಯ ಎಸ್. ಗಂಧರ್ವಿನಿ, ಕೊಳ್ಳೇಗಾಲ ನಿಸರ್ಗ ವಿದ್ಯಾಲಯದ ಎಸ್. ಲಿಖಿತಾ ಹಾಗೂ ಕೊಳ್ಳೇಗಾಲ ವಾಸವಿ ಶಾಲೆಯ ಆರ್. ಮೋನಿಶಾ ಅವರು ಸಹ ತಲಾ 618 ಅಂಕಗಳನ್ನು ಗಳಿಸುವ ಮೂಲಕ ದ್ವಿತೀಯ ಸ್ಥಾನವನ್ನು ಹಂಚಿಕೊಂಡಿದ್ದಾರೆ.

ಕೊಳ್ಳೇಗಾಲ ತಾಲೂಕು ಆದರ್ಶ ಶಾಲೆಯ ಮಾನಸ 617 ಅಂಕ ಪಡೆದು ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಇನ್ನು ಚಾ.ನಗರ ಯುನಿವರ್ಸ್ ಶಾಲೆಯ ಎಂ. ಧನ್ಯಾ, ಹನೂರು ಶ್ರೀವಿವೇಕಾನಂದ ಶಾಲೆಯ ಅನುಮಿತಾ, ಕೊಳ್ಳೇಗಾಲದ ಸೆವೆಂತ್ ಡೇ ಶಾಲೆಯ ರೂಪಿತಾ ಅವರು ತಲಾ 615 ಸ್ಥಾನಗಳನ್ನು ಗಳಿಸುವ ಮೂಲಕ ನಾಲ್ಕನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ. ಜಿಲ್ಲೆಯ ಟಾಪ್ ನಾಲ್ಕು ಸ್ಥಾನಗಳನ್ನು ಹಂಚಿಕೊಂಡ ಇಷ್ಟು ಮಂದಿಯು ಬಾಲಕಿಯರು ಎಂಬುದು ಗಮನಾರ್ಹ ಸಂಗತಿ.

SSLCಯಲ್ಲಿ ಕೊಡಗಿಗೆ ಶೇ.93.19 ಫಲಿತಾಂಶ

ರಾಜ್ಯಕ್ಕೆ 9ನೇ ಸ್ಥಾನ

ಪ್ರಥಮ ಸ್ಥಾನ ಹಂಚಿಕೊಂಡ ಮಡಿಕೇರಿಯ ಮರ್ಲಿನ್ ಲಾಸ್ರೆಡೋ, ವಿರಾಜಪೇಟೆಯ ವೈಷ್ಣವಿ



ವೈಷ್ಣವಿ

ಮಡಿಕೇರಿ, ಮೇ 8– ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶ ಸೋಮವಾರ ಪ್ರಕಟ ವಾಗಿದ್ದು, ಜಿಲ್ಲೆಗೆ ಶೇ. 93.19 ಫಲಿತಾಂಶ ಲಭಿಸಿದ್ದು, ರಾಜ್ಯದಲ್ಲಿ 9ನೇ ಸ್ಥಾನ ಪಡೆದಿದೆ. ಎಂದಿನಂತೆ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಜಿಲ್ಲೆಯಲ್ಲಿ 6026 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 5597 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಉತ್ತಮ ಸಾಧನೆ: ಮಡಿಕೇರಿ ಸಂತ ಮೈಕಲರ ಶಾಲೆಯ ಮರ್ಲಿನ್ ಲಾಸ್ರೆಡೋ ಮತ್ತು ವಿರಾಜಪೇಟೆ ಸೆಂಟ್ ಏನ್ಸ್ ಶಾಲೆಯ ವಿದ್ಯಾರ್ಥಿನಿ ವೈಷ್ಣವಿ ಅವರುಗಳು 620 ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನವನ್ನು ಹಂಚಿಕೊಂಡಿದ್ದಾರೆ. ಸೋಮವಾರಪೇಟೆ ತಾಲೂಕಿನ ಫಾತಿಮಾ ಕಾನ್ವೆಂಟ್ ಶಾಲೆಯ ಡಿ.ಶ್ರೀವಿದ್ಯಾ ಎಂಬಾಕೆ 619 ಅಂಕಗಳಿಸಿ ದ್ವಿತೀಯ ಸ್ಥಾನ ಪಡೆದಿದ್ದು, ಕೂಡಿಗೆ ಏಂಜೆಲಾ ವಿದ್ಯಾನಿಕೇತನ ಶಾಲೆಯ ಎಸ್.ಎನ್. ಚೇತನ್ ಹಾಗೂ ಗೋಣಿಕೊಪ್ಪ ಲಯನ್ಸ್ ಶಾಲೆಯ ಎಂ.ವಿ. ದೀತ್ಯಾ ದೇಚಮ್ಮ ಅವರುಗಳು 618 ಅಂಕಗಳನ್ನು ಪಡೆದು ತೃತೀಯ ಸ್ಥಾನವನ್ನು ಹಂಚಿಕೊಳ್ಳುವ ಮೂಲಕ ಉನ್ನತ ಸಾಧನೆ ತೋರಿದ್ದಾರೆ.

ಕ್ಷೇತ್ರವಾರು ಸಾಧನೆ: ಮಡಿಕೇರಿ ತಾಲೂಕಿನಲ್ಲಿ ಪರೀಕ್ಷೆಗೆ ನೋಂದಣಿಯಾಗಿದ್ದ 1769 ವಿದ್ಯಾರ್ಥಿಗಳಲ್ಲಿ 1608 ವಿದ್ಯಾರ್ಥಿ ಗಳು ಉತ್ತೀರ್ಣರಾಗಿದ್ದು, ಶೇ.90.90ರಷ್ಟು ಫಲಿತಾಂಶ ಲಭಿಸಿದೆ. ಸೋಮವಾರಪೇಟೆ ತಾಲೂಕಿನ 2383 ವಿದ್ಯಾರ್ಥಿಗಳ ಪೈಕಿ 2270 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.95.26 ರಷ್ಟು ಫಲಿತಾಂಶ ಬಂದಿದೆ. ವಿರಾಜಪೇಟೆ ತಾಲೂಕಿನ 1874 ವಿದ್ಯಾರ್ಥಿಗಳ ಪೈಕಿ 1719 ವಿದ್ಯಾರ್ಥಿಗಳು ಉತ್ತೀರ್ಣರಾಗಿ, ಶೇ.91.73 ರಷ್ಟು ಫಲಿತಾಂಶ ಲಭಿಸಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ.



ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಶ್ರೀರಂಗಪಟ್ಟಣ, ಮೇ 8– ಶ್ರೀರಂಗಪಟ್ಟಣ ತಾಲೂಕು ಕೆಆರ್‌ಎಸ್‌ನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಹೆಚ್.ಎಸ್. ಅನೂಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 506 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಈಕೆ ಪಿ.ಹೊಸಹಳ್ಳಿ ಗ್ರಾಮದ ಸೋಮಾಚಾರಿ ಮತ್ತು ದಾಕ್ಷಾಯಿಣಿ ದಂಪತಿ ಪುತ್ರಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕರ್ನಾಟಕ ಸಾರ್ವಭೌಮತ್ವ ಕುರಿತು ಸೋನಿಯಾ ಗಾಂಧಿ ಹೇಳಿಕೆ ವಿಚಾರ

ಸ್ಪಷ್ಟನೆ ನೀಡುವಂತೆ ಮಲ್ಲಿಕಾರ್ಜುನ ಖರ್ಗೆಗೆ ಚುನಾವಣಾ ಆಯೋಗ ನೋಟಿಸ್



ನವದೆಹಲಿ: ಕರ್ನಾಟಕ ಸಾರ್ವಭೌಮತ್ವ ಕುರಿತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ನೀಡಿದ ಹೇಳಿಕೆ ಖಂಡಿಸಿ ಬಿಜೆಪಿ ದೂರು ದಾಖಲಿಸಿದ ಬೆನ್ನಲ್ಲೇ, ಈ ಕುರಿತು ಸ್ಪಷ್ಟನೆ ನೀಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಚುನಾವಣೆ ಆಯೋಗ ನೋಟಿಸ್ ನೀಡಿದೆ.

ಸೋನಿಯಾ ಅವರ ಹೇಳಿಕೆಯನ್ನು ಉಲ್ಲೇಖಿಸಿ ಕಾಂಗ್ರೆಸ್ ಟ್ವಿಟರ್ ಖಾತೆಯಿಂದ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ ಕುರಿತು ಸ್ಪಷ್ಟನೆ ನೀಡಬೇಕು ಎಂದು ಆಯೋಗ ಸೂಚಿಸಿದೆ.

ಕೇಂದ್ರ ಸಚಿವ ಭೂಪೇಂದ್ರ ಯಾದವ್ ನೇತೃತ್ವದ ನಿಯೋಗವು ದಿಲ್ಲಿಯ ಚುನಾವಣಾ ಆಯೋಗದ ಕೇಂದ್ರ ಕಚೇರಿಗೆ ತೆರಳಿ, ಸೋನಿಯಾ ಗಾಂಧಿ ಅವರು ಕರ್ನಾಟಕದಲ್ಲಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ದೂರು ಸಲ್ಲಿಸಿದ್ದಾರೆ. ಇದು ಭಾರತದ ಅಖಂಡತೆಗೆ ಧಕ್ಕೆ ತರುವ ವಿಚಾರ ಎಂದು ಬಿಜೆಪಿ ಟೀಕಿಸಿದೆ.

ಸೋನಿಯಾ ಗಾಂಧಿ ಹೇಳಿದ್ದೇನು?: ಶನಿವಾರ ಹುಬ್ಬಳ್ಳಿಯಲ್ಲಿ ಭಾಷಣ ಮಾಡಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು, ಕರ್ನಾಟಕದ ಪ್ರತಿಷ್ಠೆ, ಸಾರ್ವಭೌಮತ್ವ ಅಥವಾ ಸಮಗ್ರತೆಗೆ ಯಾರಾದರೂ ಬೆದರಿಕೆಯೊಡ್ಡಲು ಕಾಂಗ್ರೆಸ್ ಬಿಡುವುದಿಲ್ಲ ಎಂದು ಹೇಳಿದ್ದಾರೆ. ಈ ಭಾಷಣದ ತುಣುಕನ್ನು ಕಾಂಗ್ರೆಸ್ ತನ್ನ ಟ್ವಿಟರ್ ಹ್ಯಾಂಡಲ್‌ನಲ್ಲಿ ಶೇರ್ ಮಾಡಿತ್ತು. ಅದೇ ಟ್ವೀಟ್ ಉಲ್ಲೇಖಿಸಿ ಈಗ ಬಿಜೆಪಿಯು ಸೋನಿಯಾ ಗಾಂಧಿ ವಿರುದ್ಧ ದೂರು ನೀಡಿದೆ.

ನರೇಂದ್ರ ಮೋದಿ ಟೀಕೆ: ಭಾನುವಾರ ಮೈಸೂರಿನ ನಂಜನಗೂಡಿನಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಈ ವಿಷಯವನ್ನು ಪ್ರಸ್ತಾಪಿಸಿ, ಆಕ್ರೋಶಭರಿತರಾಗಿ ಮಾತನಾಡಿದ್ದರು. ಕರ್ನಾಟಕದಲ್ಲಿ ಮಾತ್ರವಲ್ಲ, ನಾನು ಇಡೀ ದೇಶಕ್ಕೆ ಈ ಮಾತನ್ನು ಬಹಳ ನೋವಿನಿಂದ ಹೇಳಲು ಇಚ್ಛಿಸುತ್ತೇನೆ. ನಿನ್ನೆ ಕರ್ನಾಟಕಕ್ಕೆ ಬಂದ ಕಾಂಗ್ರೆಸ್‌ನ ಶಾಹಿ ಪರಿವಾರವು ಕರ್ನಾಟಕದ ಸಾರ್ವಭೌಮತ್ವವನ್ನು ಕಾಪಾಡುತ್ತೇನೆ ಎಂದು ಹೇಳಿದೆ. ಇದರ ಅರ್ಥ ಏನು ಗೊತ್ತಾ..? ಯಾವಾಗ ದೇಶ ಸ್ವತಂತ್ರವಾಗುತ್ತದೋ ಆಗ ಆ ದೇಶವನ್ನು ಸಾರ್ವಭೌಮ ರಾಷ್ಟ್ರ ಎಂದು ಕರೆಯುತ್ತಾರೆ. ಈಗ ಕಾಂಗ್ರೆಸ್ ಹೇಳುತ್ತಿರುವ ಮಾತಿನ ಅರ್ಥ ಏನೆಂದರೆ, ಭಾರತದಿಂದ ಕರ್ನಾಟಕವು ಪ್ರತ್ಯೇಕವಾಗಿದೆ ಎಂದು ಮೋದಿ ಹೇಳಿದ್ದರು.

ಜೆಡಿಎಸ್ ಬೆಂಬಲಿಸಲು ಪಕ್ಷದ ಮಹಿಳಾ ಘಟಕ ಮನವಿ



ಮೈಸೂರು,ಮೇ 8(ಪಿಎಂ)– ಈ ಬಾರಿಯ ಚುನಾವಣೆಯಲ್ಲಿ ರಾಜ್ಯದ ಜನತೆ ಜೆಡಿಎಸ್ ಬೆಂಬಲಿಸಬೇಕೆಂದು ಪಕ್ಷದ ಮೈಸೂರು ನಗರ ಮಹಿಳಾ ಘಟಕದ ಅಧ್ಯಕ್ಷೆ ಎಸ್.ಪ್ರೇಮ ಶಂಕರೇಗೌಡ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಪ್ರಧಾನಿಗಳೂ ಆದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ ಅವರು ರಾಜ್ಯಕ್ಕೆ ಅವಿಸ್ಮರಣೀಯ ಕೊಡುಗೆಗಳನ್ನು ನೀಡಿದ್ದಾರೆ ಎಂದರು.

ಹೆಚ್.ಡಿ.ಕುಮಾರಸ್ವಾಮಿಯವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿ ಲಾಟರಿ ಮತ್ತು ಸಾರಾಯಿ ನಿಷೇಧ ಮಾಡಿದರು. ಅಲ್ಲದೆ, ಕೂಲಿಕಾರರು ಮತ್ತು ರೈತರ ಸಾಲಮನ್ನಾ ಸೇರಿದಂತೆ ಹತ್ತಾರು ಜನಪರ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪಕ್ಷಕ್ಕೆ ಅಧಿಕಾರ ನೀಡುವ ಮೂಲಕ ಜನಪರ ಯೋಜನೆಗಳ ಅನುಷ್ಠಾನಕ್ಕೆ ಸಹಕಾರ ನೀಡಬೇಕೆಂದು ಮತದಾರರಲ್ಲಿ ಮನವಿ ಮಾಡಿದರು.

ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳಾದ ಜಿ.ಟಿ. ದೇವೇಗೌಡ, ಸಾ.ರಾ.ಮಹೇಶ್, ಹೆಚ್.ಕೆ. ರಮೇಶ್, ಕೆ.ವಿ.ಮಲ್ಲೇಶ್, ಅಶ್ವಿನ್ ಕುಮಾರ್, ಜಿ.ಡಿ.ಹರೀಶ್‌ಗೌಡ, ಮಹದೇವು, ಜಯಪ್ರಕಾಶ್ ಚಿಕ್ಕಣ್ಣ, ಅಬ್ದುಲ್ ಶಾಹಿದ್ ಮತ್ತು ಡಾ.ಭಾರತಿಶಂಕರ್ ಅವರಿಗೆ ಮತ ನೀಡಬೇಕೆಂದು ಮತದಾರರಲ್ಲಿ ಕೋರಿದರು. ಪಾಲಿಕೆ ಸದಸ್ಯರಾದ ಭಾಗ್ಯ ಮಹದೇಶ್, ಸವಿತಾ ಸುರೇಶ್, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೇಮಾವತಿ, ಮಹಿಳಾ ಘಟಕದ ಲಕ್ಷ್ಮೀಶಿವರಾಜ್, ಉಷಾ ಸುದ್ದಿಗೋಷ್ಠಿಯಲ್ಲಿದ್ದರು.

ಸಿದ್ದರಾಮಯ್ಯ ಸೋಲಿಸಲು ಕಾಂಗ್ರೆಸ್ ಷಡ್ಯಂತ್ರ: ಬಿಜೆಪಿ

ಬೆಂಗಳೂರು: ಮೇ 10ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಪಕ್ಷದ ರಾಜ್ಯಾಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಸಂಸದ ನಳಿನ್ ಕುಮಾರ್ ಕಟೀಲ್, ಕಾಂಗ್ರೆಸ್‌ನೊಳಗಿನ ಗುಂಪು ತನ್ನ ಹಿರಿಯ ನಾಯಕನ ವಿರುದ್ಧ ಪಿತೂರಿ ನಡೆಸುತ್ತಿರುವುದರಿಂದ ವರುಣ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಲಿಸಲಿದ್ದಾರೆ ಎಂದು ಹೇಳಿದರು. ಮಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಟೀಲ್, ವರುಣ ವಿಧಾನಸಭಾ ಕ್ಷೇತ್ರದಿಂದ ಸಿದ್ದರಾಮಯ್ಯ ಸೋಲಿಸಲು ಕಾಂಗ್ರೆಸ್‌ನ ಒಂದು ಗುಂಪು ಷಡ್ಯಂತ್ರ ನಡೆಸುತ್ತಿದೆ ಎಂದು ಆರೋಪಿಸಿದರು. ಇದೇ ಗುಂಪು 2019ರ ಲೋಕಸಭೆ ಚುನಾವಣೆಯಲ್ಲಿ ಕಲಬುರಗಿಯಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕೆಲಸ ಮಾಡಿತ್ತು ಎಂದರು. ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತದೊಂದಿಗೆ ಗೆಲ್ಲಲಿದೆ ಎಂದು ಹೇಳಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಪ್ರವಾಸದ ನಂತರ ಪಕ್ಷದ ನಿರೀಕ್ಷಿತ ಸಂಖ್ಯೆ ಹೆಚ್ಚಾಗಲಿದೆ ಎಂದ ಅವರು, ಕಳೆದ 18 ತಿಂಗಳ ಹಿಂದೆಯೇ ಬಿಜೆಪಿ ಚುನಾವಣಾ ತಯಾರಿ ಆರಂಭಿಸಿತ್ತು. ಚುನಾವಣೆ ಎದುರಿಸಲು ಪಕ್ಷ ತನ್ನ ಬೂತ್ ಮಟ್ಟದ ಘಟಕಗಳನ್ನು ಸಾಕಷ್ಟು ಮುಂಚೆಯೇ ಬಲಪಡಿಸಿದೆ ಮತ್ತು ಸರ್ಕಾರದ ಸಾಧನೆಗಳ ಆಧಾರದ ಮೇಲೆ ಜನರನ್ನು ತಲುಪಿದೆ ಎಂದರು. ರಾಜ್ಯದ ಎಲ್ಲಾ 224 ಕ್ಷೇತ್ರಗಳಿಗೂ ಭೇಟಿ ನೀಡಿದ್ದು, ಜೆಡಿಎಸ್‌ನ ಭದ್ರಕೋಟೆಯಾಗಿದ್ದ ಮೈಸೂರು ಕ್ಷೇತ್ರ ಕೂಡ ಈ ಬಾರಿ ಬಿಜೆಪಿಗೆ ಬೆಂಬಲ ನೀಡಲಿದೆ. ಪಕ್ಷವು ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ನೀಡಿದ್ದು, ಕರಾವಳಿ ಜಿಲ್ಲೆಗಳಲ್ಲಿ ಎಲ್ಲ ಸಮುದಾಯಗಳು ಬಿಜೆಪಿ ಪರವಾಗಿವೆ.

ಮೂರನೇ ಪುಟದಿಂದ

ಬಹಿರಂಗ ಪ್ರಚಾರಕ್ಕೆ ತೆರೆ

ಪಕ್ಷವನ್ನು ಅಧಿಕಾರಕ್ಕೆ ತರಲು ಬಿಜೆಪಿ ಕಳೆದ ಆರು ತಿಂಗಳಿನಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸರ್ಕಾರಿ ಹಾಗೂ ಸಾರ್ವಜನಿಕ ಸಭೆಗಳನ್ನು ನಡೆಸಿ, ಮತದಾರರನ್ನು ಓಲೈಕೆ ಮಾಡಲು ನಿರಂತರ ಪ್ರಯತ್ನ ಮಾಡಿತು. ಮೋದಿ ಅವರ ಜೊತೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸೇರಿದಂತೆ 20ಕ್ಕೂ ಹೆಚ್ಚು ದೆಹಲಿಯ ವರ್ಚಸ್ವಿ ನಾಯಕರುಗಳು ರಾಜ್ಯದಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದರು. ಕಾಂಗ್ರೆಸ್ ಕರ್ನಾಟಕದಲ್ಲಿ ಕಳೆದುಕೊಂಡಿರುವ ಅಧಿಕಾರವನ್ನು ಗಳಿಸಲು ಪಕ್ಷದ ಅಧಿನಾಯಕಿ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಪ್ರಿಯಾಂಕಾ ಗಾಂಧಿ, ಜೊತೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಬಳಸಿಕೊಂಡಿದ್ದರು. ರಾಷ್ಟ್ರೀಯ ಪಕ್ಷಗಳಿಗೆ ಸಮ ಪೈಪೋಟಿ ನೀಡಲಾಗದಿದ್ದರೂ ಅಧಿಕಾರದ ಚುಕ್ಕಾಣಿ ಹಿಡಿಯಲೇಬೇಕೆಂದು ಜೆಡಿಎಸ್‌ನ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ತಮ್ಮ ಅಭ್ಯರ್ಥಿಗಳ ಪರ ಮತಯಾಚಿಸಿದರು. ಬಹಿರಂಗ ಪ್ರಚಾರ ಅಂತ್ಯಗೊಳ್ಳುತ್ತಿದ್ದಂತೆ ಈ ಎಲ್ಲಾ ಅತಿರಥ ಮಹಾನಾಯಕರು ಪ್ರಚಾರ ಕಾರ್ಯದಿಂದ ಹಿಂತಿರುಗಿದ್ದಾರೆ.

ಇನ್ನೇನಿದ್ದರೂ, ಅಭ್ಯರ್ಥಿಗಳು ಮಾತ್ರ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯಕರ್ತರ ಜೊತೆಗೂಡಿ, ಮನೆ ಮನೆಗೆ ತೆರಳಿ, ಮತಯಾಚಿಸಲು ಇನ್ನು 24 ಗಂಟೆ ಸಮಯಾವಕಾಶವಿದೆ. ಈ ಮಧ್ಯೆ ಕೇಂದ್ರ ಚುನಾವಣಾ ಆಯೋಗ ಕರ್ನಾಟಕದಲ್ಲಿ ಶಾಂತಿಯುತ ಮತ್ತು ಮುಕ್ತ ಮತದಾನ ನಡೆಸಲು ಹತ್ತು ಹಲವು ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದೆ.

ಸೂಕ್ಷ್ಮ ಮತಗಟ್ಟೆಗಳಲ್ಲಿ ನಿಗಾ ವಹಿಸಲು ಸೂಕ್ಷ್ಮ ವೀಕ್ಷಕರು, ವೆಬ್ ಕಾಸ್ಟಿಂಗ್, ಸಿಸಿಟಿವಿ ವ್ಯವಸ್ಥೆ ಮಾಡಲಾಗುತ್ತದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ. ನಾಳೆ ಆಯಾ ಕ್ಷೇತ್ರದ ಚುನಾವಣಾಕಾರಿಗಳು ನಿಗದಿಪಡಿಸಿದ ಸ್ಥಳದಲ್ಲಿ ಮತಗಟ್ಟೆಯ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿ ಸಮಾವೇಶಗೊಂಡು, ನಿಗದಿತ ಮತಗಟ್ಟೆಗೆ ಮತಯಂತ್ರ ಸೇರಿದಂತೆ ಮತದಾನಕ್ಕೆ ಅಗತ್ಯವಿರುವ ಸಾಮಗ್ರಿಯೊಂದಿಗೆ ತೆರಳಲಿದ್ದಾರೆ. ಚುನಾವಣಾ ಕಾರ್ಯಕ್ಕಾಗಿ ಸಾರಿಗೆ ಸಂಸ್ಥೆಗಳ ಹೆಚ್ಚು ಬಸ್ಸುಗಳನ್ನು ಬಳಕೆ ಮಾಡುವುದರಿಂದ ನಾಳೆ ಮತ್ತು ಮತದಾನದಂದು ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ. ಹೀಗಾಗಿ ವಿವಿಧ ರಾಜಕೀಯ ಪಕ್ಷಗಳ ನಾಯಕರು, ಮುಖಂಡರು, ಅಭ್ಯರ್ಥಿಗಳು ಕೊನೆಯ ದಿನದ ಬಿರುಸಿನ ಚುನಾವಣಾ ಪ್ರಚಾರ ಕೈಗೊಂಡಿದ್ದರು. ರೋಡ್ ಶೋ, ಬಹಿರಂಗ ಸಭೆ, ಸಮಾರಂಭಗಳ ಮೂಲಕ ಪ್ರಚಾರ ನಡೆಸಿ ಮತಯಾಚನೆ ಮಾಡುತ್ತಿರುವುದು ರಾಜ್ಯದೆಲ್ಲೆಡೆ ಕಂಡುಬಂತು. ಬೆಳಗಾವಿ ಜಿಲ್ಲೆಯಲ್ಲಿ ಅತೀಹೆಚ್ಚು 187 ಅಭ್ಯರ್ಥಿಗಳು ಇದ್ದರೆ, ಕೊಡಗು ಜಿಲ್ಲೆಯಲ್ಲಿ ಅತೀ ಕಡಿಮೆ 24 ಅಭ್ಯರ್ಥಿಗಳಿದ್ದಾರೆ. 2,66,82,155 ಪುರುಷರು, 2,63,98483 ಮಹಿಳೆಯರು, 47,488 ಸೇವಾ ಮತದಾರರು ಸೇರಿದಂತೆ ಒಟ್ಟು 5,31,33,054 ಮತದಾರರಿದ್ದಾರೆ. ಈಗಾಗಲೇ ಭಾವಚಿತ್ರವಿರುವ ಮತದಾರರ ಗುರುತಿನ ಚೀಟಿಯನ್ನು ಶೇ.95ರಷ್ಟು ವಿತರಿಸಿರುವುದಾಗಿ ತಿಳಿಸಲಾಗಿದೆ.

ನರಸಿಂಹರಾಜ ಕ್ಷೇತ್ರದ ಅಭಿವೃದ್ಧಿಗೆ ಅವಕಾಶ ನೀಡಿ

ಮತದಾರರಲ್ಲಿ ಬಿಜೆಪಿ ಅಭ್ಯರ್ಥಿ ಸತೀಶ್ ಸಂದೇಶ್‌ಸ್ವಾಮಿ ಮನವಿ: ಕ್ಷೇತ್ರದಾದ್ಯಂತ ಬಿರುಸಿನ ಮತಯಾಚನೆ



ಮೈಸೂರು, ಮೇ 8(ಎಸ್‌ಬಿಡಿ)– ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸತೀಶ್ ಸಂದೇಶ್ ಸ್ವಾಮಿ ಬಹಿರಂಗ ಪ್ರಚಾರದ ಕಡೇ ದಿನವಾದ ಸೋಮವಾರ ಗಾಂಧಿನಗರ ಸೇರಿದಂತೆ ವಿವಿಧೆಡೆ ಬಿರುಸಿನ ಪ್ರಚಾರ ನಡೆಸಿ, ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿ ಆಶಯದೊಂದಿಗೆ ಈವರೆಗೆ ಒಂದೇ ಕುಟುಂಬಕ್ಕೆ ಆಶೀರ್ವದಿಸಿ, ಗೆಲ್ಲಿಸಿದ್ದೀರಿ. ಆದರೆ 60ರ ದಶಕದಿಂದ ಕ್ಷೇತ್ರವನ್ನಾಳಿದ ತಂದೆ–ಮಗ ಈವರೆಗೂ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಜನರಿಗೆ ಕನಿಷ್ಠ ಮೂಲ ಸೌಲಭ್ಯಗಳನ್ನೂ ಕಲ್ಪಿಸಲಾಗಿಲ್ಲ. ಕ್ಷೇತ್ರ ವ್ಯಾಪ್ತಿಯಲ್ಲಿ 28 ರೆವಿನ್ಯೂ ಬಡಾವಣೆಗಳಿದ್ದು, ಎಲ್ಲಿಯೂ ಸೌಕರ್ಯಗಳಿಲ್ಲ. ನಗರಪಾಲಿಕೆಯಿಂದ ನಿತ್ಯ ನಿರ್ವಹಣೆ ಹೊರತಾಗಿ ಮತ್ತೇನೂ ಕೆಲಸವಾಗಿಲ್ಲ ಎಂದರು.

ಶಿಕ್ಷಣ ಸಂಸ್ಥೆಗಳ ಸ್ಥಾಪಿಸಬಹುದಿತ್ತು: ಹಳೆಯ ರೆವಿನ್ಯೂ ಬಡಾವಣೆಗಳಿರುವುದರಿಂದ ಅಭಿವೃದ್ಧಿ ಯೋಜನೆಗಳಿಗೆ ಸ್ಥಳಾವಕಾಶವಿಲ್ಲ ಎಂದು ಕ್ಷೇತ್ರದ ಹಾಲಿ ಶಾಸಕರು ಸಬೂಬು ಹೇಳುತ್ತಲೇ ಬಂದರು. ಆದರೆ ರಾಜೀವ್‌ನಗರ, ಸಾತಗಳ್ಳಿ, ದೇವನೂರು ಹೀಗೆ ಹಲವೆಡೆ ಸಾಕಷ್ಟು ಸಿಎ ನಿವೇಶನಗಳಿದ್ದರೂ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಇಚ್ಛೆ ತೋರಲಿಲ್ಲ. ಉದಾಹರಣೆಗೆ ನಾರಾಯಣ ಹೃದಯಾಲಯದ ಬಳಿಯಿರುವ ಸುಮಾರು ಒಂದು ಎಕರೆ ಜಾಗದಲ್ಲಿ ಶಾಲೆ–ಕಾಲೇಜು ನಿರ್ಮಿಸಬಹುದಿತ್ತು. ವಿಟಿಯು ಕಾಲೇಜಿನ ಬಳಿಯ ಸುಮಾರು 17 ಎಕರೆ ಜಾಗವನ್ನು ಕ್ರೀಡಾಂಗಣ ನಿರ್ಮಾಣಕ್ಕೆ ನೀಡಿದ್ದಾರೆ. ಶಾಸಕರಿಗೆ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ಆ ಸ್ಥಳದಲ್ಲಿ ಈ ಮೊದಲೇ ಶಾಲೆ ಅಥವಾ ಆಸ್ಪತ್ರೆ ನಿರ್ಮಾಣ ಮಾಡಬಹುದಿತ್ತು ಎಂದು ಟೀಕಿಸಿದರು.

ಕ್ಷೇತ್ರದಲ್ಲಿ ಅನಧಿಕೃತ ಗುಡಿಸಲು, ಜೋಪಡಿಗಳಲ್ಲಿ ಬದುಕು ನಡೆಸುವವರ ಸಂಖ್ಯೆ ಹೆಚ್ಚಾಗಲು ಶಾಸಕರೇ ಕಾರಣ. ಶೇ.70 ರಷ್ಟು ಜನ ಸೂರಿಲ್ಲದೆ ಸಂಕಷ್ಟದಲ್ಲಿದ್ದಾರೆ. ಅವರ ಮತಬಲದಿಂದ ಈವರೆಗೆ ಗೆದ್ದು ಬಂದಿರುವ ಶಾಸಕರು, ಗೆದ್ದ ನಂತರ ಅವರ ಜೀವನಕ್ಕೆ ನೆರವಾಗಿಲ್ಲ. ಸರ್ಕಾರ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಕಲ್ಯಾಣ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಯ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಅವರ ಅವಧಿಯಲ್ಲಿ 100–150 ಕೋಟಿಗೂ ಹೆಚ್ಚು ಅನುದಾನ ಬಂದಿದ್ದು, ಯಾವುದೇ ಶಾಶ್ವತ ಯೋಜನೆ ಕೈಗೊಂಡಿಲ್ಲ. ತುಂಡು ಗುತ್ತಿಗೆ ಮಾದರಿಯಲ್ಲಿ 2–3 ಲಕ್ಷ ರೂ. ವೆಚ್ಚದ ಕಾಮಗಾರಿಗಳನ್ನಷ್ಟೇ ಮಾಡಿದ್ದಾರೆ. ಜನ ಸಂಕಷ್ಟದಲ್ಲಿದ್ದರೂ ಅವರು ವಿಲಾಸ ಜೀವನ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕ್ಷೇತ್ರದ ಜನ ಜಾಗೃತರಾಗಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ಬದಲಾವಣೆ ಬಯಸಿದ್ದಾರೆ. ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆ ನಡೆಸಿದ್ದಾರೆ. ಎಲ್ಲಾ ರೀತಿಯ ಮೂಲ ಸೌಕರ್ಯಗಳೂ ಸಿಗಬೇಕು. ಮಕ್ಕಳಾದರೂ ಇತರೆ ಕ್ಷೇತ್ರದವರಂತೆ ವ್ಯವಸ್ಥಿತವಾಗಿ ಬದುಕುವಂತಾಗಬೇಕು ಎಂಬ ಆಶಯದೊಂದಿಗೆ ಬದಲಾವಣೆ ತರಲು ತೀರ್ಮಾನಿಸಿದ್ದಾರೆ. ನಮ್ಮೊಡನಿದ್ದು ಕೆಲಸ ಮಾಡುವ ವ್ಯಕ್ತಿಯನ್ನು ಆರಿಸಬೇಕೆಂಬ ಭಾವನೆ ಎಲ್ಲಾ ಧರ್ಮ ಹಾಗೂ ಜಾತಿಯ ಮತದಾರರಲ್ಲಿ ಬಂದಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನರಲ್ಲಿ ಭಯ ಹುಟ್ಟಿಸಲಾಗಿದೆ: ಯುವ ಸಮುದಾಯ ಜಾಗೃತವಾಗಿದೆ. ಬಿಜೆಪಿ ಗೆದ್ದರೆ ಅಲ್ಪಸಂಖ್ಯಾತರಿಗೆ ತೊಂದರೆಯಾಗುತ್ತದೆ ಎಂದೆಲ್ಲಾ ಅಪಪ್ರಚಾರದೊಂದಿಗೆ ಜನರಲ್ಲಿ ಭಯ ಹುಟ್ಟಿಸಿ, ದಾರಿ ತಪ್ಪಿಸುವುದರ ಬಗ್ಗೆ ಅರಿತಿದ್ದಾರೆ. ಇದು ಮುಂದುವರೆಯದಂತೆ ಜನರಲ್ಲಿ ಅರಿವು ಮೂಡಿಸುತ್ತಿದ್ದಾರೆ. ಹಣ ಹಾಗೂ ಆಮಿಷದಿಂದ ಚುನಾವಣೆ ಗೆಲ್ಲಲಾಗದು ಎನ್ನುವುದನ್ನು ಅಭ್ಯರ್ಥಿಗಳಿಗೆ ಅರ್ಥ ಮಾಡಿಸಿದ್ದಾರೆ. ಚುನಾವಣೆಯಲ್ಲಿ ಗೆದ್ದ ಬಳಿಕ ಬಡಾವಣೆಗಳಿಗೆ ಒಮ್ಮೆಯೂ ಭೇಟಿ ಕೊಡದ, ಜನರ ಯೋಗಕ್ಷೇಮ ವಿಚಾರಿಸದ, ಅವರ ಕಷ್ಟಸುಖದಲ್ಲಿ ಭಾಗಿಯಾದವರನ್ನು ತಿರಸ್ಕರಿಸಿ, ಜನರೊಟ್ಟಿಗಿದ್ದು ಕೆಲಸ ಮಾಡುವ ವ್ಯಕ್ತಿ ಆಯ್ಕೆ ಮಾಡಬೇಕೆಂಬ ವಾಸ್ತವ ಅರ್ಥ ಮಾಡಿಸಿದ್ದಾರೆ ಎಂದು ತಿಳಿಸಿದರು.

ಜನರ ಕಷ್ಟಕ್ಕೆ ಸ್ಪಂದಿಸಿದ್ದೇನೆ: ನಾನು ಗಾಯತ್ರಿಪುರಂ ಕಾರ್ಪೊರೇಟರ್ ಆಗಿದ್ದಾಗ ರಸ್ತೆ, ಚರಂಡಿ, ಉದ್ಯಾನ, ಬೀದಿದೀಪ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನೂ ಸಮರ್ಪಕವಾಗಿ ಕಲ್ಪಿಸಿದ್ದರಿಂದ ಒಟ್ಟು ಮೂರು ಬಾರಿ ನನ್ನನ್ನು ಆಯ್ಕೆ ಮಾಡಿದರು. ಮೇಯರ್ ಆಗಿ ಇಡೀ ಮೈಸೂರು ನಗರದ ಅಭಿವೃದ್ಧಿ ಮಾಡಿದ್ದೆ. ಎರಡು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ಅತ್ಯಧಿಕ ಮತ ನೀಡಿದರು. ಸೋತರೂ ಸಾಧ್ಯವಾದಷ್ಟು ಕ್ಷೇತ್ರದ ಕೆಲಸ ಮಾಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಕ್ಕೆ ಸ್ಪಂದಿಸಿದ್ದೇನೆ. ಎರಡು ಬಾರಿ ಅಲ್ಪ ಮತಗಳಿಂದ ಪರಾಭವಗೊಂಡಿದ್ದರ ಬಗ್ಗೆ ಜನರಲ್ಲಿ ಅನುಕಂಪವಿದೆ. ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ ಸೇವೆ ಜೊತೆಗೆ ಕೌಶಲ್ಯ ತರಬೇತಿಯೊಂದಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸ್ಪಷ್ಟ ಗುರಿ ಇದೆ. ಈ ಬಾರಿ ಅಧಿಕ ಮತಗಳಿಂದ ಗೆಲ್ಲಿಸಿ, ಸೇವೆಗೆ ಅವಕಾಶ ನೀಡುತ್ತೀರೆಂದು ನಂಬಿದ್ದೇನೆ ಎಂದು ಹೇಳಿದರು.

ಜನರಿಗೆ ಸತ್ಯದ ಅರಿವಾಗಿದೆ: ಅಪಪ್ರಚಾರ, ಸುಳ್ಳು, ಅನ್ಯಾಯವನ್ನು ಅರ್ಥೈಸಿಕೊಳ್ಳುವ ಅರಿವು ಜನರಲ್ಲಿದೆ. ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರ ಎಲ್ಲಾ ಧರ್ಮ, ಜಾತಿಯವರಿಗೂ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡಿದೆ. ದೇಶದಲ್ಲಿ ಸುರಕ್ಷಿತ ವಾತಾವರಣ ಸೃಷ್ಟಿಯಾಗಿದೆ. ಅಲ್ಪಸಂಖ್ಯಾತರು, ಹಿಂದುಳಿದವರ ಅಭಿವೃದ್ಧಿಗೆ ಸಾಕಷ್ಟು ಕಾರ್ಯಕ್ರಮ ರೂಪಿಸಲಾಗಿದೆ. ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವುದು, ಗುತ್ತಿಗೆ ಪದ್ಧತಿ ರದ್ದು ಮಾಡಿ ನೇರ ವೇತನ ಪಾವತಿ ವ್ಯವಸ್ಥೆ ಹೀಗೆ ಪರಿಣಾಮಕಾರಿ ನಿರ್ಧಾರಗಳಾಗಿವೆ. ಎಲ್ಲರೂ ಸಮಾನವಾಗಿ ಬದುಕುವಂತಹ ವಾತಾವರಣ ನಿರ್ಮಾಣವಾಗಿದೆ. ಬಿಜೆಪಿ ವಿರುದ್ಧ ಅಪಪ್ರಚಾರದ ಬಗ್ಗೆ ಜನರಿಗೂ ತಿಳಿದಿದೆ. ಹಾಗಾಗಿ ಎಲ್ಲರೂ ಮತ ನೀಡಿ, ಆಶೀರ್ವದಿಸಬೇಕೆಂದು ಮತದಾರರಲ್ಲಿ ಮನವಿ ಮಾಡಿದರು.



ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರ ಸೋಮವಾರ ಯುವ ಮುಖಂಡ, ಖ್ಯಾತ ಉದ್ಯಮಿ ಎನ್.ಸಂದೇಶ್ ಹದಿನಾರು ಗ್ರಾಮದಲ್ಲಿ ಪಾದಯಾತ್ರೆ ಮೂಲಕ ಮತಯಾಚಿಸಿದರು. ಈ ವೇಳೆ ಗ್ರಾಮದ ಯಜಮಾನರಾದ ನಂಜಪ್ಪ, ಗ್ರಾಪಂ ಸದಸ್ಯ ಅಭಿಷೇಕ್, ಗುರುಮಲ್ಲು, ರಾಜೇಶ್ ಇತರರಿದ್ದರು.

ಬಿಜೆಪಿ ಬೆಂಬಲಿಸಿ: ಹಿಂದೂಪರ ಸಂಘಟನೆಗಳ ಮನವಿ



ಮೈಸೂರು, ಮೇ 8(ಪಿಎಂ)–ಈ ಬಾರಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸುವಂತೆ ರಾಜ್ಯದ ಜನತೆಯಲ್ಲಿ ಆರ್‌ಎಸ್‌ಎಸ್, ವಿಹೆಚ್‌ಪಿ ಮತ್ತು ಭಜರಂಗದಳ ಸಂಘಟನೆಗಳು ಮನವಿ ಮಾಡಿವೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆರ್‌ಎಸ್‌ಎಸ್ ಮುಖಂಡ ಪುಟ್ಟಸ್ವಾಮಿ, ಭಾರತದ ರಾಷ್ಟ್ರೀಯತೆ, ದೇಶದ ಭದ್ರತೆ ಹಾಗೂ ಅಖಂಡತೆಗಾಗಿ ಬಿಜೆಪಿಗೆ ಮತದಾನ ಮಾಡುವಂತೆ ಕೋರಿದರು.


ಬಿಜೆಪಿ ಮುಖಂಡ ಮಂಜುನಾಥ್ ಮಾತನಾಡಿ, ಬಿಜೆಪಿಯಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶವಿಲ್ಲ. ಅಲ್ಲದೆ, ಯುವ ಜನತೆಗೆ ಉತ್ತೇಜನ ನೀಡುವ ಪಕ್ಷವಾಗಿದೆ. ಹಾಗಾಗಿಯೇ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ 73 ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು. ಭಜರಂಗದಳದ ಕಾರ್ಯಕರ್ತರಾದ ಜಯಸಿಂಹ, ಮಹೇಂದ್ರ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಉತ್ತಮ ಪ್ರಜಾಕೀಯ ಪಾರ್ಟಿ ಬೆಂಬಲಿಸಿ



ಮೈಸೂರು,ಮೇ 8(ಪಿಎಂ)–ಈ ಬಾರಿ ಚುನಾವಣೆಯಲ್ಲಿ ಉತ್ತಮ ಪ್ರಜಾಕೀಯ ಪಾರ್ಟಿ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಕೆಆರ್ ಕ್ಷೇತ್ರದ ಮತದಾರ ಹಾಗೂ ಪಾರ್ಟಿಯ ಬೆಂಬಲಿಗ ಶೈಲಜೇಶ್ ಮತದಾರರಲ್ಲಿ ಮನವಿ ಮಾಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರೇ ಮುಖ್ಯ ಪಾತ್ರ ವಹಿಸಬೇಕೆಂದು ಈ ಪಾರ್ಟಿಯಲ್ಲಿ ಯಾವುದೇ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಅವಕಾಶ ಕಲ್ಪಿಸಿಲ್ಲ. ಚುನಾವಣಾ ಆಯೋಗದ ನಿಯಮಕ್ಕಾಗಿ ಕೇವಲ 100 ಸದಸ್ಯರು ಪಾರ್ಟಿಯಲ್ಲಿ ಇದ್ದಾರೆ ಎಂದರು. ರಾಜ್ಯದ 110 ಕ್ಷೇತ್ರಗಳಲ್ಲಿ ಪಾರ್ಟಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಇದರಲ್ಲಿ ಮೈಸೂರು ಜಿಲ್ಲೆಯ 11 ಕ್ಷೇತ್ರಗಳ ಪೈಕಿ 9 ಕ್ಷೇತ್ರಗಳಲ್ಲಿ ಪಾರ್ಟಿ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ ಎಂದರು. ಎನ್‌ಆರ್ ಕ್ಷೇತ್ರದ ಅಭ್ಯರ್ಥಿ ಲೀಲಾ ಶಿವಕುಮಾರ್, ಕೆಆರ್ ಕ್ಷೇತ್ರದ ಅಭ್ಯರ್ಥಿ ಸಮಲತಾ, ಕೆಆರ್‌ನಗರ ಕ್ಷೇತ್ರದ ಅಭ್ಯರ್ಥಿ ಮೋಹನ್, ಚಾಮರಾಜ ಕ್ಷೇತ್ರದ ಅಭ್ಯರ್ಥಿ ಪ್ರಭಾ ನಂದೀಶ್, ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಹರೀಶ್ (ಪಕ್ಷದ ಅಭ್ಯರ್ಥಿಗಳು) ಗೋಷ್ಠಿಯಲ್ಲಿದ್ದರು.



ಮಂಡಿಮೊಹಲ್ಲಾದಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಕಾರ್ಯಕರ್ತರು, ಅಭಿಮಾನಿಗಳು ಇತರರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ನಜರ್‌ಬಾದ್‌ನಲ್ಲಿ ಮತಯಾಚನೆ ಮಾಡಿದರು. ಈ ವೇಳೆ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖಂಡ ಸುರೇಶ್ ಮುಂತಾದವರಿದ್ದಾರೆ.

ಗೋಲ್ಡನ್ ಟೆಂಪಲ್ ಬಳಿ ಮತ್ತೊಂದು ಸ್ಫೋಟ

ಅಮೃತಸರ: ಅಮೃತಸರದ ಗೋಲ್ಡನ್ ಟೆಂಪಲ್ ಬಳಿ ಹೆರಿಟೇಜ್ ಸ್ಟ್ರೀಟ್‌ನಲ್ಲಿ ಮೇ 6ರಂದು ಸ್ಫೋಟ ಸಂಭವಿಸಿದ ಸ್ಥಳದ ಸಮೀಪದಲ್ಲೇ ಸೋಮವಾರ ಬೆಳಗ್ಗೆ ಮತ್ತೊಂದು ಸ್ಫೋಟ ಸಂಭವಿಸಿದೆ.

ಈ ಭೀಕರ ಸ್ಫೋಟದಲ್ಲಿ ಯಾವುದೇ ಹಾನಿ ಸಂಭವಿಸಿಲ್ಲ. ಆದರೆ ಸ್ಫೋಟಕ್ಕೆ ಕಾರಣ ಇನ್ನೂ ತಿಳಿದು ಬಂದಿಲ್ಲ.

ಗೋಲ್ಡನ್ ಟೆಂಪಲ್‌ಗೆ ಹೋಗುವ ಹೆರಿಟೇಜ್ ಸ್ಟ್ರೀಟ್‌ನಲ್ಲಿ ಶನಿವಾರ ಸಂಭವಿಸಿದ ಸ್ಥಳದ ಸಮೀಪವೇ ಈ ಭೀಕರ ಸ್ಫೋಟ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರತ್ಯಕ್ಷದರ್ಶಿಗಳ ಪ್ರಕಾರ, ಬೆಳಗ್ಗೆ 6:30ರ ಸುಮಾರಿಗೆ ಈ ಸ್ಫೋಟ ಸಂಭವಿಸಿದೆ. ಪೊಲೀಸರು, ಫೋರೆನ್ಸಿಕ್ ತಂಡಗಳು ತಕ್ಷಣವೇ ಸ್ಥಳಕ್ಕೆ ಆಗಮಿಸಿ ತನಿಖೆಗಾಗಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಪ್ರಾರಂಭಿಸಿದ್ದಾರೆ.

ಕೆ.ಆರ್.ಕ್ಷೇತ್ರಕ್ಕೆ ಪ್ರತ್ಯೇಕ ಪ್ರಣಾಳಿಕೆ: ಮತದಾರರಿಗೆ ಶ್ರೀವತ್ಸ ಮನವರಿಕೆ

ಮೈಸೂರು, ಮೇ 8–ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.



ಶ್ರೀವತ್ಸ ಮನೆ ಮನೆಗೆ ತೆರಳಿ ಮತ ಯಾಚಿಸಿ, ಪ್ರಣಾಳಿಕೆಯಲ್ಲಿ ತಿಳಿಸಿರುವಂತೆ ಕ್ಷೇತ್ರ ಅಭಿವೃದ್ಧಿಪಡಿಸುವುದಾಗಿ ಭರವಸೆ ನೀಡಿದರು.

ರಾಜ್ಯ ಬಿಜೆಪಿಯ ಪ್ರಣಾಳಿಕೆ ಜೊತೆಗೆ ಕೃಷ್ಣರಾಜ ಕ್ಷೇತ್ರಕ್ಕೆ ಸೀಮಿತವಾದಂತೆ ಪ್ರತ್ಯೇಕ ಪ್ರಣಾಳಿಕೆ ರೂಪಿಸಲಾಗಿದೆ. ರಾಜಕಾಲುವೆಗೆ ಒಳಚರಂಡಿ ನೀರು ಸೇರದಂತೆ ಕ್ರಮ, ವಿದ್ಯಾರಣ್ಯಪುರಂ ತ್ಯಾಜ್ಯ ನಿರ್ವಹಣೆ ಘಟಕದ ಸಮಸ್ಯೆಗೆ ಶಾಶ್ವತ ಪರಿಹಾರ, ಅಗ್ರಹಾರದ ವಾಣಿವಿಲಾಸ ಮಾರುಕಟ್ಟೆ ನವೀಕರಣ, ನಂಜುಮಳಿಗೆ ಮಾರುಕಟ್ಟೆ ಪ್ರದೇಶಕ್ಕೆ ಆಧುನಿಕ ಸ್ಪರ್ಶ, ಎಂ.ಜಿ.ರಸ್ತೆ ಮಾರುಕಟ್ಟೆಗೆ ಕಾಯಕಲ್ಪ, ಸರ್ಕಾರಿ ಪಿಯು ಕಾಲೇಜುಗಳಿಗೆ ಆಧುನಿಕ ಪ್ರಯೋಗಾಲಯ ಹಾಗೂ ಗ್ರಂಥಾಲಯ ಸ್ಥಾಪನೆ, ಅಗತ್ಯಕ್ಕನುಗುಣವಾಗಿ ಪ್ರೌಢಶಾಲೆ ಹಾಗೂ ಪಿಯು ಕಾಲೇಜು ಸ್ಥಾಪನೆ, ಮಾರುಕಟ್ಟೆ ಇನ್ನಿತರ ನಿಗದಿತ ಪ್ರದೇಶದಲ್ಲಿ ಉಚಿತ ವೈಫೈ ವ್ಯವಸ್ಥೆ, ಮಹಿಳೆಯರು, ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಕ್ಷೇತ್ರಾದ್ಯಂತ ಸಿಸಿ ಕ್ಯಾಮರಾ ಅಳವಡಿಕೆ, ಸರ್ವೆ ನಂ.4ರ ವ್ಯಾಪ್ತಿಯ ಬಡಾವಣೆ ನಿವಾಸಿಗಳ ಸಮಸ್ಯೆ ಪರಿಹಾರ, ಮೈಸೂರು–ಬೆಂಗಳೂರು ಮಾರ್ಗದ ಕೆಲ ರೈಲು ಸಂಚಾರ ಅಶೋಕಪುರಂ, ಚಾಮರಾಜಪುರಂ ನಿಲ್ದಾಣದವರೆಗೆ ವಿಸ್ತರಣೆಗೆ ಪ್ರಯತ್ನ, ದಿನವಿಡೀ ನೀರು ಪೂರೈಕೆ, ಪ್ರತೀ ವಾರ್ಡ್‌ನಲ್ಲೂ ಕ್ಲಿನಿಕ್, ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಉದ್ಯಾನಗಳ ಅಭಿವೃದ್ಧಿ, ಹೀಗೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ರಾಮಕೃಷ್ಣ ವಿದ್ಯಾಲಯಕ್ಕೆ ಶೇ.100 ಫಲಿತಾಂಶ

ಮೈಸೂರು, ಮೇ 8(ಸಿಎನ್)–ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಲಯ ಶೇ.100ರಷ್ಟು ಫಲಿತಾಂಶ ಸಾಧಿಸಿದೆ. ಶಾಲೆಯ 104 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. 625ಕ್ಕೆ 620 ಅಂಕ ಪಡೆಯುವ ಮೂಲಕ ಹೆಚ್.ಆರ್.ನಿರಂಜನ್ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಕನ್ನಡದಲ್ಲಿ 6, ಇಂಗ್ಲಿಷ್‌ನಲ್ಲಿ 3, ಹಿಂದಿಯಲ್ಲಿ 5, ಸಮಾಜ ವಿಜ್ಞಾನ 4, ಗಣಿತದಲ್ಲಿ ಓರ್ವ ವಿದ್ಯಾರ್ಥಿ 100ಕ್ಕೆ 100 ಅಂಕ ಪಡೆದಿದ್ದಾನೆ. ಶಾಲೆಯ 104 ವಿದ್ಯಾರ್ಥಿಗಳ ಪೈಕಿ 78 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ವರುಣದಲ್ಲಿ ಸಿದ್ದರಾಮಯ್ಯ ಗೆಲುವಿನ ಸ್ಪಷ್ಟ ಸಂದೇಶ ಸಿಕ್ಕಿದೆ

ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ವಿಶ್ವಾಸ

ಮೈಸೂರು,ಮೇ 8(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾವನಾತ್ಮಕ ಸಂಬಂಧ ಮತ್ತು ಸ್ವ ಇಚ್ಛೆಯಿಂದ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಅವರ ಗೆಲುವಿನ ಸ್ಪಷ್ಟ ಸಂದೇಶವನ್ನು ಈಗಾಗಲೇ ಕ್ಷೇತ್ರದ ಜನತೆ ನೀಡಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರೂ ಆದ ಕೆಆರ್ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ತಿಳಿಸಿದ್ದಾರೆ.

ಬಿಜೆಪಿಯವರು ಬಹುರಾಷ್ಟ್ರೀಯ ಕಂಪನಿಯ ರೀತಿ ನೂರಾರು ಕೋಟಿ ಖರ್ಚು ಮಾಡುತ್ತಿದ್ದಾರೆ. ಅವರ ಜನಾಂಗದ ಜನಸಂಖ್ಯೆ ಹೆಚ್ಚಿದೆ ಎನ್ನುವ ಮಾನದಂಡದಲ್ಲಿ ವಿ.ಸೋಮಣ್ಣನವರನ್ನು ಒತ್ತಾಯಪೂರ್ವಕವಾಗಿ ವರುಣ ಕ್ಷೇತ್ರಕ್ಕೆ ಕರೆತಂದು ಬಿಜೆಪಿ ಕಣಕ್ಕಿಳಿಸಿದೆ. ವಿ.ಸೋಮಣ್ಣನವರು ತಿಂಗಳುಗಳ ಹಿಂದೆ ತಮಗೆ ಮತ್ತು ತಮ್ಮ ಕುಟುಂಬಕ್ಕೆ ಕಾಂಗ್ರೆಸ್‌ನಲ್ಲಿ ಟಿಕೆಟ್ ಬೇಕೆಂದು ಕೇಳಿದ್ದರು ಎಂಬುದನ್ನು ಮಾಧ್ಯಮದಲ್ಲಿ ನೋಡಿದ್ದೇನೆ. ಚಾಮರಾಜನಗರ ಬೇಕೆಂದರೆ ವರುಣಾದಲ್ಲಿ ನಿಲ್ಲಬೇಕೆಂಬ ಆಫರ್‌ಗೆ ಒಳಪಟ್ಟು ವಿ.ಸೋಮಣ್ಣ,



ಎಂ.ಪ್ರದೀಪ್‌ಕುಮಾರ್

ಇಚ್ಛೆಯಿಲ್ಲದೆ ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದಾರೆ. ಚುನಾವಣೆಗೆ ಇಚ್ಛೆಯಿಂದ ಸ್ಪರ್ಧಿಸಬೇಕೇ ಹೊರತು ಒತ್ತಾಡದಿಂದಲ್ಲ. ಸಿದ್ದರಾಮಯ್ಯನವರು ಮೊದಲನೇ ಚುನಾವಣೆಯಲ್ಲೂ ಸ್ವಕ್ಷೇತ್ರದಿಂದಲೇ ಸ್ಪರ್ಧಿಸಿದ್ದರು. ಈಗಲೂ ಅದೇ ಒಂದು ಭಾವನಾತ್ಮಕ ಸಂಬಂಧದಿಂದ ಇಚ್ಛೆಯ ಮೇಲೆ ಸ್ಪರ್ಧಿಸಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರಿಂದ ಅಧಿಕಾರಕ್ಕೆ ಬಂದ ಬಿಜೆಪಿ, ಅವರನ್ನು ಹೇಗೆ ನಡೆಸಿಕೊಳ್ಳುತ್ತಿದೆ ಎಂದು ಎಲ್ಲರೂ ಗಮನಿಸುತ್ತಿದ್ದಾರೆ. ಬಿಜೆಪಿಯವರು ಕರ್ನಾಟಕದ ಮಗ ಯಡಿಯೂರಪ್ಪ ಅವರನ್ನು ಬಿಟ್ಟು ದಿಲ್ಲಿಯ ಮಗನನ್ನು ಕರೆ ತಂದು ಅಧಿಕಾರಕ್ಕೆ ಬರಲು ಬಯಸಿದ್ದಾರೆ. ವೀರಶೈವ–ಲಿಂಗಾಯತ ಸಮಾಜ ತುಂಬಾ ಸೂಕ್ಷ್ಮವಾಗಿ ಗಮನಿಸುತ್ತಿದೆ. ಈ ಸಮುದಾಯವೂ ಸೇರಿದಂತೆ ರಾಜ್ಯದ ಜನತೆ ಎಲ್ಲದಕ್ಕೂ ಉತ್ತರ ಕೊಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಡಿ ಕೋಟೆ: ಬಿಎಸ್‌ಪಿ ಅಭ್ಯರ್ಥಿ ಬಗ್ಗೆ ಅಪಪ್ರಚಾರ

ಮೈಸೂರು,ಮೇ 8(ಪಿಎಂ)– ಹೆಚ್‌ಡಿ ಕೋಟೆ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಹೋಟೆಲ್ ಶಿವಣ್ಣ ಅವರು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ ಎಂದು ಬಿಎಸ್‌ಪಿ ಮುಖಂಡ ಡಾ.ಬಿ.ಹೆಚ್.ಚೆನ್ನಕೇಶವಮೂರ್ತಿ ದೂರಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಹೋಟೆಲ್ ಶಿವಣ್ಣ ಅವರು ಕಾಂಗ್ರೆಸ್ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಮತ್ತು ಕೆಲ ದಲಿತ ಸಂಘಟನೆಗಳು ಅಪಪ್ರಚಾರ ಮಾಡುತ್ತಿವೆ. ಸೋಲಿನ ಭೀತಿಯಿಂದ ಇವರು ಬಿಎಸ್‌ಪಿ ಅಭ್ಯರ್ಥಿ ಕಣದಲ್ಲೇ ಇಲ್ಲ ಎಂದು ಬಿಂಬಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕ್ಷೇತ್ರದ ಹಾಲಿ ಶಾಸಕರೂ ಆದ ಕಾಂಗ್ರೆಸ್ ಅಭ್ಯರ್ಥಿಯೊಂದಿಗೆ ಬಿಎಸ್‌ಪಿ ಯಾವುದೇ ಹೊಂದಾಣಿಕೆ ಮಾಡಿಕೊಂಡಿಲ್ಲ. ಹಾಗಾಗಿ ಮತದಾರರು ಬಿಎಸ್‌ಪಿ ಅಭ್ಯರ್ಥಿ ಬೆಂಬಲಿಸಬೇಕೆಂದು ಮನವಿ ಮಾಡಿದರು. ಅಭ್ಯರ್ಥಿ ಹೋಟೆಲ್ ಶಿವಣ್ಣ, ಪಕ್ಷದ ಮುಖಂಡರಾದ ಶಿವಕುಮಾರ್, ಶ್ರೀನಿವಾಸ ಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ಪಂಜಾಬ್ ಕಿಂಗ್ಸ್ ವಿರುದ್ಧ ಕೆಕೆಆರ್‌ಗೆ 5 ವಿಕೆಟ್ ಗೆಲುವು




ಕೋಲ್ಕೊತಾ: ನಾಯಕ ನಿತೀಶ್ ರಾಣಾ (51) ಅರ್ಧ ಶತಕ ಹಾಗೂ ಆಂಡ್ರೆ ರಸೆಲ್ (42) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಕೆಕೆಆರ್ ತಂಡ ಐಪಿಎಲ್ 16ನೇ ಆವೃತ್ತಿಯ 53ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳ ವಿಜಯ ಸಾಧಿಸಿತು.

ಈ ಪಂದ್ಯ ಹಾಲಿ ಆವೃತ್ತಿಯ ಐಪಿಎಲ್‌ನ ಲಾಸ್ಟ್ ಬಾಲ್ ಥ್ರಿಲ್ ಪಂದ್ಯ. ಕೊನೇ ಎಸೆತದಲ್ಲಿ ಕೆಕೆಆರ್ ತಂಡದ ಗೆಲುವಿಗೆ 2 ರನ್ ಬೇಕಾಗಿತ್ತು. ರಿಂಕು ಸಿಂಗ್ ಫೋರ್ ಬಾರಿಸುವ ಮೂಲಕ ಗೆಲುವು ತಂದುಕೊಟ್ಟು ಸಂಭ್ರಮಿಸಿದರು. ಕೆಕೆಆರ್ ತಂಡಕ್ಕೆ ಇದು ಸತತ 2ನೇ ಗೆಲುವಾಗಿದ್ದು, ಹಿಂದಿನ ಪಂದ್ಯದಲ್ಲಿ ಎಸ್‌ಆರ್‌ಎಚ್ ತಂಡವನ್ನು ಮಣಿಸಿತ್ತು. ಅತ್ತ ಪಂಜಾಬ್ ತಂಡಕ್ಕೆ ಸತತ ಎರಡು ಸೋಲು ಎದುರಾಯಿತು. ಹಿಂದಿನ ಪಂದ್ಯದಲ್ಲಿ ಈ ತಂಡ ಮುಂಬಯಿ ಇಂಡಿಯನ್ಸ್‌ಗೆ ಶರಣಾಗಿತ್ತು.

ಈಡನ್ ಗಾರ್ಡನ್ಸ್ ಸ್ಟೇಡಿಯಂನಲ್ಲಿ ನಡೆದ ಹಣಾಹಣಿಯಲ್ಲಿ ಪಂಜಾಬ್ ಕಿಂಗ್ಸ್ ತಂಡ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟದೊಂದಿಗೆ 179 ರನ್ ಬಾರಿಸಿತು. ಪ್ರತಿಯಾಗಿ ಕೆಕೆಆರ್ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 182 ರನ್ ಗಳಿಸಿ ವಿಜಯ ಸಾಧಿಸಿತು.

ಕೆಕೆಆರ್ ತಂಡದ ಆರಂಭಿಕ ಬ್ಯಾಟರ್ ರಹ್ಮನುಲ್ಲಾ ಗುರ್ಬಜ್ 15 ರನ್‌ಗಳಿಗೆ ಔಟಾಗುವ ಮೂಲಕ ತಂಡಕ್ಕೆ ಆಘಾತ ನೀಡಿತು. ಆದರೆ, ಮತ್ತೊಬ್ಬ ಆರಂಭಿಕ ಬ್ಯಾಟರ್ ಜೇಸನ್ ರಾಯ್ 38 ರನ್ ಬಾರಿಸಿ ತಂಡಕ್ಕೆ ಆಧಾರವಾದರು. ಬಳಿಕ ವೆಂಕಟೇಶ್ ಅಯ್ಯರ್ 11 ರನ್ ಕೊಡುಗೆ ಕೊಟ್ಟರು. ಆದರೆ, ಅದಕ್ಕಿಂತ ಮೊದಲು ಆಡಲು ಬಂದ ನಾಯಕ ನಿತೀಶ್ ರಾಣಾ 51 ರನ್ ಬಾರಿಸಿ ತಂಡದ ಗೆಲುವಿಗೆ ಮುನ್ನುಡಿ ಬರೆದರು. ಅಂತಿಮ ಹಂತದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ ಆಂಡ್ರೆ ರಸೆಲ್ 23 ಎಸೆತಗಳಲ್ಲಿ 43 ರನ್ ಬಾರಿಸಿದರು. ರಿಂಕು ಸಿಂಗ್, ಅವರಿಗೆ ಉತ್ತಮ ಜತೆಯಾಟ ನೀಡಿ 10 ಎಸೆತಗಳಿಗೆ 21 ರನ್ ಬಾರಿಸಿದರು. ಪಂಜಾಬ್ ಪರ ರಾಹುಲ್ ಚಾಹರ್ 2 ವಿಕೆಟ್ ಪಡೆದರು. ಈ ಸೋಲಿನೊಂದಿಗೆ ಪಂಜಾಬ್ ನಾಯಕ ಶಿಖರ್ ಧವನ್ (57) ಅರ್ಧ ಶತಕ ವ್ಯರ್ಥಗೊಂಡಿತು. ಬ್ಯಾಟಿಂಗ್ ಆರಂಭಿಸಿದ ಪಂಜಾಬ್ ತಂಡ 21 ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡಿತು. ಆರಂಭಿಕ ಬ್ಯಾಟರ್ ಪ್ರಭ್‌ಸಿಮ್ರಾನ್ ಸಿಂಗ್ 12 ರನ್‌ಗೆ ವಿಕೆಟ್ ಒಪ್ಪಿಸುವ ಮೂಲಕ ನಿರಾಸೆ ಮೂಡಿಸಿದರು. ಬಳಿಕ ಭಾನುಕಾ ರಾಜಪಕ್ಷ ಶೂನ್ಯಕ್ಕೆ ಔಟಾಗುವುದರೊಂದಿಗೆ ತಂಡಕ್ಕೆ ಮತ್ತೊಂದು ಆಘಾತ ಉಂಟಾಯಿತು.



ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು
(ಸಿಎಫ್‌ಟಿಆರ್‌ಐ ಶಾಲೆ)
ಕಟ್ಟಡ ದುರಸ್ಥಿ ಕಾಮಗಾರಿ ಕೆಲಸದ ಬಗ್ಗೆ

ಸಿಎಫ್‌ಟಿಆರ್‌ಐ ಶಾಲೆಯಲ್ಲಿನ ತಂಗುದಾಣ ಕೋಶಡಿಗಳ (Girls Toilet) ದುರಸ್ತಿ ಕಾಮಗಾರಿಗಳ ಬಗ್ಗೆ ಲೋಕೋಪಯೋಗಿ ಇಲಾಖೆಯ ದೃಢೀಕೃತ ಕಂಟ್ರಾಕ್ಟರ್‌ರವರಿಂದ ತಂಗುದಾಣ ಕೋಶಡಿಗಳ ದುರಸ್ಥಿ ಕಾಮಗಾರಿಗೆ ತಗಲುವ ಹಣಕಾಸು ವೆಚ್ಚವನ್ನು ನಿಗಧಿಪಡಿಸಿ ಸಲ್ಲಿಸಬೇಕೆಂದು ಕೋರಲಾಗಿದೆ. ದುರಸ್ಥಿ ಕಾಮಗಾರಿಯ ಪೂರ್ಣ ಮಾಹಿತಿಯ ವಿವರಗಳನ್ನು ಸಿಎಫ್‌ಟಿಆರ್‌ಐ ಶಾಲೆಯಲ್ಲಿ ಪಡೆಯ ಬಹುದಾಗಿದೆ. ಹಣಕಾಸು ವೆಚ್ಚದ ವಿವರಗಳುಳ್ಳ ಪೂರ್ಣ ಮಾಹಿತಿಯ ವಿವರಗಳನ್ನು ಈ ಜಾಹಿರಾತು ಪ್ರಕಟವಾದ 7 (ಏಳು ದಿನ) ಗಳೊಳಗಾಗಿ ಶಾಲೆಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಸಹಿ/-**ಗೌರವ ಕಾರ್ಯದರ್ಶಿಗಳು,**
ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು-570020

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ ರಾಘವೇಂದ್ರ ನಗರ 12ನೇ ಅಡ್ಡರಸ್ತೆ, ಮನೆ ನಂಬರ್ **190/1A** ರಲ್ಲಿ ವಾಸವಾಗಿರುವ **N.V.** ಗೋಪಾಲ್‌ರವರ ಧರ್ಮಪತ್ನಿಯಾದ ಶ್ರೀಮತಿ ಶಶಿಕಲಾ ಆದ ನಾನು ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇ ನೆಂದರೆ ಮೈಸೂರು ತಾಲ್ಲೂಕು ಆಲನಹಳ್ಳಿ ಗ್ರಾಮ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಆಲನಹಳ್ಳಿ ಗ್ರಾಮ ಪಂಚಾಯತಿಯ ಖಾತೆ ಜಂಜರ್ ನಂ. 428, ಆಸ್ತಿ ಸಂಖ್ಯೆ 368, ಯುನಿಕ್ ಸಂಖ್ಯೆ 152200433036002718 ರ ಸ್ವತ್ತಿನ ಪೂರ್ವ–ಪಶ್ಚಿಮ 55 ಅಡಿ, ಉತ್ತರ–ದಕ್ಷಿಣ 50 ಅಡಿಗಳುಳ್ಳ ಸ್ವತ್ತಿನ ಮೂಲ ನೋಂದಣಿ ಕ್ರಯಾ ಪತ್ರ ದಿನಾಂಕ 18–01–2006 1ನೇ ಪುಸ್ತಕದ ದಸ್ತಾವೇಜು ನಂಬರ್ **MYN-1-17430-2005-06** ಆಗಿ ಶ್ರೀ ಪಿ. ಗೋವಿಂದರಾಜು, **S/o** ಲೇಟ್ ಪುಟ್ಟೇಗೌಡರವರು ಖರೀದಿಸಿದ್ದು, ಸರದಿ ಕ್ರಯ ಪತ್ರವು ನಾನು ದಿನಾಂಕ 25–3–2023 ರಂದು ನಜರ್‌ಬಾದ್ ಡೈರಿಯಿಂದ ರಾಘವೇಂದ್ರ ನಗರಕ್ಕೆ ಆಟೋದಲ್ಲಿ ಪ್ರಯಾಣಿಸುವಾಗ ಸರದಿ ಮೂಲ ಕ್ರಯ ಪತ್ರವು ಕಳೆದುಹೋಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 8–5–2023 ರಂದು ಮೈಸೂರಿನ ನಜರ್‌ಬಾದ್ ಪೊಲೀಸ್ ದೂರನ್ನು ನೀಡಿರುತ್ತೇನೆ. ನಾನು ನೀಡಿರುವ ದೂರಿನ ಉಲ್ಲೇಖ ಸಂಖ್ಯೆ **G PET No. 235/2023** ದಿನಾಂಕ 8–5–2023 ರ ಪ್ರಕಾರ ಸ್ವೀಕೃತಿ ಪತ್ರವನ್ನು ನಮಗೆ ನೀಡಿರುತ್ತಾರೆ.

ಆದ್ದರಿಂದ ಮೇಲೆ ತಿಳಿಸಿರುವ ದಿನಾಂಕ 18–1–2006 ನೊಂದಾಯಿತ ಮೂಲ ಕ್ರಯ ಪತ್ರವು ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಮೇಲೆ ತಿಳಿಸಿರುವ ನನ್ನ ವಿಳಾಸಕ್ಕಾಗಲಿ ಅಥವಾ ಖುದ್ದಾಗಿ ನನಗಾಗಲಿ ಅಥವಾ ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಗೆ ತಲುಪಿಸಬೇಕಾಗಿ ಸಮಸ್ತ ಸಾರ್ವಜನಿಕರಿಲ್ಲಿ ಈ ಪ್ರಕಟಣೆಯ ಮೂಲಕ ತಿಳಿಸುತ್ತೇನೆ.

ಸ್ಥಳ: ಮೈಸೂರು — ಸಹಿ/–
ದಿನಾಂಕ: 8–5–2023 — ಶ್ರೀಮತಿ ಶಶಿಕಲಾ



ಮೈಸೂರು ಮಿತ್ರ

ಮೂರನೇ ಪುಟದಿಂದ

ಈ ಬಾರಿ SSLC ಫಲಿತಾಂಶ ಕುಸಿತ

ಹಾಸನ (96.68%) ಮೊದಲ ಮೂರು ಸ್ಥಾನದಲ್ಲಿದ್ದರೆ, ಯಾದಗಿರಿ (75.49%) ಕೊನೆಯ ಸ್ಥಾನ ಪಡೆದಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾದ 8,35,102 ವಿದ್ಯಾರ್ಥಿಗಳ ಪೈಕಿ 7,00,619 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧ್ಯಕ್ಷ ರಾಮಚಂದ್ರನ್ ಆರ್., ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್‌ಸಿಂಗ್ ಹಾಗೂ ಎಸ್‌ಎಸ್‌ಎಲ್‌ಸಿ ಮಂಡಳಿ ನಿರ್ದೇಶಕ ಗೋಪಾಲ್‌ಕೃಷ್ಣ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಸಕ್ತ ಸಾಲಿನ ಫಲಿತಾಂಶವನ್ನು ಪ್ರಕಟಿಸಿದರು. ಸರ್ಕಾರಿ ಶಾಲೆಗಳ ಶೇಕಡಾವಾರು ಫಲಿತಾಂಶ ಏರಿಕೆಯಾಗಿರುವುದು ಈ ಸಾಲಿನ ವಿಶೇಷತೆಯಾಗಿದೆ. ಶೇ.70ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಗೊಂಡಿದ್ದಾರೆ. ಅದರಲ್ಲೂ 61003ರಷ್ಟು ವಿದ್ಯಾರ್ಥಿಗಳು ಶೇಕಡ 90ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. 147634 ವಿದ್ಯಾರ್ಥಿಗಳು ಶೇಕಡ 80ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ.

5833 ಸರ್ಕಾರಿ ಶಾಲೆಗಳಲ್ಲಿನ ಒಟ್ಟು 3,33,223 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 2,89,035 (86.74%) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 3622 ಅನುದಾನಿತ ಶಾಲೆಗಳಿಂದ ಒಟ್ಟು 2,05,491 ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪೈಕಿ 1,75,974 (85.64%) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಅನುದಾನ ರಹಿತ 6038 ಶಾಲೆಗಳಿಂದ 2,48,130 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 2,25,533 (90.89%) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರಥಮ ಭಾಷೆ ಕನ್ನಡದಲ್ಲಿ 125ಕ್ಕೆ 125 ಅಂಕಗಳನ್ನು 14,983 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ದ್ವಿತೀಯ ಭಾಷೆಯಲ್ಲಿ 100ಕ್ಕೆ 100ರಷ್ಟು 9754, ತೃತೀಯ ಭಾಷೆಯಲ್ಲಿ 100ಕ್ಕೆ ನೂರರಷ್ಟು 16,170, ಗಣಿತದಲ್ಲಿ 100ಕ್ಕೆ 100ರಷ್ಟು 2132, ವಿಜ್ಞಾನದಲ್ಲಿ 100ಕ್ಕೆ 100ರಷ್ಟು 983, ಸಮಾಜ ವಿಜ್ಞಾನದಲ್ಲಿ 100ಕ್ಕೆ 100ರಷ್ಟು 8311 ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ಈ ಬಾರಿ 1517 ಸರ್ಕಾರಿ ಶಾಲೆಯಲ್ಲಿ ಶೇ.100ಕ್ಕೆ 100ರಷ್ಟು ಫಲಿತಾಂಶ ಬಂದಿದೆ. ಅದೇ ರೀತಿ 482 ಅನುದಾನಿತ ಶಾಲೆ, 1824 ಅನುದಾನ ರಹಿತ ಶಾಲೆಗಳಲ್ಲಿ 100ಕ್ಕೆ 100ರಷ್ಟು ಫಲಿತಾಂಶ ಬಂದಿದೆ. ಒಟ್ಟು 3823 ಶಾಲೆಗಳಲ್ಲಿ ಶೇ.100ಕ್ಕೆ 100ರಷ್ಟು ಫಲಿತಾಂಶ ದಾಖಲಾಗಿದೆ. ಉತ್ತರ ಪತ್ರಿಕೆಗಳ ಛಾಯಾಪ್ರತಿ, ಮರು ಎಣಿಕೆ, ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಹಾಗೂ ಪೂರಕ ಪರೀಕ್ಷೆಗೆ ನೋಂದಾಯಿಸಲು ಮೇ 15 ರವರೆಗೆ ಅವಕಾಶ ಮಾಡಿಕೊಡಲಾಗಿದೆ ಎಂದರು.

ಜಿಲ್ಲಾವಾರು ಫಲಿತಾಂಶ

ಚಿತ್ರದುರ್ಗ	96.8%	ಉಡುಪಿ	89.49%
ಮಂಡ್ಯ	96.74%	ದಕ್ಷಿಣ ಕನ್ನಡ	89.47%
ಹಾಸನ	96.68%	ತುಮಕೂರು	89.43%
ಬೆಂ.ಗ್ರಾಮಾಂತರ	96.48%	ರಾಮನಗರ	89.42%
ಚಿಕ್ಕಬಳ್ಳಾಪುರ	96.15%	ಹಾವೇರಿ	89.11%
ಕೋಲಾರ	94.6%	ಶಿರಸಿ	87.39%
ಚಾಮರಾಜನಗರ	94.37%	ಧಾರವಾಡ	86.55%
ಮಧುಗಿರಿ	93.23%	ಗದಗ	86.51%
ಕೊಡಗು	93.19%	ಬೆಳಗಾವಿ	85.85%
ವಿಜಯನಗರ	91.41%	ಬಾಗಲಕೋಟೆ	85.14%
ವಿಜಯಪುರ	91.23%	ಕಲಬುರಗಿ	84.51%
ಚಿಕ್ಕೋಡಿ	91.07%	ಶಿವಮೊಗ್ಗ	84.04%
ಉತ್ತರ ಕನ್ನಡ	90.53%	ರಾಯಚೂರು	84.02%
ದಾವಣಗೆರೆ	90.43%	ಬಳ್ಳಾರಿ	81.54%
ಕೊಪ್ಪಳ	90.27%	ಬೆಂ.ಉತ್ತರ	80.93%
ಮೈಸೂರು	89.75%	ಬೆಂ.ದಕ್ಷಿಣ	78.95%
ಚಿಕ್ಕಮಗಳೂರು	89.69%	ಬೀದರ್	78.73%
		ಯಾದಗಿರಿ	75.49%

ಮೈಸೂರು ಜಿಲ್ಲೆಗೆ 16ನೇ ಸ್ಥಾನ

31,405 ಉತ್ತೀರ್ಣರಾಗಿದ್ದರೆ, 3,586 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಶೇ.89.75ರಷ್ಟು ಫಲಿತಾಂಶ ಬಂದಿದೆ. ಖಾಸಗಿ ಅಭ್ಯರ್ಥಿಗಳು ಶೇ.5.12, ಪುನರಾವರ್ತಿತ ಶಾಲಾ ಅಭ್ಯರ್ಥಿಗಳು 46.26, ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು 7.19, ಶಾಲಾ ಅಭ್ಯರ್ಥಿಗಳು ಶೇ.19.79ರಷ್ಟಾಗಿದೆ. ಒಟ್ಟು 36,331 ನೋಂದಾಯಿತರಲ್ಲಿ 31,615 ಪಾಸಾಗಿದ್ದರೆ, 4,716 ಅನುತ್ತೀರ್ಣವಾಗಿದ್ದಾರೆ.

ಬಾಲಕಿಯರೇ ಮೇಲುಗೈ: ಎಂದಿನಂತೆ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಗೆ ಹಾಜರಾದ 18,015 ವಿದ್ಯಾರ್ಥಿನಿಯರಲ್ಲಿ 16,280 ವಿದ್ಯಾರ್ಥಿನಿಯರು (ಶೇ.90.36ರಷ್ಟು) ತೇರ್ಗಡೆಯಾಗಿದ್ದಾರೆ. 18,100 ವಿದ್ಯಾರ್ಥಿಗಳ ಪೈಕಿ 15,375 ಬಾಲಕರು ಪಾಸ್ ಆಗುವ ಮೂಲಕ ಶೇ.84.94ರಷ್ಟು ಫಲಿತಾಂಶ ದಾಖಲಾಗಿದೆ. 2021–22ರಲ್ಲಿ ಬಾಲಕಿಯರ ಫಲಿತಾಂಶ ಶೇ.93. 73ರಷ್ಟಾಗಿದ್ದರೆ, ಬಾಲಕರ ಫಲಿತಾಂಶ ಶೇ.89.02ರಷ್ಟಾಗಿತ್ತು.

ಗ್ರಾಮೀಣ ಮಕ್ಕಳ ಸಾಧನೆ: ಈ ಬಾರಿಯೂ ಗ್ರಾಮೀಣ ವಿದ್ಯಾರ್ಥಿಗಳು ಮುನ್ನಡೆ ಕಾಯ್ದುಕೊಂಡಿದ್ದಾರೆ. ಈ ಭಾಗದ 19,382 ವಿದ್ಯಾರ್ಥಿಗಳಲ್ಲಿ 17,695 ವಿದ್ಯಾರ್ಥಿಗಳು ಪಾಸ್ ಆಗಿ ಶೇ.91.29ರಷ್ಟು ಫಲಿತಾಂಶ ದಾಖಲಾಗಿದೆ.

ಕನ್ನಡ ಮಾಧ್ಯಮ ಹಿನ್ನಡೆ: ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಾಗಿದೆ. 15,016 ವಿದ್ಯಾರ್ಥಿಗಳಲ್ಲಿ 14,602 ಮಕ್ಕಳು ಉತ್ತೀರ್ಣವಾಗುವ ಮೂಲಕ ಇಂಗ್ಲಿಷ್ ಮಾಧ್ಯಮ ಫಲಿತಾಂಶ ಶೇ.97ರಷ್ಟಿದೆ. ಅಂತೆಯೇ 19,952 ಪೈಕಿ 16,798 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಫಲಿತಾಂಶವು ಶೇ.84ರಷ್ಟಾಗಿದೆ. ಉರ್ದು ಮಾಧ್ಯಮದ ಫಲಿತಾಂಶ ಶೇ.23ರಷ್ಟಾಗಿದೆ.ಈ ಮಾಧ್ಯಮದಲ್ಲಿ ಪರೀಕ್ಷೆ ಬರೆದ 21 ಮಕ್ಕಳಲ್ಲಿ 5 ಜನರು ಮಾತ್ರ ತೇರ್ಗಡೆಯಾಗಿದ್ದಾರೆ.

ಜಿಲ್ಲೆಯ ಟಾಪರ್‌ಗಳು: 623 ಅಂಕ ಗಳಿಸಿರುವ ವಿಜಯವಿಠಲ ಶಾಲೆಯ ಅನಘ ಎಸ್ ಕಾರ್ನಿಸ್ ಜಿಲ್ಲೆಗೆ ಮೊದಲಿಗರು. 2ನೇ ರ್‍ಯಾಂಕ್ ಅನ್ನು ಮೂವರು ಪಡೆದುಕೊಂಡಿದ್ದಾರೆ. ಮೈಸೂರು ತಾಲೂಕಿನ ಯರಗನಹಳ್ಳಿಯ ಸರ್ಕಾರಿ ಶಾಲೆಯ ಎಸ್.ಅಜಯ್, ಸದ್ವಿದ್ಯಾ ಶಾಲೆಯ ಎಂ.ಆರ್. ಅರ್ಜುನ್, ಐಡಿಯಲ್ ಜಾವಾ ರೋಟರಿ ಶಾಲೆಯ ಎನ್.ರಕ್ಷ 621 ಅಂಕ ಪಡೆದುಕೊಳ್ಳುವ ಮೂಲಕ ಎರಡನೇ ಸ್ಥಾನವನ್ನು ಹಂಚಿಕೊಂಡಿದ್ದಾರೆ.

128 ಶಾಲೆಗಳಿಗೆ ಶೇ.100 ರಷ್ಟು ಫಲಿತಾಂಶ: ಜಿಲ್ಲೆಯಲ್ಲಿ ಈ ಬಾರಿ ಶೂನ್ಯ ಫಲಿತಾಂಶ ಪಡೆದ ಒಂದೇ ಒಂದು ಶಾಲೆಯೂ ಇಲ್ಲದಿರುವುದು ವಿಶೇಷ. ಜಿಲ್ಲೆಯಲ್ಲಿ 128 ಶಾಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿವೆ. ಅವುಗಳಲ್ಲಿ 39 ಸರ್ಕಾರಿ, 14 ಅನುದಾನಿತ, 75 ಅನುದಾನರಹಿತ ಶಾಲೆಗಳ ಫಲಿತಾಂಶ ಶೇ.100ರಷ್ಟಾಗಿದೆ.

2ಬಿಯ ಫಲಿತಾಂಶ ಕಡಿಮೆ: ಸಾಮಾಜಿಕ ಗುಂಪುಗಳಲ್ಲಿ ಪ್ರವರ್ಗ 2ಬಿಯ ವಿದ್ಯಾರ್ಥಿಗಳ ಫಲಿತಾಂಶ ಉಳಿದ ವರ್ಗಗಳಿಗಿಂತ ಕಡಿಮೆ ಇದೆ. ಈ ವರ್ಗದವರು ಶೇ.80.85ರಷ್ಟು ಪಾಸಾಗಿದ್ದಾರೆ. ಶೇ.83. 88ರಷ್ಟು ಎಸ್‌ಸಿ ವಿದ್ಯಾರ್ಥಿಗಳು, ಶೇ.85.48ರಷ್ಟು ಎಸ್‌ಟಿ ವಿದ್ಯಾರ್ಥಿಗಳು, ಶೇ.94.92ರಷ್ಟು ಇತರ ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಪ್ರಥಮ ಭಾಷೆಯಲ್ಲಿ 625 ಮಕ್ಕಳಿಗೆ ಪೂರ್ಣ ಅಂಕ: ಭಾಷಾವಾರು ವಿಭಾಗದಲ್ಲಿ ಪೂರ್ಣ ಅಂಕ ಪಡೆದ ಪಟ್ಟಿಯಲ್ಲಿ ಪ್ರಥಮ ಭಾಷೆ ಮೊದಲ ಸ್ಥಾನದಲ್ಲಿ ಈ ವಿಷಯದ 625 (125 ಅಂಕಕ್ಕೆ) ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದಿದ್ದಾರೆ. 100 ಅಂಕದ ದ್ವಿತೀಯ ಭಾಷೆಯಲ್ಲಿ 115, ತೃತೀಯ ಭಾಷೆಯಲ್ಲಿ 282, ಗಣಿತದಲ್ಲಿ 37, ವಿಜ್ಞಾನದಲ್ಲಿ 14, ಸಮಾಜ ವಿಜ್ಞಾನದಲ್ಲಿ 132 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದಿದ್ದಾರೆ.

ಇನ್ನು ಮನೆಮನೆ ಪ್ರಚಾರ

26,55,988 ಮತದಾರರು: ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಾಪಿಸಿರುವ 2,905 ಮತಗಟ್ಟೆಗಳಲ್ಲಿ 13,38,637 ಮಹಿಳೆಯರು, 230 ಇತರರು ಸೇರಿ ಒಟ್ಟು 26,55,988 ಮಂದಿ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸುವರು. ಎಲ್ಲಾ ಮತಗಟ್ಟೆಗಳಲ್ಲಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಶೌಚಾಲಯಗಳಂತಹ ಮೂಲ ಸೌಲಭ್ಯ ಒದಗಿಸಿ ಭದ್ರತೆಗಾಗಿ ಪೊಲೀಸ್ ಸಿಬ್ಬಂದಿಗಳನ್ನೂ ನಿಯೋಜಿಸಲಾಗಿದೆ.

ಮಸ್ಟರಿಂಗ್ ಕಾರ್ಯ: ನಾಳೆ (ಮಂಗಳವಾರ) ಬೆಳಗ್ಗೆ 8 ಗಂಟೆಯಿಂದ ಜಿಲ್ಲೆಯ ಎಲ್ಲಾ 11 ಕ್ಷೇತ್ರಗಳ ಸ್ಟ್ರಾಂಗ್ ರೂಂಗಳಲ್ಲಿ ಮಸ್ಟರಿಂಗ್ ಕಾರ್ಯ ನಡೆಯಲಿದ್ದು, ಮತಗಟ್ಟೆಗಳಿಗೆ ನಿಯೋಜನೆಗೊಂಡಿರುವ ಅಧಿಕಾರಿಗಳು, ಸಿಬ್ಬಂದಿ ಆಯಾ ಚುನಾವಣಾಧಿಕಾರಿಗಳಿಂದ ವಿದ್ಯುನ್ಮಾನ ಮತಯಂತ್ರ, ವಿವಿ ಪ್ಯಾಟ್, ಲೇಖನ ಸಾಮಗ್ರಿ ಹಾಗೂ ಮತದಾನ ಸಲಕರಣೆಗಳೊಂದಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ನಿಯೋಜಿತ ಮತಗಟ್ಟೆಗಳಿಗೆ ತೆರಳುವರು.

143 ಅಭ್ಯರ್ಥಿಗಳು: 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಿಂದ 17, ಚಾಮರಾಜದಿಂದ 14, ನರಸಿಂಹರಾಜದಿಂದ 17, ಚಾಮುಂಡೇಶ್ವರಿಯಿಂದ 14, ವರುಣದಿಂದ 15, ತಿ.ನರಸೀಪುರದಿಂದ 12, ನಂಜನಗೂಡಿನಿಂದ 12, ಹೆಚ್.ಡಿ. ಕೋಟೆಯಿಂದ 12, ಹುಣಸೂರಿನಿಂದ 12, ಪಿರಿಯಾಪಟ್ಟಣದಿಂದ 10 ಹಾಗೂ ಕೆ.ಆರ್. ನಗರದಿಂದ 8 ಮಂದಿ ಅಭ್ಯರ್ಥಿಗಳು ಸ್ಪರ್ಧಾ ಕಣದಲ್ಲಿದ್ದಾರೆ.

ವಿದ್ಯುನ್ಮಾನ ಮತಯಂತ್ರಗಳು: ಮೈಸೂರು ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಗೆ 5620 ಬ್ಯಾಲೆಟ್ ಯೂನಿಟ್, 3,936 ಕಂಟ್ರೋಲ್ ಯೂನಿಟ್ ಮತ್ತು 4,266 ವಿವಿ ಪ್ಯಾಟ್‌ಗಳನ್ನು ಬಳಸಲಾಗುತ್ತಿದ್ದು, ವಿದ್ಯುನ್ಮಾನ ಮತಯಂತ್ರಗಳ ನಿರ್ವಹಣೆಗೆ ಹೈದರಾಬಾದ್‌ನಿಂದ 22 ಮಂದಿ ಇಸಿಐಎಲ್ ಇಂಜಿನಿಯರ್‌ಗಳನ್ನು ನಿಯೋಜಿಸಲಾಗಿದೆ.

ಮೊಬೈಲ್, ಕ್ಯಾಮರಾ ನಿಷೇಧ: ಮತದಾನ ನಡೆಯಲಿರುವ ದಿನದಂದು ಮತದಾರರು ಮೊಬೈಲ್ ಫೋನ್ ಅಥವಾ ಕ್ಯಾಮರಾಗಳನ್ನು ಮತಗಟ್ಟೆಗಳಿಗೆ ತೆಗೆದುಕೊಂಡು ಹೋಗುವಂತಿಲ್ಲ ಮತ್ತು ಯಾವುದೇ ಸ್ಫೋಟಕ ವಸ್ತು ಕೊಂಡೊಯ್ಯುವುದನ್ನೂ ನಿಷೇಧಿಸಲಾಗಿದೆ. ಮತದಾನ ಮಾಡಲು ಬರುವ ಮತದಾರರ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕಲಾಗುವುದು. ಎಲ್ಲಾ ಅಭ್ಯರ್ಥಿಗಳು ತಮ್ಮ ಪರವಾಗಿ ಮತಗಟ್ಟೆಗಳಿಗೆ ಒಬ್ಬರಂತೆ ಏಜೆಂಟರನ್ನು ನೇಮಿಸಿಕೊಳ್ಳಲು ಮತ ಅವರು ಕುಳಿತುಕೊಳ್ಳಲು ಮತಗಟ್ಟೆಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

2,667 ಮಂದಿ ಮತದಾನ: 80 ವರ್ಷ ಮೇಲ್ಪಟ್ಟವರು ಹಾಗೂ ಅಂಗವಿಕಲರು ಈಗಾಗಲೇ 2,667 ಮಂದಿ ತಮ್ಮ ಮನೆಗಳಿಂದಲೇ ಮತದಾನ ಮಾಡಲಾಗಿದ್ದು, ಸೀಲ್ ಮಾಡಿದ ಬ್ಯಾಲೆಟ್ ಪೇಪರ್‌ಗಳನ್ನು ಸುಭದ್ರವಾಗಿರಿಸಲಾಗಿದೆ.

ಕೆಆರ್, ಚಾಮರಾಜ, ಚಾಮುಂಡೇಶ್ವರಿಯಲ್ಲಿ ರೋಡ್ ಶೋ ಮೂಲಕ ಸಿದ್ದರಾಮಯ್ಯ ಮತಯಾಚನೆ



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಮೈದಾನದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಪರ ಸಿದ್ದರಾಮಯ್ಯ ಮತಯಾಚಿಸಿದರು.



ಚಾಮರಾಜ ಕ್ಷೇತ್ರದ ಬಸವನಗುಡಿ ವೃತ್ತದಲ್ಲಿ ಕೆ.ಹರೀಶ್‌ಗೌಡ ಪರ ಸಿದ್ದರಾಮಯ್ಯ ರೋಡ್ ಶೋ

ಮೈಸೂರು, ಮೇ 8(ಎಂಕೆ, ಎಸ್‌ಪಿಎನ್)– ರಾಜ್ಯ ವಿಧಾನಸಭಾ ಚುನಾವಣಾ ಬಹಿರಂಗ ಸಮಾವೇಶದ ಕಡೇ ದಿನ ಕೃಷ್ಣರಾಜ, ಚಾಮರಾಜ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳ ಪರ ಮಾಜಿ ಸಿಎಂ ಸಿದ್ದರಾಮಯ್ಯ, ರೋಡ್ ಶೋ ಹಾಗೂ ಸಮಾವೇಶದ ಮೂಲಕ ಮತ ಬೇಟೆ ನಡೆಸಿದರು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಭೂತಾಳೆ ಮೈದಾನದಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಪರ ಮತ ಯಾಚನೆ ಮಾಡಿದರು. ಈ ವೇಳೆ ಮಾತನಾಡಿದ ಅವರು, ಎಂ.ಕೆ. ಸೋಮಶೇಖರ್ ಗೆದ್ದರೆ, ನಾನು ಮುಖ್ಯಮಂತ್ರಿಯಾಗಲು ಶಾಸಕಾಂಗ ಸಭೆಯಲ್ಲಿ ನನ್ನನ್ನು ಬೆಂಬಲಿಸುತ್ತಾನೆ. ಹಾಗಾಗಿ ಕೃಷ್ಣರಾಜ ಕ್ಷೇತ್ರದ ಮತದಾರರು ಅಧಿಕ ಮತಗಳ ಅಂತರದಿಂದ ಅವರನ್ನು ಗೆಲ್ಲಿಸಬೇಕು. ಮುಂದೆ ನಾನು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಈ ಕ್ಷೇತ್ರಕ್ಕೆ ಬಂದು ನಿಮಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ತಿಳಿಸಿದರು.

ಎಲ್ಲಾ ಮಾಧ್ಯಮಗಳ ಸರ್ವೇ ರಿಪೋರ್ಟ್‌ಗಳು ಕಾಂಗ್ರೆಸ್ ಪರವಾಗಿವೆ. ನಮ್ಮ ಪಕ್ಷ ಅಧಿಕಾರಕ್ಕೆ ಬರಬೇಕಾದರೆ, ಕೃಷ್ಣರಾಜ ಕ್ಷೇತ್ರದ ಮತದಾರರು ಎಂ.ಕೆ.ಸೋಮಶೇಖರ್‌ಗೆ ಮತ ಹಾಕಬೇಕು. ಸೋಮಶೇಖರ್‌ಗೆ ಹಾಕುವ ಪ್ರತಿಯೊಂದು ಮತ ನನಗೆ ಹಾಕಿದಂತೆ ಎಂದು ಮತದಾರರಲ್ಲಿ ಮನವಿ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಎಂ.ಪ್ರದೀಪ್ ಕುಮಾರ್, ನಗರ ಪಾಲಿಕೆ ಸದಸ್ಯ ಜೆ.ಗೋಪಿ ಸೇರಿದಂತೆ ಇತರೆ ಕಾಂಗ್ರೆಸ್ ಮುಖಂಡರಿದ್ದರು.

ಚಾಮುಂಡೇಶ್ವರಿ: ಕ್ಷೇತ್ರದ ಅಭ್ಯರ್ಥಿ ಸಿದ್ದೇಗೌಡ ಪರ ಉದ್ಬೂರಿನಲ್ಲಿ ರೋಡ್ ಶೋ ನಡೆಸಿದ ಸಿದ್ದರಾಮಯ್ಯ, ಜೆಡಿಎಸ್ ಅಭ್ಯರ್ಥಿ ಜಿ.ಟಿ.ದೇವೇಗೌಡ ಅವರನ್ನು ಸೋಲಿಸಿ ಸಿದ್ದೇಗೌಡನನ್ನು ಗೆಲ್ಲಿಸಿ. ನನಗೆ ರಾಜಕೀಯ ಮರುಜನ್ಮ ನೀಡಿದ ಕ್ಷೇತ್ರ ಇದಾಗಿದ್ದು, ಪರಸ್ಪರ ಏನೇ ಮುನಿಸಿದ್ದರೂ ಅದನ್ನೆಲ್ಲಾ ಬದಿಗಿಟ್ಟು ಗೆಲುವಿಗಾಗಿ ಕೆಲಸ ಮಾಡುವಂತೆ ಕಾರ್ಯಕರ್ತರಿಗೆ ಸೂಚಿಸಿದರು. ಕಾಂಗ್ರೆಸ್ ಮುಖಂಡರಾದ ಕೆ.ಮರಿಗೌಡ, ಕೂರ್ಗಳ್ಳಿ ಮಹದೇವು, ರಾಕೇಶ್ ಪಾಪಣ್ಣ, ಲೇಖಾ ವೆಂಕಟೇಶ್, ಕೃಷ್ಣ ಕುಮಾರ್ ಸಾಗರ್, ಚೌಡನಾಯಕ, ಕುಮಾರ್, ಜೆ.ಜೆ.ಆನಂದ್, ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್ ಮತ್ತಿತರರಿದ್ದರು.

ಚಾಮರಾಜ: ಚಾಮರಾಜ ಕ್ಷೇತ್ರದ ಬಸವನಗುಡಿ ವೃತ್ತಕ್ಕೆ ಆಗಮಿಸಿದ ಸಿದ್ದರಾಮಯ್ಯನವರು, ಅಲ್ಲಿ ನೆರೆದಿದ್ದ ಅಪಾರ ಅಭಿಮಾನಿಗಳು, ಕಾರ್ಯಕರ್ತರತ್ತ ಕೈ ಬೀಸಿ ಹವಾ ಸೃಷ್ಟಿಸಿದರು.

ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರ ಅಂತ್ಯಗೊಳಿಸುವ ಚುನಾವಣಾ ಆಯೋಗದ ಆದೇಶದ ಹಿನ್ನೆಲೆಯಲ್ಲಿ 6 ಗಂಟೆಗೆ ಐದು ನಿಮಿಷ ಇರುವಂತೆ ಸಿದ್ದರಾಮಯ್ಯ, ಕಾರಿನ ಬಾಗಿಲ ಮೇಲೆ ನಿಂತು ನೆರೆದಿದ್ದ ಕಾರ್ಯಕರ್ತರು ಮತ್ತು ಸಾರ್ವಜನಿಕರತ್ತ ಕೈ ಬೀಸಿದರು. ಕ್ಷೇತ್ರದ ಅಭ್ಯರ್ಥಿ ಕೆ.ಹರೀಶ್ ಗೌಡ ಅವರನ್ನು ಜಯಶೀಲರನ್ನಾಗಿಸುವಂತೆ ಮನವಿ ಮಾಡಿದರು. ಅಷ್ಟರಲ್ಲಿ ಆರು ಗಂಟೆಯಾಗಿದೆ ಎಂಬುದನ್ನು ಅರಿತು, ಬಹಿರಂಗ ಪ್ರಚಾರ ನಡೆಸಲು ಸಾಧ್ಯವಿಲ್ಲ ಎಂದು ಕಾರಿನಲ್ಲಿ ಹಿಂದಿರುಗಿದರು. ರೋಡ್ ಶೋ ವೇಳೆ ಸಿದ್ದರಾಮಯ್ಯನವರಿಗೆ ಬೃಹತ್ ಕಿತ್ತಲೆ ಹಣ್ಣಿನ ಹಾರವನ್ನು ಕ್ರೇನ್ ಮೂಲಕ ಹಾಕಲು ಸಿದ್ಧತೆ ನಡೆಸಲಾಗಿತ್ತು.

ರಾಜ್ಯ ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಪದ್ಧತಿ(ಒಪಿಎಸ್) ಮರುಜಾರಿ...

ಕಾಂಗ್ರೆಸ್ ಪಕ್ಷ ಅಧಿಕಾರವಹಿಸಿಕೊಂಡ ತಕ್ಷಣ ರಾಜ್ಯ ಸರ್ಕಾರಿ ನೌಕರರಿಗೆ ಹಳೆ ಪಿಂಚಣಿ ಪದ್ಧತಿ(ಒಪಿಎಸ್) ಮರುಜಾರಿ ಸೇರಿದಂತೆ ಕಾಂಗ್ರೆಸ್ ಪಕ್ಷ ನೀಡಿರುವ ಜನಪರ ಕಲ್ಯಾಣ ಕಾರ್ಯಕ್ರಮಗಳ ಭಾಗವಾಗಿ ಐದು ಗ್ಯಾರಂಟಿ ಯೋಜನೆಗಳನ್ನು ತಕ್ಷಣ ಜಾರಿ ಮಾಡುತ್ತೇವೆ. ಈಗಿನ 40 ಪರ್ಸೆಂಟ್ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮಿತಿಮೀರಿದೆ. ಇದರಿಂದ ಜನಸಾಮಾನ್ಯರು ಸಣ್ಣ–ಪುಟ್ಟ ಕೆಲಸಗಳಿಗೂ ಲಂಚ ಕೊಟ್ಟು ಸೇರುವ ಪರಿಸ್ಥಿತಿ ನಿರ್ಮಾಣವಾಗಿದೆ.

- ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ



ಉದ್ಬೂರಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಸಿದ್ದೇಗೌಡ ಪರ ರೋಡ್ ಶೋ ನಡೆಸಿದ ಮಾಜಿ ಸಿಎಂ ಸಿದ್ದರಾಮಯ್ಯ

ಬಲರಾಮನ ಅಗಲಿಕೆಗೆ ಪ್ರಧಾನಿ ಕಂಬನಿ

ಮೈಸೂರು, ಮೇ 8– ದಸರಾ ಗಜಪಡೆಯ ಬಲರಾಮನ ಅಗಲಿಕೆಗೆ ಪ್ರಧಾನಿ ಮೋದಿ ಕಂಬನಿ ಮಿಡಿದಿದ್ದಾರೆ. 'ಹಲವು ವರ್ಷಗಳಿಂದ, ಗಜರಾಜ ಬಲರಾಮ ಮೈಸೂರಿನ ಸಾಂಪ್ರದಾಯಿಕ ದಸರಾ ಆಚರಣೆಯ ಪ್ರಮುಖ ಭಾಗವಾಗಿದ್ದನು. ಅವನು ಚಾಮುಂಡೇಶ್ವರಿ ಮಾತೆಯ ಮೂರ್ತಿ ಯನ್ನು ಹೊತ್ತಿದ್ದನ್ನು ಜನರು ಸದಾ ಸ್ಮರಿಸಿಕೊಳ್ಳುತ್ತಾರೆ. ಅಸಂಖ್ಯಾತ ಜನರಿಗೆ ಪ್ರೀತಿಪಾತ್ರನಾಗಿದ್ದ ಬಲರಾಮನ ಅಗಲಿಕೆ ದುಃಖ ತಂದಿದೆ. ಓಂ ಶಾಂತಿ...' ಎಂದು ಬಲರಾಮ ಅಂಬಾರಿ ಹೊತ್ತು ಸಾಗುತ್ತಿದ್ದ ಚಿತ್ರ ಸಹಿತ ಮೋದಿ ಟ್ವೀಟ್ ಮಾಡಿದ್ದಾರೆ. ಇದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರೀಟ್ವೀಟ್ ಮಾಡುವ ಮೂಲಕ ಬಲರಾಮನಿಗೆ ನಮಿಸಿದ್ದಾರೆ.



ವಿದ್ಯಾಜ್ಯೋತಿ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಮೇ 8– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರಿನ ನಾಡನಹಳ್ಳಿಯ ವಿದ್ಯಾಜ್ಯೋತಿ ಶಾಲೆ ಶೇ.100ರಷ್ಟು ಫಲಿತಾಂಶ ಸಾಧಿಸಿದೆ. 625ಕ್ಕೆ 590 ಅಂಕ ಪಡೆಯುವ ಮೂಲಕ ಮೌರ್ಯ ಎನ್.ವಿವೇಕ್ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದು, ಅಂಜಲಿ 585, ಸಂಜಯ್ 581 ಸೇರಿದಂತೆ ಶಾಲೆಯ 96 ವಿದ್ಯಾರ್ಥಿಗಳೂ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.



ಎನ್.ವಿವೇಕ್



ಅಂಜಲಿ



ಸಂಜಯ್

ಪೆರು ದೇಶದಲ್ಲಿ ಅಗ್ನಿ ದುರಂತ: 27 ಸಾವು

ಲಿಮಾ: ಪೆರುವಿನ ದಕ್ಷಿಣ ಭಾಗದಲ್ಲಿನ ಚಿನ್ನದ ಗಣಿಯೊಂದರಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಅಗ್ನಿ ದುರಂತದಲ್ಲಿ ಕನಿಷ್ಠ 27 ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ. ದುರಂತ ಸಂಭವಿಸಿದ ಸ್ಥಳದಿಂದ ಒಟ್ಟು 175 ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲಾಗಿದೆ. ಗುತ್ತಿಗೆದಾರರೊಬ್ಬರ ಬಳಿ ಕೆಲಸ ಮಾಡುತ್ತಿದ್ದ 27 ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಗಣಿ ಕಂಪನಿಯು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಎನ್.ಆರ್.ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಶಾಂತಿನಗರ ಮುಖ್ಯ ರಸ್ತೆಯಲ್ಲಿ ರೋಡ್ ಶೋ ನಡೆಸಿದರು. ಈ ವೇಳೆ ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್ ಇದ್ದಾರೆ.



ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್ ಗೌಡ ಅವರು ಸೋಮವಾರ ಸಾತಗಳ್ಳಿ ಮತ್ತು ರಾಮಕೃಷ್ಣನಗರ ವ್ಯಾಪ್ತಿಯಲ್ಲಿ ಮನೆಮನೆಗೆ ತೆರಳಿ ಮತಯಾಚನೆ ಮಾಡಿದರು.

ಸುಳ್ಳು ಸುದ್ದಿ, ವದಂತಿಗೆ ಕಿವಿಗೊಡದೆ ಶ್ರೀವತ್ಸರಿಗೆ ಮತ ನೀಡಿ

ವೀರಶೈವ ಲಿಂಗಾಯತ ಮುಖಂಡರ ಮನವಿ

ಮೈಸೂರು, ಮೇ 8(ಎಸ್‌ಬಿಡಿ)– ವೀರಶೈವ ಲಿಂಗಾಯತ ಸಮುದಾಯ ಹಾಗೂ ಬಿಜೆಪಿ ಬಗ್ಗೆ ಸುಳ್ಳು ಸುದ್ದಿಗಳಿಗೆ ಕಿವಿಗೊಡದೆ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರಿಗೆ ಮತ ನೀಡಿ, ಗೆಲ್ಲಿಸುವಂತೆ ಬಿಜೆಪಿಯ ವೀರಶೈವ ಲಿಂಗಾಯತ ಮುಖಂಡರು ಮನವಿ ಮಾಡಿದ್ದಾರೆ.

ಮೈಸೂರು ವಿಭಾಗ ಮಾಧ್ಯಮ ಕೇಂದ್ರದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಸಮುದಾಯದ ಮುಖಂಡರು, ಕೃಷ್ಣರಾಜ ಕ್ಷೇತ್ರದಲ್ಲಿ ಅನವಶ್ಯಕವಾಗಿ ಕರಪತ್ರ ಹಂಚುವ ಮೂಲಕ ವೀರಶೈವ ಲಿಂಗಾಯತ ಸಮುದಾಯದವರಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆದಿದೆ. ಸಮುದಾಯದವರು ಗೊಂದಲಕ್ಕೆ ಒಳಗಾಗದೆ ಹಿರಿಯರಾದ ಬಿ.ಎಸ್.ಯಡಿಯೂರಪ್ಪನವರ ಮನವಿಯಂತೆ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರನ್ನು ಬೆಂಬಲಿಸುವಂತೆ ಕೋರಿದರು.

ಅಧಿಕಾರದಲ್ಲಿದ್ದಾಗ ವೀರಶೈವ ಲಿಂಗಾಯತರಿಗೆ ಸೂಕ್ತ ಸ್ಥಾನಮಾನ ನೀಡದ ಕಾಂಗ್ರೆಸ್, ಚುನಾವಣೆ ಸಂದರ್ಭದಲ್ಲಿ ಸಮುದಾಯದಲ್ಲಿ ಬಿರುಕು ಮೂಡಿಸಲು ಯತ್ನಿಸುತ್ತಿದೆ. ವೀರೇಂದ್ರ ಪಾಟೀಲರಿಗೆ ಕಿರುಕುಳ ನೀಡಿ, ಅವಮಾನಕರ ರೀತಿಯಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲಾಯಿತು. ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ರಾಜಶೇಖರಮೂರ್ತಿ, ಬೆಂಕಿ ಮಹದೇವ್ ಅವರನ್ನು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಎಸ್.ಆರ್.ಪಾಟೀಲ್‌ರಿಗೆ ಸಭಾಪತಿ ಸ್ಥಾನ ತಪ್ಪಿಸಲಾಯಿತು. ಕಾಂಗ್ರೆಸ್‌ನ ಈ ಧೋರಣೆಯಿಂದ ಬೇಸತ್ತು ವೀರಶೈವ ಲಿಂಗಾಯತ ಸಮುದಾಯ ಬಿ.ಎಸ್. ಯಡಿಯೂರಪ್ಪನವರಿಗೆ ಸಂಪೂರ್ಣ ಬೆಂಬಲ ನೀಡಿತು ಎಂದು ತಿಳಿಸಿದರು.

ಧರ್ಮ ಮತ್ತು ಜಾತಿ ಜಾತಿಗಳ ನಡುವೆ ವಿಷಬೀಜ ಬಿತ್ತಿ ಒಡೆದು ಆಳುವ ನೀತಿ ಅನುಸರಿಸಿಕೊಂಡು ಬಂದಿರುವ ಕಾಂಗ್ರೆಸ್‌ಗೆ ರಾಷ್ಟ್ರೀಯತೆಯ ಕಲ್ಪನೆಯೂ ಇಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ವೀರಶೈವ ಲಿಂಗಾಯತರನ್ನು ಒಡೆದು ಅಧಿಕಾರಕ್ಕೆ ಬರುವ ಕಾಂಗ್ರೆಸ್ ಪ್ರಯತ್ನ ಫಲಿಸಲಿಲ್ಲ. ಈಗಲೂ ಸುಳ್ಳು ಸುದ್ದಿ ಹಬ್ಬಿಸಿ ಸಮುದಾಯದಲ್ಲಿ ಬಿರುಕು ಮೂಡಿಸಲು ಹೊರಟಿದೆ. ವೀರಶೈವ, ಲಿಂಗಾಯತರ ಬಗ್ಗೆ ಸಿ.ಟಿ.ರವಿ, ಬಿ.ಎಲ್.ಸಂತೋಷ್ ಅವಹೇಳನವಾಗಿ ಮಾತನಾಡಿದ್ದಾರೆಂಬ ಸುಳ್ಳು ಸುದ್ದಿಯನ್ನು ಪತ್ರಿಕಾ ವರದಿಯಂತೆ ಸೃಷ್ಟಿಸಿ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದರ ಜೊತೆಗೆ ಸಂಘಟನೆಯ ಬೋಗಸ್ ಲೆಟರ್‌ಹೆಡ್‌ನಲ್ಲಿ ಬಿಜೆಪಿ ವಿರೋಧಿಸುವಂತೆ ಕರಪತ್ರ ಮುದ್ರಿಸಿ ಹಂಚುವ ಮೂಲಕ ನಡೆಸಿರುವ ಕಾಂಗ್ರೆಸ್ ಕುತಂತ್ರ ಖಂಡನಾರ್ಹ. ಈ ಸಂಬಂಧ ಮೈಸೂರು ಸೇರಿದಂತೆ ರಾಜ್ಯದ ವಿವಿಧೆಡೆ ಚುನಾವಣಾಧಿಕಾರಿಗಳಿಗೆ ಹಾಗೂ ಪೊಲೀಸರಿಗೆ ದೂರು ನೀಡಲಾಗಿದ್ದು, ಓರ್ವ ಯುವಕನನ್ನು ಬಂಧಿಸಲಾಗಿದೆ ಎಂದರು.

ಬಿಜೆಪಿ ಬಸವಣ್ಣನವರ ಆಶಯದಡಿ ಆಡಳಿತ ನಡೆಸಿಕೊಂಡು ಬಂದಿದೆ. ಬಿಜೆಪಿ ನಾಲ್ವರು ಮುಖ್ಯಮಂತ್ರಿಗಳಲ್ಲಿ ಮೂವರು ವೀರಶೈವ ಲಿಂಗಾಯತ ಸಮುದಾಯದವರು. ಬಿ.ಎಸ್. ಯಡಿಯೂರಪ್ಪನವರಿಗೆ ಕೇಂದ್ರ ಸಂಸದೀಯ ಮಂಡಳಿ, ಕೇಂದ್ರೀಯ ಚುನಾವಣಾ ಸಮಿತಿಯಲ್ಲಿ ಸ್ಥಾನ ನೀಡಿದೆ. ಹಲವಾರು ಮತ ಮಾನ್ಯಗಳ ಅಭಿವೃದ್ಧಿಗೆ ಬಿಜೆಪಿ ಅಪಾರ ಕೊಡುಗೆ ನೀಡಿದೆ. 2018ರಲ್ಲಿ 55, ಈ ಬಾರಿ 68 ವೀರಶೈವ ಲಿಂಗಾಯತರಿಗೆ ಟಿಕೆಟ್ ನೀಡಲಾಗಿದೆ. ಹಾಗಾಗಿ ವದಂತಿಗಳಿಗೆ ಯಾರೂ ಕಿವಿಗೊಡಬಾರದು ಎಂದು ಮನವಿ ಮಾಡಿದರು.

ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಉದ್ಯಮಿ ಯು.ಎಸ್. ಶೇಖರ್, ಮಾಜಿ ಮೇಯರ್ ಸುನಂದಾ ಪಾಲನೇತ್ರ ಕಾರ್ಪೋರೇಟರ್ ಬಿ.ವಿ.ಮಂಜುನಾಥ್, ಮುಖಂಡರಾದ ನಂದೀಶ್, ನಿರಂಜನಮೂರ್ತಿ, ಖಂಡೇಶ್, ಡಿ.ಪಿ.ಸುರೇಶ್, ಎಲ್.ಜಗದೀಶ್, ಕೇಬಲ್ ಮಹೇಶ್, ನಾಗೇಂದ್ರ ಕುಮಾರ್, ಜಯಶಂಕರ್ ಮತ್ತಿತರಿದ್ದರು.



ಸಿದ್ದರಾಮಯ್ಯರಿಗೆ ಗೌರವದ ರಾಜಕೀಯ ವಿದಾಯ ಹೇಳಬೇಕಾದ್ದು ನಮ್ಮ ಧರ್ಮ

ಮತದಾರರಲ್ಲಿ ಸಂದೇಶ್ ನಾಗರಾಜ್ ಮನವಿ


ಸಿದ್ದರಾಮಯ್ಯ


ಸಂದೇಶ್ ನಾಗರಾಜು

ಮೈಸೂರು, ಮೇ ೮– ಸಾಮಾಜಿಕ ನ್ಯಾಯಕ್ಕಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ವಿಧಾನಪರಿಷತ್ ಸದಸ್ಯ ಸಂದೇಶ್ ನಾಗರಾಜ್ ಅವರು ವರುಣ ಕ್ಷೇತ್ರದ ಮತದಾರರಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಿದ್ದರಾಮಯ್ಯನವರು ತಮ್ಮ ಸ್ವಗ್ರಾಮವನ್ನೊಳಗೊಂಡಿರುವ ವರುಣ ಕ್ಷೇತ್ರದಲ್ಲೇ ಕೊನೆಯ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ಬಯಸಿ ಬಂದು ಸ್ಪರ್ಧಿಸಿದ್ದಾರೆ. ಅವರಿಗೆ ಗೌರವದ ರಾಜಕೀಯ ವಿದಾಯ ಹೇಳಬೇಕಿರುವುದು ನಮ್ಮ ಧರ್ಮ. ಹೇಳಿ ಕೇಳಿ ಮಾಜಿ ಮುಖ್ಯಮಂತ್ರಿ, ಮೈಸೂರಿನ ಹೆಮ್ಮೆಯ ನಾಯಕರಾಗಿದ್ದಾರೆ. ಈ ಕ್ಷೇತ್ರದಿಂದಲೇ ಗೆದ್ದು ಒಮ್ಮೆ ವಿಪಕ್ಷ ನಾಯಕನಾಗಿ, ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ದಕ್ಷ ಆಡಳಿತ ನಡೆಸಿದ್ದಾರೆ. ಅವರು ಬಡವರು, ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ಬಗ್ಗೆ ಸದಾಕಾಲ ಚಿಂತನೆ ನಡೆಸುವವರಾಗಿದ್ದು, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕೆಲವೇ ಕ್ಷಣದಲ್ಲಿ ಅನ್ನಭಾಗ್ಯ ಯೋಜನೆಯನ್ನು ಜಾರಿಗೊಳಿಸಿ, ಬಡವರ ಹಸಿವು ನೀಗಿಸುವ ಕಾರ್ಯವನ್ನು ಮಾಡಿದ್ದಾರೆ. ಅಲ್ಲದೇ, ಹಲವಾರು ಭಾಗ್ಯಗಳನ್ನು ಜಾರಿಗೊಳಿಸಿ, ಅಶಕ್ತರ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಸಿದ್ದರಾಮಯ್ಯ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಅವಕಾಶವಿರುವುದರಿಂದ ವರುಣ ಕ್ಷೇತ್ರದ ಮತದಾರರು ಮತ್ತೊಮ್ಮೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಲು ಅಭೂತಪೂರ್ವ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಇದು ನನ್ನ ಕೊನೆಯ ಚುನಾವಣೆ; ಆದರೆ ಸಕ್ರಿಯ ರಾಜಕೀಯದಲ್ಲಿರುತ್ತೇನೆ: ಜಗದೀಶ್ ಶೆಟ್ಟರ್

ಹುಬ್ಬಳ್ಳಿ: ನಾನು ಕಾಂಗ್ರೆಸ್ ಪಾರ್ಟಿ ಸೇರಿದ್ದು ಒಳ್ಳೆಯ ನಿರ್ಧಾರ ಅಂತ ಜನ ಹೇಳುತ್ತಿದ್ದಾರೆ. ನಾನು ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಜನರಿಗೆ ಮನವೊಲಿಸಲು ಮುಂದಾಗಿದ್ದೇನೆ. ಇದು ನನ್ನ ಕೊನೆಯ ಚುನಾವಣೆ. ನಾನು 70 ವರ್ಷದ ಮೇಲೆ ಚುನಾವಣೆಗೆ ಸ್ಪರ್ಧೆ ಮಾಡಲ್ಲ. ಆದರೆ ಸಕ್ರಿಯ ರಾಜಕೀಯದಲ್ಲಿರುತ್ತೇನೆ ಎಂದು ಮಾಜಿ ಸಿಎಂ ಜಗದೀಶ್ ಶೆಟ್ಟರ್ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಸೇರ್ಪಡೆಯಾದ ಮೇಲೆ ಸ್ಥಳೀಯ ನಾಯಕರು ನನಗೆ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ಸಹ ನನಗೆ ಬೆಂಬಲ ನೀಡಿದ್ದಾರೆ. ಕೊಪ್ಪಳ, ವಿಜಯಪುರ, ಸಿಂದಗಿ, ಹಾವೇರಿ, ಹಾನಗಲ್‌ನಲ್ಲಿ ನಮ್ಮ ಪಕ್ಷದ ಪರವಾಗಿ ಪ್ರಚಾರ ಮಾಡಿದ್ದೇನೆ. ಎಲ್ಲಾ ಕಡೆ ಕಾಂಗ್ರೆಸ್‌ಗೆ ದೊಡ್ಡ ಬೆಂಬಲ ಸಿಗುತ್ತಿದೆ. ನಾನು ಕಳೆದ ಬಾರಿ ಮಾಡಿದ ಚುನಾವಣೆಗಿಂತ ಈ ಬಾರಿ ಜಾಸ್ತಿಯಾಗುತ್ತಿದೆ ಎಂದರು.

ದಿನದಿಂದ ದಿನಕ್ಕೆ ಜನರು ಮೇಲೆ ಒಲವು ತೋರಿಸುತ್ತಿದ್ದಾರೆ. ಎಲ್ಲಾ ಕಡೆ ಜನಸ್ಪಂದನೆ ಸಿಗುತ್ತಿದೆ. ಬಿಜೆಪಿಯಲ್ಲಿ ಇದ್ದ ಗೌರವ, ಬೆಂಬಲ, ಪ್ರೀತಿ ಈಗ ಕಾಂಗ್ರೆಸ್ ಬಂದ ಮೇಲೂ ಸಿಗುತ್ತಿದೆ. ಆರು ಚುನಾವಣೆಗಿಂತ ಈ ಚುನಾವಣೆಯಲ್ಲಿ ಅತೀ ಹೆಚ್ಚು ಮತಗಳಿಂದ ಆರಿಸಿ ಬರುತ್ತೇನೆ. ನಾನು ಕಾಂಗ್ರೆಸ್ ಸೇರಿದ ಮೇಲೆ ಬಿಜೆಪಿ ಚಿಂತೆಗೀಡಾಗಿದೆ. ಷಡ್ಯಂತ್ರ, ಕುತಂತ್ರದಿಂದ ಜಗದೀಶ್ ಶೆಟ್ಟರ್ ಸೋಲಿಸಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಕೈಬಲಪಡಿಸಲು ಹಿಂದುಳಿದ ವರ್ಗಗಳಿಗೆ ಮನವಿ




ಮೈಸೂರು,ಮೇ ೮(ಪಿಎಂ)– ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿ ಹಿಂದುಳಿದ ವರ್ಗಗಳು ಹಾಗೂ ಈ ವರ್ಗದಲ್ಲಿರುವ ಕಾಯಕ ಸಮಾಜಗಳ ಶ್ರೇಯೋಭಿವೃದ್ಧಿಗೆ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ಕೈಬಲಪಡಿಸುವ ನಿಟ್ಟಿನಲ್ಲಿ ಈ ಚುನಾವಣೆಯಲ್ಲಿ ರಾಜ್ಯದ ಹಿಂದುಳಿದ ವರ್ಗಗಳು ಕಾಂಗ್ರೆಸ್ ಬೆಂಬಲಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎನ್.ಆರ್.ನಾಗೇಶ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮೂರೂವರೆ ವರ್ಷಗಳ ಕಾಲ ಆಡಳಿತ ನಡೆಸಿದ ರಾಜ್ಯ ಬಿಜೆಪಿ ಸರ್ಕಾರ ಹಿಂದುಳಿದ ವರ್ಗಗಳಿಗೆ ಯಾವುದೇ ಕಾರ್ಯಕ್ರಮಗಳನ್ನು ನೀಡಲಿಲ್ಲ. ಆದರೆ ಸಿದ್ದರಾಮಯ್ಯ ತಮ್ಮ ಆಡಳಿತಾವಧಿಯಲ್ಲಿ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿ ಆದ್ಯತೆ ನೀಡಿ ಹತ್ತಾರು ಕಾರ್ಯಕ್ರಮಗಳನ್ನು ನೀಡಿದರು ಎಂದರು.

ಕಾಯಕ ಸಮಾಜಗಳ ಬಗ್ಗೆ ಕಾಂಗ್ರೆಸ್ ಹೊರತಾಗಿ ಬೇರೆ ಯಾವ ಪಕ್ಷಗಳಿಗೂ ಕಾಳಜಿ ಇಲ್ಲ. ಹಾಗಾಗಿ ಹಿಂದುಳಿದ ವರ್ಗಗಳು ಈ ಬಾರಿ ಕಾಂಗ್ರೆಸ್‌ಗೆ ಮತ ನೀಡಬೇಕು. ನೊಂದ ಸಮಾಜಗಳ ಪರವಾಗಿ ಸಿದ್ದರಾಮಯ್ಯ ಅವರಿದ್ದು, ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಗಳಾಗಬೇಕಿದೆ. ವರುಣ ಕ್ಷೇತ್ರದ ಜನತೆ ಸಿದ್ದರಾಮಯ್ಯರನ್ನು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸಬೇಕೆಂದು ಕೋರಿದರು. ವಿವಿಧ ಕಾಯಕ ಸಮಾಜಗಳ ಮುಖಂಡರಾದ ಶ್ರೀಕಾಂತ್, ಯೋಗೀಶ್ ಉಪ್ಪಾರ್, ಚಂದ್ರು, ಮೊಗಣ್ಣಾಚಾರ್, ಕಮಲಾ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮೇ 11ರ ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷೇಧ

ಸೋಮವಾರ ವೈನ್‌ಶಾಪ್‌ಗಳಿಗೆ ಮದ್ಯ ಪ್ರಿಯರ ಲಗ್ಗೆ



ಮೈಸೂರು, ಮೇ ೮(ಆರ್‌ಕೆ)– ಇಂದು ಸಂಜೆ 6 ಗಂಟೆಯಿಂದ ಮೇ 11ರ ಮಧ್ಯರಾತ್ರಿವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಮೇ 10 ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಶಾಂತಿಯುತ ಮತದಾನಕ್ಕೆ ಅನುವು ಮಾಡಿಕೊಡುವ ಸಲುವಾಗಿ ಮೈಸೂರು ಜಿಲ್ಲೆಯಲ್ಲಿ ಸೋಮವಾರ ಸಂಜೆ 6 ಗಂಟೆಗೆ ಎಲ್ಲಾ ರೀತಿಯ ಮದ್ಯದಂಗಡಿಗಳನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಬಂದ್ ಮಾಡಿಸಿದರು.

ಈ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನದಿಂದಲೇ ವೈನ್ ಸ್ಟೋರ್ಸ್, ಬಾರ್, ಲಿಕ್ಕರ್ ಶಾಪ್, ಎಂಎಸ್‌ಐಎಲ್ ಮಳಿಗೆಗಳಲ್ಲಿ ಮದ್ಯಪ್ರಿಯರು ಮದ್ಯ ಖರೀದಿಸಲು ಮುಗಿಬೀಳುತ್ತಿದ್ದರು. ಆದರೆ, ಈ ಬಾರಿ ಬೇಡಿಕೆ ಪ್ರಮಾಣಕ್ಕೆ ತಕ್ಕಂತೆ ಅಬಕಾರಿ ಇಲಾಖೆಯು ಮದ್ಯ ಪೂರೈಸದ ಕಾರಣ ಹಲವರು ತಮಗೆ ಬೇಕಾದ ಮದ್ಯ ಸಿಗದೇ ನಿರಾಶರಾಗಿ, ಹಿಂದಿರುಗುತ್ತಿದ್ದುದು ಕಂಡು ಬಂದಿತು.

ನಿಷೇಧ ಸಮಯದಲ್ಲಿ ಬಳಸಲೆಂದು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುತ್ತಾರಲ್ಲದೆ, ಮನೆಗಳಲ್ಲಿ ಸಂಗ್ರಹಿಸಿಟ್ಟುಕೊಂಡು ಬೇರೆಯವರಿಗೆ ಅನಧಿಕೃತವಾಗಿ ಮಾರಾಟ ಮಾಡುವರೆಂಬ ಕಾರಣಕ್ಕೆ ಪರವಾನಗಿ ಹೊಂದಿರುವ ವ್ಯಾಪಾರಗಾರರಿಗೆ ಕಡಿಮೆ ಪ್ರಮಾಣದ ಮದ್ಯ ಪೂರೈಸಲಾಗಿದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮೇ 11 ರಂದು ಮತ್ತೆ ಅಂಗಡಿಗಳು, ಔಟ್‌ಲೆಟ್‌ಗಳು, ಸನ್ನದುದಾರರಿಗೆ ಮದ್ಯ ಸರಬರಾಜು ಮಾಡಲಾಗುವುದು. ಒಂದು ವೇಳೆ ನಿಷೇಧಿತ ಸಮಯದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುವುದು ಕಂಡು ಬಂದಲ್ಲಿ ಅಂತಹ ಅಂಗಡಿಗಳ ರಹದಾರಿ ರದ್ದು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಸಿದ್ದರಾಮಯ್ಯರಿಗೆ ಮತ ನೀಡಲು ರಾಜ್ಯ ಎಸ್‌ಸಿ–ಎಸ್‌ಟಿ ಗುತ್ತಿಗೆದಾರರ ಸಂಘ ಮನವಿ



ಮೈಸೂರು,ಮೇ ೮(ಪಿಎಂ)– ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಧಿಕ ಮತಗಳ ಅಂತರದಲ್ಲಿ ಗೆಲುವು ಸಾಧಿಸಲು ಕ್ಷೇತ್ರದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನತೆ ಬೆಂಬಲ ನೀಡಬೇಕೆಂದು ಕರ್ನಾಟಕ ರಾಜ್ಯ ಎಸ್‌ಸಿ–ಎಸ್‌ಟಿ ಗುತ್ತಿಗೆದಾರರ ಸಂಘ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ಮಹದೇವಸ್ವಾಮಿ, ಸರ್ಕಾರದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ತಮ್ಮ ಅವಧಿಯಲ್ಲಿ ಮೀಸಲಾತಿ ಜಾರಿಗೊಳಿಸಿದ ಸಿದ್ದರಾಮಯ್ಯ, ಈ ಶೋಷಿತ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಸಾಕಷ್ಟು ಕಾರ್ಯಕ್ರಮಗಳನ್ನೂ ನೀಡಿದ್ದಾರೆ ಎಂದರು.

ಸಿದ್ದರಾಮಯ್ಯರನ್ನು ಸೋಲಿಸುವುದೇ ಕೆಲ ಪಕ್ಷಗಳ ಗುರಿಯಾಗಿದ್ದು, ಇಂತಹ ಸಂದರ್ಭದಲ್ಲಿ ಶೋಷಿತ ಸಮುದಾಯಗಳು ಅವರ ಕೈ ಬಲಪಡಿಸಬೇಕು ಎಂದು ಕೋರಿದರು. ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಪಿ.ಯೋಗೇಶ್, ರಾಜ್ಯ ಖಜಾಂಚಿ ಎಸ್.ಎನ್.ಹೇಮಕುಮಾರ್, ಜಿಲ್ಲಾಧ್ಯಕ್ಷ ಕೆ.ಮಲ್ಲು, ನಂಜನಗೂಡು ತಾಲೂಕು ಅಧ್ಯಕ್ಷ ಸಿದ್ದಲಿಂಗು ಗೋಷ್ಠಿಯಲ್ಲಿದ್ದರು.

ಜೆಡಿಎಸ್ ಬೆಂಬಲಿಸಲು ಮನವಿ



ಮೈಸೂರು,ಮೇ ೮(ಪಿಎಂ)– ಜೆಡಿಎಸ್ ಅಭಿವೃದ್ಧಿಪರ ರಾಜಕಾರಣ ಮಾಡಿದರೆ, ಕಾಂಗ್ರೆಸ್ ಮತ್ತು ಬಿಜೆಪಿ ಹಗರಣಗಳ ಮೇಲೆ ರಾಜಕಾರಣ ಮಾಡುತ್ತವೆ ಎಂದು ಆರೋಪಿಸಿದ ವಕೀಲ ಹಾಗೂ ಜೆಡಿಎಸ್ ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ, ಈ ಬಾರಿ ರಾಜ್ಯದ ಜನತೆ ಜೆಡಿಎಸ್‌ಗೆ ಮತ ನೀಡಬೇಕೆಂದು ಕೋರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 211 ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು ಕಣದಲ್ಲಿದ್ದು, ಈ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್‌ಗೆ ಮತ ನೀಡಿದರೆ ರಾಜ್ಯದ ಎಲ್ಲಾ ಜನ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ಪಂಚರತ್ನ ಕಾರ್ಯಕ್ರಮ ಅನುಷ್ಠಾನ ಸಾಧ್ಯವಾಗಲಿದೆ ಎಂದರು.

ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿಯವರು ಮೈಸೂರು ನಗರದಲ್ಲಿ ನಡೆಸಿದ ರೋಡ್ ಶೋ ವೆಚ್ಚದ ವಿವರ ಹಾಗೂ ವೆಚ್ಚದ ಮೂಲ ಸೇರಿದಂತೆ ವಿವಿಧ ವಿವರಗಳನ್ನು ನೀಡುವಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ ಕೋರಲಾಗಿದೆ ಎಂದು ಅವರು ತಿಳಿಸಿದರು. ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಹೇಮಾವತಿ ಮತ್ತಿತರರು ಗೋಷ್ಠಿಯಲ್ಲಿದ್ದರು.








PUBLIC NOTICE

Notice is given to the general public at large that my client is negotiating and intending to purchase the notice schedule property from its owners. Any individuals, banks, financial institutions etc., having any objections for my client entering into any transaction with respect to the schedule property from M/s. Balaji Properties is hereby required to communicate their objections in writing to my office with documentary evidence within 07 days from the date of this publication. In the absence of any authenticated objections / claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY

All that piece and parcel of the residential site property bearing No. 30, bearing unique No. 152200428104021010 measuring East to West 12.20 meters and North to South 9.14 meters totally 111.51 sq.meters carved out of land bearing Survey No. 178 situated at Madahalli Village, Jayapura Hobli, Mysuru Taluk & District, Karnataka, formed by the M/s. Balaji Properties, Mysuru, bounded on the: East by: Road ; West by: Site bearing No. 41 ; North by: Site bearing No. 29 and South by: Site bearing No. 31.

Sd/- Milash Arrol Noronha, BB.M, LL.B.
Advocate & Legal Consultant
Office: #1197, 12/2, K.R.B. Road, Chamarajapuram, Mysore-570 005.
Mob: +91 97439 85891
Email: milasharrol.advt@gmail.com



ಮೈಸೂರು ಮಿತ್ರ

ಎಸ್‌ಎಸ್‌ಎಲ್‌ಸಿ: ಮಂಡ್ಯಕ್ಕೆ ದ್ವಿತೀಯ ಸ್ಥಾನ

● ಶೇ.96.74 ರಷ್ಟು ಫಲಿತಾಂಶ ● 624 ಅಂಕ ಪಡೆದ ಮೋಕ್ಷಲಕ್ಷ್ಮಿ, ಪುಣ್ಯಶ್ರೀ, ಖುಷಿಕಾ ಆದರ್ಶ ಟಾಪರ್ಸ್







ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಂಡ್ಯ ಜಿಲ್ಲೆಯ ಮೂವರು ವಿದ್ಯಾರ್ಥಿನಿಯರು 625ಕ್ಕೆ 624 ಅಂಕ ಪಡೆದು ಟಾಪರ್‌ಗಳಾಗಿದ್ದಾರೆ. ಕೆ.ಆರ್.ಪೇಟೆಯ ಆಶೀರ್ವಾದ್ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ವಿದ್ಯಾರ್ಥಿನಿ ಮೋಕ್ಷಲಕ್ಷ್ಮಿ.ಜೆ, ಮಳವಳ್ಳಿ ತಾಲೂಕಿನ ಜೆಜೆ ಪಬ್ಲಿಕ್ ಶಾಲೆಯ ಪುಣ್ಯಶ್ರೀ ಟಿ.ಆರ್ ಹಾಗೂ ಶ್ರೀರಂಗಪಟ್ಟಣದ ನ್ಯೂ ಆಕ್ಸ್‌ಫರ್ಡ್ ಹೈಸ್ಕೂಲ್‌ನ ಖುಷಿಕಾ ಆದರ್ಶ ಅವರು ಟಾಪರ್‌ಗಳಾಗಿ ಹೊರ ಹೊಮ್ಮಿದ್ದಾರೆ.

ಮಂಡ್ಯ, ಮೇ 8– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಮಂಡ್ಯ ಜಿಲ್ಲೆ ಶೇ.96.74 ಫಲಿತಾಂಶದೊಂದಿಗೆ ರಾಜ್ಯದಲ್ಲಿ ಎರಡನೇ ಸ್ಥಾನ ಪಡೆದಿದೆ.

ಈ ಕುರಿತು ಮಾಹಿತಿ ನೀಡಿದ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಟಿ.ಜವರೇಗೌಡ ಅವರು, 19,965 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 19,133 ವಿದ್ಯಾರ್ಥಿಗಳು ಉತ್ತೀರ್ಣರಾಗಿ, 827 ಮಂದಿ ಅನುತ್ತೀರ್ಣರಾಗಿದ್ದಾರೆ. ತಾಲೂಕುವಾರು ಮದ್ದೂರಿನಲ್ಲಿ 3334 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 3289 ಮಂದಿ ಉತ್ತೀರ್ಣ, 44 ಮಂದಿ ಅನುತ್ತೀರ್ಣರಾಗಿ, ಓರ್ವ ಗೈರುಹಾಜರಾಗಿ ಶೇ.98.65 ಫಲಿತಾಂಶದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದೆ.

ಮಂಡ್ಯ ಉತ್ತರ ವಲಯದಲ್ಲಿ 1292 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 1272 ಮಂದಿ ಉತ್ತೀರ್ಣರಾಗಿ, 20 ಮಂದಿ ಅನುತ್ತೀರ್ಣರಾಗಿ ಶೇ.98.45 ಫಲಿತಾಂಶ ಪಡೆದು ದ್ವಿತೀಯ, ಪಾಂಡವಪುರದಲ್ಲಿ 2123 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 2070 ಮಂದಿ ಉತ್ತೀರ್ಣರಾಗಿ, 53 ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಶೇ.97.50 ಫಲಿತಾಂಶ ಪಡೆದು ಮೂರನೇ ಸ್ಥಾನ, ನಾಗಮಂಗಲದಲ್ಲಿ 2294 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 2235 ಮಂದಿ ಉತ್ತೀರ್ಣರಾಗಿ, 57 ಮಂದಿ ಅನುತ್ತೀರ್ಣರಾಗಿ ಇಬ್ಬರು ಗೈರುಹಾಜರಾಗಿದ್ದು ಶೇ.97.43 ಫಲಿತಾಂಶ ಪಡೆದು ನಾಲ್ಕನೇ ಸ್ಥಾನ, ಮಳವಳ್ಳಿಯಲ್ಲಿ 3131 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 3026 ಉತ್ತೀರ್ಣರಾಗಿ, 104 ಮಂದಿ ಅನುತ್ತೀರ್ಣರಾಗಿ, ಒಬ್ಬ ಗೈರುಹಾಜರಾಗಿ ಶೇ.96.65 ಫಲಿತಾಂಶದೊಂದಿಗೆ ಐದನೇ ಸ್ಥಾನ, ಕೆ.ಆರ್.ಪೇಟೆಯಲ್ಲಿ 2726 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 2629 ಮಂದಿ ಉತ್ತೀರ್ಣರಾಗಿ, 97 ಮಂದಿ ಅನುತ್ತೀರ್ಣರಾಗಿ ಶೇ.96.44 ಫಲಿತಾಂಶದೊಂದಿಗೆ ಆರನೇ, ಶ್ರೀರಂಗಪಟ್ಟಣದಲ್ಲಿ 1924 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 1805 ವಿದ್ಯಾರ್ಥಿಗಳು ಉತ್ತೀರ್ಣರಾಗಿ, 119 ವಿದ್ಯಾರ್ಥಿಗಳು ಅನುತ್ತೀರ್ಣರಾಗಿ ಶೇ.93.81 ಫಲಿತಾಂಶದೊಂದಿಗೆ ಏಳನೇ ಸ್ಥಾನ ಹಾಗೂ ಮಂಡ್ಯ ದಕ್ಷಿಣ ವಲಯದಿಂದ 3141 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 2807 ವಿದ್ಯಾರ್ಥಿಗಳು ಉತ್ತೀರ್ಣರಾಗಿ, 333 ವಿದ್ಯಾರ್ಥಿಗಳು ಅನುತ್ತೀರ್ಣರಾಗಿ, ಒಬ್ಬ ವಿದ್ಯಾರ್ಥಿ ಗೈರುಹಾಜರಿಯೊಂದಿಗೆ 89.37ರಷ್ಟು ಫಲಿತಾಂಶ ಬಂದಿದ್ದು 8ನೇ ಸ್ಥಾನ ಪಡೆದಿದೆ.

ನಾನು ದುರಹಂಕಾರಿಯಾಗಿದ್ದರೆ 3 ಬಾರಿ ಶಾಸಕನಾಗುತ್ತಿರಲಿಲ್ಲ

ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ಮೇ 8– ನಾನು ದುರಹಂಕಾರಿಯಾಗಿದ್ದರೆ ಜನ ನನ್ನನ್ನು 3 ಬಾರಿ ಕೆ.ಆರ್.ನಗರದಲ್ಲಿ ಗೆಲ್ಲಿಸುತ್ತಿರಲಿಲ್ಲ. ಇನ್ನು ನೀವು ದುರಂಹಕಾರ ಮಾತುಗಳನ್ನು ಆಡುವುದರಿಂದ ಮುಖ್ಯಮಂತ್ರಿಯಾಗಿದ್ದ ನಿಮ್ಮನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ 36 ಸಾವಿರ ಮತಗಳಿಂದ ಸೋಲಿಸಿದ್ದು ಎಂದು ಮಾಜಿ ಸಿಎಂ ಸಿದ್ದರಾಮಯ್ಯನವರಿಗೆ ಶಾಸಕ ಸಾ.ರಾ.ಮಹೇಶ್ ಟಾಂಗ್ ನೀಡಿದರು.

ಪಟ್ಟಣದ 23 ವಾರ್ಡ್‌ಗಳಲ್ಲಿ ಕಾರ್ಯಕರ್ತರೊಂದಿಗೆ ಪ್ರಚಾರ ನಡೆಸಿ, ಮತಯಾಚಿಸಿ ಮಾತನಾಡಿದ ಅವರು, ಸಂಸದೆ ಸುಮಲತಾ ಮೋಸ ಮಾಡಿದರು ಎನ್ನುವ ನೀವು ಅಂದೇ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿಗೆ ಸಪೋರ್ಟ್ ಮಾಡಿದಂತಾಯಿತು ಎಂದ ಸಾರಾ, ಮುಸ್ಲಿಂ ಮೀಸಲಾತಿ ಬಗ್ಗೆ ಮಾತನಾಡುವ ನೀವು 5 ವರ್ಷ ನೀವೇ ಮುಖ್ಯಮಂತ್ರಿ ಆಗಿದ್ದಿರೀ ಆಗ ಏಕೆ ಮಾಡಲಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ನೀವೆ ಕಾರಣ ಎಂದರು.

ನನ್ನ ಅಧಿಕಾರಾವಧಿಯಲ್ಲಿ ತಾಲೂಕಿನ ವಿಕಲಚೇತನ ಮಕ್ಕಳಿಗೆ ಉಚಿತ ವಿಮೆ, ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್, ಯಶಸ್ವಿನಿ ಕಾರ್ಡ್, ಮಹಿಳೆಯರಿಗೆ ಸೀಮಂತ ಕಾರ್ಯಕ್ರಮ, ಮಹಿಳಾ ಸಂಘಗಳಿಗೆ ಆರ್ಥಿಕ ನೆರವು ಮತ್ತು ಬರಗಾಲದಲ್ಲಿ ಉಚಿತ ಅಕ್ಕಿ ವಿತರಣೆ ಸೇರಿದಂತೆ ಇನ್ನು ಹಲವು ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕ್ಷೇತ್ರದ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದೇನೆ ಎಂದರು.

ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಸೂಕ್ಷ್ಮಾತಿಸೂಕ್ಷ್ಮ ಸಮಾಜಗಳನ್ನು ಬೆಂಬಲಿಸಿದ್ದೇನೆ. ಕ್ಷೇತ್ರದ ಪ್ರತಿ ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಒದಗಿಸಿದ್ದೇನೆ ಎಂದರು. ಕಾಂಗ್ರೆಸ್ ಅಭ್ಯರ್ಥಿ ಸೋಲುವ ಭೀತಿಯಿಂದ ಜೆಡಿಎಸ್ ಕಾರ್ಯಕರ್ತರಿಗೆ ಬೆದರಿಕೆ ಹಾಕುವ ಮೂಲಕ ಮತ ಕೇಳುತ್ತಿರುವುದು ಪ್ರಜಾಪ್ರಭುತ್ವದ ವಿರೋಧಿಯಾಗಿದ್ದು, ಮತದಾರರಿಗೆ ಧಮಕಿ ಹಾಕುವುದು, ಹೆದರಿಸಿ ಬೆದರಿಸಿ ಮತ ಕೇಳುತ್ತಿರುವುದು ನಾಚಿಕೆಗೇಡುತನ. ತಾಲೂಕಿನ ಮತದಾರರು ಇದರಿಂದ ಭಯಗೊಂಡಿದ್ದು, ಚುನಾವಣಾ ಆಯೋಗ ಮತ್ತು ಪೊಲೀಸ್ ಇಲಾಖೆ ಸೂಕ್ತ ಭದ್ರತೆ ನೀಡುವಂತೆ ಒತ್ತಾಯಿಸಿದರು.

ಪಟ್ಟಣದ ಬಜಾರ್ ರಸ್ತೆ, ಸಿ.ಎಂ.ರಸ್ತೆ, ಶ್ರೀರಾಮ ಬಡಾವಣೆ, ಬಸವೇಶ್ವರ ಬಡಾವಣೆ, ಕಂಠೇನಹಳ್ಳಿ, ಆಂಜನೇಯ ಬಡಾವಣೆ, ಮುಸ್ಲಿಂ ಬಡಾವಣೆ ಸೇರಿದಂತೆ ಎಲ್ಲಾ ವಾರ್ಡ್‌ಗಳಲ್ಲೂ ಶಾಸಕ ಸಾ.ರಾ.ಮಹೇಶ್ ಮತಯಾಚಿಸಿದರು.

ಈ ವೇಳೆ ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಪುರಸಭಾ ಸದಸ್ಯ ಕೆ.ಪಿ. ಪ್ರಭುಶಂಕರ್, ಉಮೇಶ್, ಸಂತೋಷ್ ಗೌಡ, ಕೆ.ಎಲ್.ಜಗದೀಶ್, ಮಂಜುಳ, ಸರೋಜ, ಮುಖಂಡರಾದ ಸಂಪತ್, ಭಾಗ್ಯಮ್ಮ, ಗಿರೀಶ್, ತ್ಯಾಗರಾಜ್, ರವಿ, ಸುಬ್ರಹ್ಮಣ್ಯ, ಕೃಷ್ಣಶೆಟ್ಟಿ, ಮಂಜುನಾಥ್, ಹರ್ಷಿತ್ ಸೇರಿದಂತೆ ಇತರರಿದ್ದರು.

ಎಸ್‌ಎಸ್‌ಎಲ್‌ಸಿ: ನಂ.ಗೂಡಿಗೆ ಶೇ.89.63 ಫಲಿತಾಂಶ

ನಂಜನಗೂಡು, ಮೇ 8– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ತಾಲೂಕಿಗೆ ಶೇ.89.63 ಫಲಿತಾಂಶ ಬಂದಿದೆ ಎಂದು ಬಿಇಓ ಎ.ಸಿ.ಶಿವಲಿಂಗಯ್ಯ ತಿಳಿಸಿದ್ದಾರೆ.



ಅಚ್ಚುತಮೌರ್ಯ



ಎಂ.ಎಸ್.ಬಿಂದು

ನಗರದ ಆದರ್ಶ ಶಾಲೆ ವಿದ್ಯಾರ್ಥಿ ಅಚ್ಚುತ ಮೌರ್ಯ 625ಕ್ಕೆ 616 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಯುನಿಟಿ ಶಾಲೆ ವಿದ್ಯಾರ್ಥಿ ಶರತ್, ನಗರದ ಎಸ್ಸಿ, ಎಸ್ಟಿ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆ ವಿದ್ಯಾರ್ಥಿನಿ ಎಂ.ಎಸ್.ಬಿಂದು 613 ಅಂಕ ಪಡೆಯುವ ಮೂಲಕ ದ್ವಿತೀಯ ಸ್ಥಾನ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಯುನಿಟಿ ಶಾಲೆಗೆ ಶೇ.100 ಫಲಿತಾಂಶ: ನಗರದ ಯುನಿಟಿ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದೊರೆತಿದೆ. ಶಾಲೆಯ ಶರತ್ 613 ಅಂಕ ಪಡೆದು ತಾಲೂಕಿಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ತನ್ಜಿಲಾ ತಾಜ್ ಎಂಬ ವಿದ್ಯಾರ್ಥಿನಿ 602, ಕೆ.ಕೆ.ಧನುಷ್ 596 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ ಹಾಜರಾದ 32 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಶೇ.92 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಉತ್ತಮ ಫಲಿತಾಂಶ ನೀಡಿದ ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಆಡಳಿತ ಮಂಡಳಿ ಅಧ್ಯಕ್ಷೆ ಹಾಜಿರಾ ಸಯ್ಯದ್, ಮುಖ್ಯ ಶಿಕ್ಷಕ ನಂಜುಂಡಸ್ವಾಮಿ ಅಭಿನಂದಿಸಿದ್ದಾರೆ.

ಎಸ್ಸಿ ಎಸ್ಟಿ ವಸತಿ ಶಾಲೆಗೆ ಶೇ100 ರಷ್ಟು ಫಲಿತಾಂಶ: ನಗರದ ಎಸ್ಸಿ, ಎಸ್ಟಿ ಪ್ರತಿಭಾನ್ವಿತ ಬಾಲಕಿಯರ ವಸತಿ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ 33 ವಿದ್ಯಾರ್ಥಿಗಳು ಪಾಸಾಗಿದ್ದು, ಅತ್ಯುನ್ನತ ಶ್ರೇಣಿಯಲ್ಲಿ 10, ಪ್ರಥಮ ದರ್ಜೆ 21, ದ್ವಿತೀಯ ದರ್ಜೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಸಿಟಿಜನ್ ಶಾಲೆಗೆ ಉತ್ತಮ ಫಲಿತಾಂಶ: ನಗರದ ಸಿಟಿಜನ್ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ದೊರಕಿದೆ. ಸಿಂಚನಾ ಭಟ್ 609, ಶಿಲ್ಪ 607, ಸ್ಪಂದನ 601 ಅಂಕಗಳನ್ನು ಪಡೆಯುವ ಮೂಲಕ ಕೀರ್ತಿ ತಂದಿದ್ದಾರೆ.

ಸೋಲಿನ ಭೀತಿಯಿಂದ ನನ್ನ ವಿರುದ್ಧ ಅಪಪ್ರಚಾರ



ತಿ.ನರಸೀಪುರ, ಮೇ 8– ಸೋಲಿನ ಭೀತಿಯಿಂದ ಹತಾಶರಾಗಿ ಕಾಂಗ್ರೆಸ್, ಜೆಡಿಎಸ್‌ನವರು ನನ್ನ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸುವ ಮೂಲಕ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ಆರೋಪಿಸಿದರು.

ಪ್ರಚಾರಕ್ಕೆ ಕೊನೆ ದಿನವಾದ ಸೋಮವಾರ ಪಟ್ಟಣ ವ್ಯಾಪ್ತಿಯಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಎರಡನೇ ಸುತ್ತಿನ ಮತಯಾಚನೆ ಮಾಡುತ್ತಿದ್ದೇನೆ. ಹೋದ ಕಡೆಯೆಲ್ಲಾ ನಿರೀಕ್ಷೆಗೂ ಮೀರಿ ಜನ ಬೆಂಬಲ ವ್ಯಕ್ತವಾಗಿದೆ. ಈ ನಡುವೆ ಡಾ.ರೇವಣ್ಣ ಅವರಿಗೆ ಮತ ನೀಡಿದರೆ ಕಾಂಗ್ರೆಸ್ ಗೆಲ್ಲುತ್ತದೆ. ಮತ್ತೊಂದು ಪಕ್ಷದವರು ಇವರಿಗೆ ಮತ ಕೊಟ್ಟರೆ ಅವರು ಗೆಲ್ಲುತ್ತಾರೆ ಎಂದು. ಇನ್ನೊಂದೆಡೆ ಡಾ.ರೇವಣ್ಣ ಒಳ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದ ನಡೆ ಎಂದು ಕಿಡಿಕಾರಿದರು.

ನಾನು ರಾಜಕೀಯಕ್ಕೆ ಬಂದಿರುವುದು ಜನಸೇವೆಗೆ. ಪ್ರಾಣ ಕೊಟ್ಟಾದರೂ ಸೇವೆ ಸಲ್ಲಿಸುತ್ತೇನೆಯೋ ಹೊರತು ಯಾರೊಂದಿಗೂ ಒಳ ಒಪ್ಪಂದ ಮಾಡಿಕೊಳ್ಳುವ ಜಾಯಮಾನ ನನ್ನದಲ್ಲ. ಚುನಾವಣೆ ಒಂದು ಧರ್ಮಯುದ್ಧ. ಸತ್ಯಕ್ಕೆ ಯಾವತ್ತಿಗೂ ಜಯ. ನಮ್ಮ ಜನರು ಸ್ವಾಭಿಮಾನಿಗಳು. ದುಡ್ಡಿಗಾಗಿ ತಮ್ಮನ್ನು ಮಾರಿಕೊಳ್ಳುವವರಲ್ಲ. ದುಡ್ಡಿಗೆ ಮಾನ್ಯತೆ ಕೊಟ್ಟಿದ್ದರೆ ಯಾರ್ಯಾರೋ ಬಂದು ಗೆದ್ದು ಹೋಗುತ್ತಿದ್ದರು ಎಂದರು.

ನನ್ನ ಸರ್ಕಾರಿ ಸೇವೆಯಲ್ಲಿ ತಿಂಗಳಿಗೆ 3 ಲಕ್ಷ ಸಂಬಳ ಸಿಗುತ್ತಿತ್ತು. ಅದನ್ನು ಬಿಟ್ಟು ಸಮಾಜ ಸೇವೆಗಾಗಿ ರಾಜಕೀಯಕ್ಕೆ ಬಂದಿದ್ದೇನೆ. ಆರೋಗ್ಯ, ಶಿಕ್ಷಣ, ಉದ್ಯೋಗ ಸೃಷ್ಟಿ, ಮೂಲ ಸೌಕರ್ಯಗಳ ಕೊರತೆ ತಾಲೂಕಿನಲ್ಲಿದ್ದು, ಇದಕ್ಕೆ ಯಾರೂ ಮಾನ್ಯತೆ ಕೊಟ್ಟಿಲ್ಲ. ಒಳ ಚರಂಡಿ, ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಜನಪ್ರತಿನಿಧಿಗಳಿದ್ದರೂ ಕನಿಷ್ಠ ಮೂಲಸೌಲಭ್ಯ ಒದಗಿಸಲು ಸಾಧ್ಯವಾಗಿಲ್ಲ. ತಾಲೂಕಿನಲ್ಲಿ ಕೆಲಸ ಮಾಡಬೇಕೆಂದರೆ 20 ವರ್ಷಗಳ ದೂರದೃಷ್ಟಿ ಇಟ್ಟು ಯೋಜನೆ ತಯಾರು ಮಾಡಿ ಕೆಲಸ ಮಾಡಬೇಕಾಗುತ್ತದೆ. ಆದರೆ ಇಲ್ಲಿ ಆ ಕೆಲಸ ಆಗಿಲ್ಲ ಬೇಕಾಬಿಟ್ಟಿ ಕೆಲಸಗಳು ನಡೆದಿವೆ ಎಂದರು.

ಸ್ಥಳೀಯರಿಗೆ ಅವಕಾಶ ಇಲ್ಲವೇ?: ಸ್ಥಳೀಯರಿಗೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಹೊರಗಿನ ಅಭ್ಯರ್ಥಿಗಳು ಇಲ್ಲಸಲ್ಲದ ಅಪಪ್ರಚಾರದಲ್ಲಿ ನಿರತರಾಗಿದ್ದಾರೆ. ಕ್ಷೇತ್ರದ ಮತದಾರರು ಪ್ರಜ್ಞಾವಂತರಾಗಿದ್ದು, ಯಾವುದೇ ಆಮಿಷಗಳಿಗೆ ಒಳಗಾಗಬಾರದು. ಅವರಾಗಲೇ ಕ್ಷೇತ್ರದ ಮನೆ ಮಗ ರೇವಣ್ಣರಿಗೆ ಮತ ನೀಡಲು ನಿರ್ಧಾರ ಮಾಡಿದ್ದು, ಈ ಬಾರಿ ಜನತೆ ನನಗೆ ಆಶೀರ್ವಾದ ಮಾಡಲಿದ್ದಾರೆ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಸಿದ್ದರಾಜು, ನಂಜುಂಡಸ್ವಾಮಿ ಸೇರಿದಂತೆ ಇತರರಿದ್ದರು.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಸವಾರ ಸಾವು



ಬೆಟ್ಟದಪುರ, ಮೇ 8– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಸೀಗೂರು ಗ್ರಾಮದ ಬಳಿ ಭಾನುವಾರ ರಾತ್ರಿ ನಡೆದಿದೆ.

ಇಲ್ಲಿಗೆ ಸಮೀಪದ ಹಲಗನಹಳ್ಳಿ ಗ್ರಾಮದ ನಿವಾಸಿ ಮಹಮ್ಮದ್ ಸಾದಿಕ್(45) ಸಾವನ್ನಪ್ಪಿದವರು. ಈತ ಭಾನುವಾರ ಪಿರಿಯಾಪಟ್ಟಣದಲ್ಲಿ ನಡೆದ ಸಿದ್ದರಾಮಯ್ಯನವರ ಕಾರ್ಯಕ್ರಮ ಮುಗಿಸಿಕೊಂಡು ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಹಿಂತಿರುಗುವ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಳಿಕ ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದೆ.

ಕೃಷ್ಣನಾಯಕ ಪರ ಎಂಎಲ್‌ಸಿ ಶಾಂತರಾಂ ಸಿದ್ದಿ ಪ್ರಚಾರ



ಹೆಚ್.ಡಿ.ಕೋಟೆ, ಮೇ 8– ಬಿಜೆಪಿ ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಮಾಡಿದೆ ಎಂದು ಆದಿವಾಸಿ ನಾಯಕ ಹಾಗೂ ವಿಧಾನಪರಿಷತ್ ಸದಸ್ಯ ಶಾಂತರಾಂ ಸಿದ್ದಿ ತಿಳಿಸಿದರು.

ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಸೋಮವಾರ ಕ್ಷೇತ್ರದ ಬಜೆಪಿ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಪರ ಮತಯಾಚಿಸಿ ಮಾತನಾಡಿದ ಅವರು, ಕೋಟೆ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಅವರು ಗೆಲುವು ಸಾಧಿಸಲಿದ್ದಾರೆ ಎಂದರು.

ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರ ಆದಿವಾಸಿಗಳ ಅಭಿವೃದ್ಧಿಗಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಬಜೆಟ್‌ನಲ್ಲಿ ಬುಡಕಟ್ಟು ಸಮುದಾಯಕ್ಕೆ 31 ಸಾವಿರ ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಅದೇ ರೀತಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ಸಿಎಂ ಬಸವರಾಜ ಬೊಮ್ಮಾಯಿ ನಮ್ಮ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕೊಟ್ಟಿದ್ದಾರೆ ಎಂದರು.

ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾತನಾಡಿ, ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ನಡುವೆ ನೇರ ಸ್ಪರ್ಧೆ ಇದ್ದು, ನಮ್ಮ ಬಿಜೆಪಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಉತ್ತಮ ವಾತಾವರಣ ನಿರ್ಮಾಣವಾಗಿದೆ. ಕೃಷ್ಣನಾಯಕ ತಾಲೂಕಿನಲ್ಲಿ ಸಮಾಜಸೇವೆ ಮೂಲಕ ಜನಪ್ರಿಯತೆ ಗಳಿಸಿದ್ದಾರೆ. ಬಿಜೆಪಿ ಕಾರ್ಯಕರ್ತರು, ಮುಖಂಡರು ಅವರ ಗೆಲುವಿಗೆ ಶ್ರಮಿಸುತ್ತಿದ್ದಾರೆ ಎಂದರು.

ಕ್ಷೇತ್ರದ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಮಾತನಾಡಿ, ತಾಲೂಕಿನ ಜನರು ಸ್ವಾಭಿಮಾನಿಗಳಾಗಿದ್ದು, ಯಾವುದೇ ಆಮಿಷಕ್ಕೆ ಒಳಗಾಗದೆ ಈ ಬಾರಿ ನನ್ನನ್ನು ಆಯ್ಕೆ ಮಾಡಲಿದ್ದಾರೆ. ಅಲ್ಲದೇ ಬದಲಾವಣೆ ಬಯಸಿರುವುದರಿಂದ ಜನರು ಕಾಂಗ್ರೆಸ್, ಜೆಡಿಎಸ್ ಪಕ್ಷವನ್ನು ತಿರಸ್ಕರಿಸಿ ಬಿಜೆಪಿಗೆ ಅಧಿಕಾರ ನೀಡಲಿದ್ದಾರೆ ಎಂದರು.

ಇದಕ್ಕೂ ಮುನ್ನಾ ಪಟ್ಟಣದ ಮಹದೇಶ್ವರ ದೇವಸ್ಥಾನದಲ್ಲಿ ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ, ವಿಧಾನಪರಿಷತ್ ಸದಸ್ಯ ಶಾಂತರಾಂ ಸಿದ್ದಿ ಹಾಗೂ ಮುಖಂಡರು ಪೂಜೆ ಸಲ್ಲಿಸಿ, ತೆರೆದ ವಾಹನದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ತಾಲೂಕು ಅಧ್ಯಕ್ಷ ಗುರುಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಹೆಚ್.ಸಿ.ಲಕ್ಷ್ಮಣ್, ವೆಂಕಟಸ್ವಾಮಿ, ಬಸವರಾಜಪ್ಪ, ಬಿಜೆಪಿ ಜಿಲ್ಲಾ ವಕ್ತಾರ ಸಿ.ಕೆ.ಗಿರೀಶ್, ಸಿ.ವಿ.ನಾಗರಾಜು, ಹರೀಶ್‌ಗೌಡ, ವೈಟಿ.ಮಹೇಶ್, ನಂದೀಶ್, ರಾಜು, ಚಂದ್ರಮೌಳಿ, ಸಿದ್ದರಾಜು, ಕೆಂಡಗಣ್ಣಸ್ವಾಮಿ, ಗೋವಿಂದಚಾರಿ, ಸೋಮಚಾರಿ, ನಾಗರಾಜು ಇತರರಿದ್ದರು.



ವರುಣ ಕ್ಷೇತ್ರದ ತಿರುಮಕೂಡಲಿನ 1ನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಪರ ಮನೆ ಮನೆಗೆ ತೆರಳಿ ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ ಮಾಜಿ ಉಪಾಧ್ಯಕ್ಷ ಪುಟ್ಟು, ಮಾಜಿ ಸದಸ್ಯ ಕುಮಾರ್, ಮುಖಂಡರಾದ ರಮೇಶ್, ಶ್ರೀನಿವಾಸ, ಚಂದ್ರು, ನಾಗರಾಜು, ಸುಬ್ರಹ್ಮಣ್ಯ, ಶಿವಣ್ಣ ಸೇರಿದಂತೆ ಇತರರು ಮತಯಾಚಿಸಿದರು.

ಪ್ರಚಾರ ರ್‍ಯಾಲಿಯಲ್ಲಿ ಮುಖಾಮುಖಿಯಾದ ಕಾಂಗ್ರೆಸ್–ಜೆಡಿಎಸ್ ಕಾರ್ಯಕರ್ತರು

ನಾಗಮಂಗಲದಲ್ಲಿ ಘರ್ಷಣೆ: ಕಾಂಗ್ರೆಸ್ ಪ್ರಚಾರ ವಾಹನ ಜಖಂ

ನಾಗಮಂಗಲ, ಮೇ 8– ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿ, ಮತಯಾಚನೆ ಮಾಡುವ ಸಂದರ್ಭ ಜೆಡಿಎಸ್ ಕಾರ್ಯಕರ್ತರು ಎದುರಿಗೆ ರ್‍ಯಾಲಿಯಲ್ಲಿ ಬಂದಿದ್ದು, ಉಭಯ ಪಕ್ಷದ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ.

ಇಂದು ಮಧ್ಯಾಹ್ನ ಕಾಂಗ್ರೆಸ್ ಕಾರ್ಯಕರ್ತರು ರೋಡ್ ಶೋ ನಡೆಸಿ ಮತಯಾಚನೆ ಮಾಡುವ ಸಂದರ್ಭದಲ್ಲಿ ಶಶಿಕಲಾ ನರ್ಸಿಂಗ್ ಹೋಂ ಬಳಿ ಪ್ರಚಾರದ ವಾಹನದಲ್ಲಿ ಬಂದ ಜೆಡಿಎಸ್ ಕಾರ್ಯಕರ್ತರು ತಮ್ಮ ಅಭ್ಯರ್ಥಿ ಪರ ಘೋಷಣೆ ಕೂಗಿದ್ದಾರೆ.

ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಕಾರ್ಯಕರ್ತರು ಕೂಡ ಕಾಂಗ್ರೆಸ್ ಅಭ್ಯರ್ಥಿ ಚಲುವರಾಯಸ್ವಾಮಿ ಪರ ಘೋಷಣೆ ಕೂಗಿದರು. ಈ ವೇಳೆಯಲ್ಲಿ ಎರಡು ಪಕ್ಷದ ಕಾರ್ಯಕರ್ತರ ನಡುವೆ ಮಾತಿಗೆ ಮಾತು ಬೆಳೆದು ಕಾಂಗ್ರೆಸ್ ಪಕ್ಷದ ಪ್ರಚಾರ ವಾಹನದ ಮೇಲೆ ಜೆಡಿಎಸ್ ಪಕ್ಷದ ಕಾರ್ಯಕರ್ತರು ಕಲ್ಲು ತೂರಾಟ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪ್ರಚಾರದ ವಾಹನದ ಗಾಜು ಹೊಡೆದಿದ್ದು, ವಾಹನ ಚಾಲಕ ಗಾಯಗೊಂಡಿರುವುದು ಕಂಡುಬಂದಿದೆ.

ಈ ಘಟನೆಯ ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಅಧಿಕಾರಿಗಳು ಪರಿಸ್ಥಿತಿಯನ್ನು ನಿಯಂತ್ರಿಸಲು ಹರಸಾಹಸ ಪಟ್ಟರು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದೆ ಇದ್ದಂತಹ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಲಾಠಿ ಪ್ರಹಾರ ಮಾಡಿ ಘಟನಾ ಸ್ಥಳದಿಂದ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರನ್ನು ಚದುರಿಸಿದರು.



ಮೂಗೂರಿನಲ್ಲಿ ಶ್ರೀ ದೇಶೇಶ್ವರ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಅಂಗವಾಗಿ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಹೂವಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ವರುಣ ವಿವಿಧೆಡೆ ವಿ.ಸೋಮಣ್ಣ ಪ್ರಚಾರ



ನಂಜನಗೂಡು, ಮೇ 8– ಕಳೆದ 15 ವರ್ಷಗಳಿಂದ ವರುಣ ಕ್ಷೇತ್ರ ಕೆಲವೇ ಮಂದಿ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿದೆ. ಅವರು ಬರೀ ಮಾತು ಬಿಟ್ಟರೆ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ ಕೇಳಿದರೆ ದಬ್ಬಾಳಿಕೆ ಮಾಡುತ್ತಾರೆ. ಅವರ ಪಾಪದ ಕೊಡ ತುಂಬಿದ್ದು, ಅವರ ದಬ್ಬಾಳಿಕೆಗೆ ಅಂತ್ಯ ಹಾಡಲು ಚಾಮುಂಡೇಶ್ವರಿ, ಮಾದಪ್ಪ ನನ್ನನ್ನು ಕರೆಸಿಕೊಂಡಿದ್ದಾರೆ. ವರುಣ ಕ್ಷೇತ್ರವನ್ನು ಇನ್ನೊಂದು ಗೋವಿಂದರಾಜ ಕ್ಷೇತ್ರವನ್ನಾಗಿ ರೂಪಿಸಲು ನನಗೆ ಮತ ನೀಡಿ ಎಂದು ಸಚಿವ ವಿ.ಸೋಮಣ್ಣ ಹೇಳಿದರು.

ತಾಲೂಕಿನ ರಾಂಪುರ, ಏಚಗಳ್ಳಿ, ತಾಂಡವಪುರ, ಬಸವನಪುರ, ಕೆಂಪಿಸಿದ್ದನಹುಂಡಿ, ಹುಳಿಮಾವು ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮಾತನಾಡಿದ ಅವರು, ಸಿದ್ದರಾಮಯ್ಯ 13 ಬಾರಿ ಹಣಕಾಸು ಸಚಿವ, ಒಮ್ಮೆ ಮುಖ್ಯಮಂತ್ರಿಯಾಗಿದ್ದು ವರುಣ ಕ್ಷೇತ್ರವನ್ನು ಚಿನ್ನದ ತಗಡಿನಂತೆ ಅಭಿವೃದ್ಧಿಪಡಿಸಿರಬಹುದೆಂದು ನಾನು ಭಾವಿಸಿದ್ದೆ. ಆದರೆ ಇಲ್ಲಿ ಬಂದು ಸಮಸ್ಯೆಗಳ ಸರಮಾಲೆ ನೋಡಿದಾಗಲೇ ಗೊತ್ತಾಗಿದ್ದು ಅವರು ಬರೀ ಮಾತು ಬಿಟ್ಟರೆ ಏನೂ ಅಭಿವೃದ್ಧಿ ಮಾಡಿಲ್ಲ. ಕೆಲವು ಗ್ರಾಮಗಳಿಗೆ ಬಸ್ ಸೌಲಭ್ಯಗಳೇ ಇಲ್ಲ. ರಸ್ತೆಗಳು ಗುಂಡಿ ಬಿದ್ದು ಹಾಳಾಗಿವೆ. ವರುಣ ಕ್ಷೇತ್ರಕ್ಕೆ ಪ್ರತ್ಯೇಕ ತಾಲೂಕು ಇಲ್ಲದಿರುವುದು ದುರದೃಷ್ಟ. ವರುಣವನ್ನು ತಾಲೂಕು ಕೇಂದ್ರವನ್ನಾಗಿ ಮಾಡಿ ತಗಡೂರು, ತಾಂಡವಪುರಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಉನ್ನತೀಕರಣಗೊಳಿಸುತ್ತೇನೆ ಎಂದರು.

ಸೋಮಣ್ಣನಿಗೆ ಅಭಿವೃದ್ಧಿ ಬಗ್ಗೆ ಚಿಂತನೆ ಬಿಟ್ಟು ಬೇರೆ ಏನೂ ಗೊತ್ತಿಲ್ಲ. ನಾನು ಸುಮ್ಮನೆ ಇಲ್ಲಿಗೆ ಬಂದಿಲ್ಲ. ವರುಣವನ್ನು ಇನ್ನೊಂದು ಗೋವಿಂದರಾಜನಗರ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಲು ಇಲ್ಲಿಗೆ ಬಂದಿದ್ದೇನೆ. ನನ್ನನ್ನು ಬರಿಗೈಲಿ ವಾಪಸ್ ಕಳುಹಿಸಬೇಡಿ. ನೀವು ಹೆಚ್ಚಿನ ಮತ ನೀಡಿ ಆಶೀರ್ವಾದ ಮಾಡಿದಲ್ಲಿ ನಿಮ್ಮ ಮತದ ಶಕ್ತಿ ಎಷ್ಟು ಎಂಬುದನ್ನು ಅಭಿವೃದ್ಧಿ ಮೂಲಕ ತೋರಿಸುತ್ತೇನೆ. ಅವರು 15 ವರ್ಷದಲ್ಲಿ ಮಾಡಲಾಗದ್ದನ್ನು ಕೇವಲ 2 ವರ್ಷದಲ್ಲಿ ವರುಣವನ್ನು ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿ ನಿಮ್ಮ ಋಣ ತೀರಿಸುತ್ತೇನೆ ಎಂದರು.

ಈ ವೇಳೆ ಮುಖಂಡರಾದ ರೇವಣ್ಣಸಿದ್ದಯ್ಯ, ಕಾ.ಪು.ಸಿದ್ದಲಿಂಗಸ್ವಾಮಿ, ವರುಣ ಬಿಜೆಪಿ ಅಧ್ಯಕ್ಷ ವಿಜಯ್‌ಕುಮಾರ್, ಚಂದ್ರು, ಗುರುಸ್ವಾಮಿ, ಪುಟ್ಟಣ್ಣ, ಗಿರೀಶ್ ಉಪ್ಪಾರ್, ಮಹೇಶ್, ಪ್ರಕಾಶ್, ಸಿದ್ದಪ್ಪ ಇದ್ದರು.

ಸಾ.ರಾ.ಮಹೇಶ್ ಪುತ್ರನ ಕಾರಿಗೆ ಕಲ್ಲು ತೂರಾಟ ಆರೋಪ ಸತ್ಯಕ್ಕೆ ದೂರ

ಬೀಚನಹಳ್ಳಿ ಕೊಪ್ಪಲು ಗ್ರಾಮಸ್ಥರ ಸ್ಪಷ್ಟನೆ




ಹೆಬ್ಬಾಳು, ಮೇ 8– ಶಾಸಕ ಸಾ.ರಾ.ಮಹೇಶ್ ಪುತ್ರ ಡಾ.ಧನುಷ್ ತಂದೆ ಪರ ಪ್ರಚಾರ ಮಾಡುವ ವೇಳೆ ಸಾಲಿಗ್ರಾಮ ತಾಲೂಕು ಬೀಚನಹಳ್ಳಿ ಕೊಪ್ಪಲು ಮತ್ತು ಗಂಧನಹಳ್ಳಿ ಗ್ರಾಮದಲ್ಲಿ ಪ್ರಚಾರಕ್ಕೆ ಅಡ್ಡಿಪಡಿಸಿ ಗ್ರಾಮಸ್ಥರು, ಶಾಸಕ ಸಾ.ರಾ.ಮಹೇಶ್ ಪುತ್ರನ ಕಾರಿಗೆ ಕಲ್ಲು ತೂರಲಾಗಿದೆ ಎಂಬ ಆರೋಪ ಸತ್ಯಕ್ಕೆ ದೂರ ಎಂದು ಬೀಚನಹಳ್ಳಿ ಕೊಪ್ಪಲು ಗ್ರಾಮಸ್ಥರು ಸ್ಪಷ್ಟಪಡಿಸಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರಾಮಸ್ಥರು, ಈವರೆಗೂ ನಮ್ಮ ಗ್ರಾಮಕ್ಕೆ ಬಂದವರಿಗೆ ಪ್ರಚಾರ ಮಾಡಲು ಯಾವುದೇ ರೀತಿ ಅಡ್ಡಿ ಪಡಿಸಿಲ್ಲ. ಈ ಗ್ರಾಮ ಕಾಂಗ್ರೆಸ್ ಬೆಂಬಲಿಸುವ ಕಾರಣಕ್ಕಾಗಿ ಶಾಸಕರ ಬೆಂಬಲಿಗರು ಮತದಾನಕ್ಕೆ ಒಂದೆರಡು ದಿನ ಇರುವುದರಿಂದ ರಾಜಕೀಯ ಲಾಭ ಪಡೆಯಲು ಈ ರೀತಿ ಆರೋಪ ಮಾಡಿದ್ದಾರೆ ಎಂದು ದೂರಿದರು.

ಗಲಾಟೆ ನಡೆದಿದೆ ಎನ್ನುವ ಶಾಸಕರ ಪುತ್ರ, ಸಮೀಪವೇ ಇರುವ ಸಾಲಿಗ್ರಾಮ ಠಾಣೆಗೆ ಕೂಡಲೇ ದೂರು ನೀಡಬಹುದಿತ್ತು. ಆದರೆ ಮಧ್ಯರಾತ್ರಿ ದೂರು ದಾಖಲಿಸಲಾಗಿದೆ. ಇದು ಪೂರ್ವ ನಿಯೋಜಿತ ಎಂಬುದು ತಿಳಿಯುತ್ತದೆ. ಪೊಲೀಸ್ ಇಲಾಖೆ ಸೇರಿದಂತೆ ಇತರ ಅಧಿಕಾರಿಗಳು ಶಾಸಕರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಗ್ರಾಪಂ ಸದಸ್ಯ ಅರುಣ್, ಗ್ರಾಮಸ್ಥರಾದ ಯಜಮಾನ್ ಸುರೇಶ್, ಮುಖಂಡರಾದ ಎಂ.ಡಿ.ಮಹದೇವ್, ಕೆಂಪೇಗೌಡ, ರಾಮೇಗೌಡ, ಯಶವಂತ್, ನಾಗರಾಜು, ಶಿವಣ್ಣ, ಪುಟ್ಟಸ್ವಾಮಿ, ರವಿಕುಮಾರ್, ಗಣೇಶ್, ಜವರೇಗೌಡ, ಬಲರಾಮು, ತಮ್ಮಣ್ಣೇಗೌಡ, ಜವರಶೆಟ್ಟಿ, ಶಿವಣ್ಣೇಗೌಡ, ಪಾಲಾಕ್ಷ, ಬಸವರಾಜು, ಹರೀಶ್‌ಗೌಡ, ಜವರೇಗೌಡ, ಕೃಷ್ಣೇಗೌಡ ಸೇರಿದಂತೆ ಗ್ರಾಮಸ್ಥರು ಇದ್ದರು.

ವರುಣ ಅಭಿವೃದ್ಧಿಗಾಗಿ ಜೆಡಿಎಸ್ ಬೆಂಬಲಿಸಿ: ಭಾರತೀ ಶಂಕರ್



ತಿ.ನರಸೀಪುರ, ಮೇ 8– ವರುಣ ಕ್ಷೇತ್ರದ ಅಭಿವೃದ್ಧಿಗಾಗಿ ಜೆಡಿಎಸ್ ಬೆಂಬಲಿಸುವಂತೆ ಜೆಡಿಎಸ್ ಅಭ್ಯರ್ಥಿ ಡಾ.ಎನ್.ಎಲ್.ಭಾರತೀಶಂಕರ್ ಮನವಿ ಮಾಡಿದರು.

ಪಕ್ಷದ ಕಾರ್ಯಕರ್ತರು, ಅಭಿಮಾನಿಗಳೊಂದಿಗೆ ಕ್ಷೇತ್ರ ವ್ಯಾಪ್ತಿಯ ಹೌಸಿಂಗ್ ಬೋರ್ಡ್ ಕಾಲೋನಿ, ನ್ಯಾಯಾಲಯ ಹಾಗೂ ಕಾಲೇಜು ರಸ್ತೆಯಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಬಳಿಕ ಮಾತನಾಡಿದ ಅವರು, ವರುಣ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾದ ನಾನು ಕ್ಷೇತ್ರದ 153 ಹಳ್ಳಿಗಳಲ್ಲೂ ಮತಯಾಚಿಸಿದ್ದೇನೆ. ಇದೀಗ ಪಟ್ಟಣ ವ್ಯಾಪ್ತಿಯಲ್ಲಿ ಪಾದಯಾತ್ರೆ ಮೂಲಕ ಮತ ಕೇಳುತ್ತಿದ್ದೇನೆ. ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಕ್ಷೇತ್ರಾದ್ಯಂತ ಪಕ್ಷದ ಪರ ಉತ್ತಮ ವಾತಾವರಣವಿದ್ದು, ಜನತೆ ನನಗೆ ಆಶೀರ್ವದಿಸುವ ಭರವಸೆ ನೀಡುತ್ತಿದ್ದಾರೆ. ನಾನು ಸಿನಿಮಾ ನಟ, ನಟಿಯರನ್ನು ಕರೆತಂದು ಪ್ರಚಾರ ನಡೆಸಿಲ್ಲ. ನೇರವಾಗಿ ಜನರ ಮನೆ ಮನೆಗೆ ಹೋಗಿ ಮತ ಕೇಳುತ್ತಿದ್ದೇನೆ. ಈ ನಡುವೆ ಬಿಜೆಪಿ ಮತ್ತು ಕಾಂಗ್ರೆಸ್ ನನ್ನ ಬಗ್ಗೆ ಅಪಪ್ರಚಾರ ಮಾಡುತ್ತಿರುವುದು ನಮ್ಮ ಕಾರ್ಯಕರ್ತರಲ್ಲಿ ಆತಂಕ ಮೂಡಿಸಿದೆ.

ಚುನಾವಣೆ ದಿನ ಎಲ್ಲ 256 ಬೂತ್‌ಗಳಲ್ಲೂ ನಮ್ಮ ಪಕ್ಷದ ಕಾರ್ಯಕರ್ತರು ಇರುತ್ತಾರೆ. ಯಾವುದೇ ಹೊಂದಾಣಿಕೆ ಆಗಿಲ್ಲ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾದದ್ದು ಎಂದ ಭಾರತೀ ಶಂಕರ್, 13ನೇ ತಾರೀಖು ನಮಗೆ ಉತ್ತಮ ಫಲಿತಾಂಶ ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪತ್ನಿ, ಪುತ್ರಿಯಿಂದ ಮತಯಾಚನೆ: ಈ ನಡುವೆ ಅಭ್ಯರ್ಥಿ ಡಾ. ಎನ್.ಎಲ್.ಭಾರತೀ ಶಂಕರ್ ಪರ ಅವರ ಪತ್ನಿ ಡಾ.ಸನತ್ ಕುಮಾರಿ ಹಾಗೂ ಪುತ್ರಿ ಸುಪ್ರಿಯಾ ಶಂಕರ್ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು.

ತಿ.ನರಸೀಪುರ ಕ್ಷೇತ್ರದಿಂದ ಶಾಸಕರಾಗಿದ್ದ ಭಾರತೀ ಶಂಕರ್ ಅವರಿಗೆ ಈ ಬಾರಿ ವರುಣ ಕ್ಷೇತ್ರದಲ್ಲಿ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಿ ಎಂದು ಮನವಿ ಮಾಡಿದರು. ಈ ವೇಳೆ ಚನ್ನೇಗೌಡ, ಬಸವರಾಜು, ಹಬೀದ್, ಶಿವಪ್ರಸಾದ್ ಹಾಗೂ ಮತ್ತಿತರರಿದ್ದರು.

ಹುಡ್ಕೋದಲ್ಲಿ ತನ್ವೀರ್ ಸೇಠ್ ಮತಯಾಚನೆ



ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹಾಗೂ ಶಾಸಕ ತನ್ವೀರ್ ಸೇಠ್ ಹುಡ್ಕೋದಲ್ಲಿ ಮನೆ ಮನೆಗೆ ತೆರಳಿ, ಮತಯಾಚನೆ ಮಾಡಿದರು. ಮಾಜಿ ಸಚಿವರಾದ ದಿವಂಗತ ಅಜೀಜ್ ಸೇಠ್ ಅವರ ಪುತ್ರರೂ ಆದ ತನ್ವೀರ್ ಸೇಠ್ ಅವರು ಉಪ ಚುನಾವಣೆಯೂ ಸೇರಿದಂತೆ ಐದು ಬಾರಿ ಗೆದ್ದು, ಶಾಸಕರಾಗಿ ಇದುವರೆಗೆ 'ಸೋಲಿಲ್ಲದ ಸರದಾರ' ಎನಿಸಿಕೊಂಡಿದ್ದಾರೆ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ): ಬೆ.10.10ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಾಘವೇಂದ್ರ ಸ್ಟೋರ್ಸ್ (ಕ): ಬೆ.11.05ಕ್ಕೆ, ರಾ.7.35ಕ್ಕೆ, ಪೊನ್ನಿಯಿನ್ ಸೆಲ್ವನ್ -2 (ತ): ಮ.1.15ಕ್ಕೆ, ಸಂ.4.25ಕ್ಕೆ, ಪಚುವುಮ್ ಅತ್ಬುತ ವಿಲಕ್ಕುಮ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11.20ಕ್ಕೆ, ರಾಮಬಾಣಂ (ತೆ): ಮ.1.30ಕ್ಕೆ, ರಾ.9.55ಕ್ಕೆ, ಉಗ್ರಂ (ತೆ): ಸಂ.4.20ಕ್ಕೆ, ಪೊನ್ನಿಯಿನ್ ಸೆಲ್ವನ್ -2(ತ): ಸಂ.6.45ಕ್ಕೆ.
ಸ್ಕ್ರೀನ್ 4	2018 ಎವರಿವೊನ್ ಇಸ್ ಎ ಹೀರೋ (ಮ): ಬೆ.11ಕ್ಕೆ, ರಾಘವೇಂದ್ರ ಸ್ಟೋರ್ಸ್ (ಕ): ಮ.1.55ಕ್ಕೆ, ರಾ.10ಕ್ಕೆ, ದಿ ಕೇರಳ ಸ್ಟೋರಿ (ಹಿಂ): ಸಂ.4.15ಕ್ಕೆ, ರಾ.7.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗುರುದೇವ್ ಹೊಯ್ಸಳ (ಕ): ಬೆ.10.20ಕ್ಕೆ, ವೀರಂ (ಕ): ಮ.1.05ಕ್ಕೆ, ರಾ.7.15ಕ್ಕೆ, ರಾವಣಾಸುರ (ತೆ): ಸಂ.4.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಬೆ.10.25ಕ್ಕೆ, ದಿ ಸೂಪರ್ ಮಾರಿಯೋ ಬ್ರದರ್ಸ್ ಮೂವಿ (3ಡಿ)(ಇಂ): ಮ.12.45ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾಮಾಚಾರಿ 2.0(ಕ): ಮ.2.55ಕ್ಕೆ, ದಸರಾ (ತೆ): ರಾ.10ಕ್ಕೆ.
ಸ್ಕ್ರೀನ್ 3	ವೀರಂ (ಕ): ಬೆ.10.10ಕ್ಕೆ, ರಾವಣಾಸುರ (ತೆ): ಮ.1.25ಕ್ಕೆ, ಗುರುದೇವ ಹೊಯ್ಸಳ (ಕ): ಸಂ.4.20ಕ್ಕೆ, ರಾ.9.50ಕ್ಕೆ, ನಮ್ ನಾಣಿ ಮದುವೆ ಪ್ರಸಂಗ (ಕ): ರಾ.7.05ಕ್ಕೆ.
ಸ್ಕ್ರೀನ್ 4	ಪ್ರವೀಣ (ಕ): ಬೆ.11.10ಕ್ಕೆ, ಗುರುದೇವ ಹೊಯ್ಸಳ (ಕ): ಮ.1.45ಕ್ಕೆ, ದಿ ಪೋಪ್ಸ್ ಎಕ್ಸಾರ್ಸಿಸ್ಟ್ (ಇಂ): ಸಂ.4.30ಕ್ಕೆ, ರಾ.10.20ಕ್ಕೆ, ಪೆಂಟಗನ್ (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಉಗ್ರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಘವೇಂದ್ರ ಸ್ಟೋರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಬ್ಜ(ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಂಟಗಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪಿಎಸ್-2 (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಕೇರಳ ಸ್ಟೋರಿ (ಹಿ)	4 ಪ್ರದರ್ಶನಗಳು
ಸಂಗಂ	
ರಾಮಬಾಣಂ (ತೆ)	4 ಪ್ರದರ್ಶನಗಳು
ಲಿಡೋ	
ಪಿಎಸ್-2 (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮಬಾಣಂ (ತೆ)	4 ಪ್ರದರ್ಶನಗಳು
ಪ್ರಭಾ	
ಹೊಯ್ಸಳ(ಕ)	4 ಪ್ರದರ್ಶನಗಳು

ಹಸಿರು ನಮ್ಮ ಉಸಿರು

ಚುನಾವಣೆ ನೀತಿಗೆ ಬೇಕು ಬದಲಾವಣೆ!

ಕರ್ನಾಟಕ ರಾಜ್ಯದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಆರೋಪಿಗೆ ತನ್ನ ಕ್ಷೇತ್ರವನ್ನು ಪ್ರವೇಶಿಸಲು ಕೋರ್ಟ್ ನಿರಾಕರಣೆ ಮಾಡಿದೆ. ಆತ ಚುನಾವಣೆಯಲ್ಲಿ ಗೆದ್ದು ನಾಳೆ ಮಂತ್ರಿಯಾದರೂ ಆಶ್ಚರ್ಯವಿಲ್ಲ!. ಮತ್ತೊಬ್ಬ ಅಭ್ಯರ್ಥಿ ಕ್ರಿಮಿನಲ್ ಹಿನ್ನೆಲೆ ಹೊಂದಿದ್ದು, ಅನೇಕ ಕೇಸುಗಳ ಪಟ್ಟಿಯನ್ನೇ ಸ್ವಯಂ ಘೋಷಿಸಿದ್ದಾನೆ. ಅವನು ನಾಳೆ ಆಯ್ಕೆಯಾಗಿ ಪವಿತ್ರ ಸ್ಥಳ ಎಂದೇ ಕರೆಯಲ್ಪಡುವ ವಿಧಾನಸೌಧಕ್ಕೆ ಪ್ರವೇಶಿಸಿ ದರ್ಬಾರು ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಏನಾಗಿದೆ ಈ ಕಾನೂನು ವ್ಯವಸ್ಥೆಗೆ?. ಇಂದು ವಿವಾದಕ್ಕೆ ಈಡಾಗಿರುವ ಜನನಾಯಕರಿಗೆ, ಆರೋಪಿಗಳಿಗೆ, ಜೈಲುವಾಸಿಗಳಿಗೆ, ಕ್ರಿಮಿನಲ್ ಹಿನ್ನೆಲೆ ಹೊಂದಿರುವವರಿಗೆ, ರೌಡಿಶೀಟರ್‌ಗಳಿಗೆ ಪ್ರಮುಖ ಪಕ್ಷಗಳು ಟಿಕೆಟ್ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶಕೊಟ್ಟಿವೆ. ಇವರುಗಳು ಆಯ್ಕೆಗೊಂಡು ನಾಳೆ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಕೊಡುಗೆಯಾದರೂ ಏನು? ಕೆಲವು ಕ್ಷೇತ್ರಗಳಲ್ಲಂತೂ ಸ್ಪರ್ಧಿಗಳಲ್ಲಿ ಅನೇಕರು ಅಯೋಗ್ಯರೇ ಆಗಿದ್ದಾರೆ. ಸೂಕ್ತ ಅಭ್ಯರ್ಥಿಯನ್ನು ಆರಿಸಲು ಮತದಾರರಿಗೆ ಅವಕಾಶವೇ ಇಲ್ಲ.



ಜಿ.ಎಲ್. ತ್ರಿಪುರಾಂತಕ
ಮೊ.96866-77284



ಕರ್ನಾಟಕ ರಾಜ್ಯದ ವಿಧಾನಸಭೆಗೆ ಚುನಾವಣೆ ಸನ್ನಿಹಿತವಾಗಿದೆ. ರಾಷ್ಟ್ರೀಯ ಪಕ್ಷಗಳ ಜೊತೆಗೆ ಪ್ರಾದೇಶಿಕ ಪಕ್ಷಗಳ ಪ್ರಣಾಳಿಕೆಗಳು ರಾಜ್ಯದ ಪ್ರಜೆಗಳ ಕನಸುಗಳಿಗೆ ರೆಕ್ಕೆಗಳನ್ನು ಕಟ್ಟುತ್ತಿವೆ. ಇರುಳು ಕಂಡ ಬಾವಿಗೆ ಹಗಲಲ್ಲೇ ಬೀಳಲು ಜನರು ಸಜ್ಜಾಗಿದ್ದಾರೆ. ನಮ್ಮ ದೇಶದ ಸಂವಿಧಾನ ರೂಪಿಸಿರುವ ಚುನಾವಣೆ ನೀತಿಗೆ ಅನುಸಾರವಾಗಿ ಆಡಳಿತವು ಚುನಾವಣೆಗೆ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಪ್ರಜೆಗಳು ತಮ್ಮ ಪ್ರಭುಗಳನ್ನು ಆರಿಸುವ ವಿಶಿಷ್ಟವಾದ ಹಕ್ಕನ್ನು ಸಂವಿಧಾನ 18 ವರ್ಷ ಪೂರೈಸಿದ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಕರುಣಿಸಿದೆ. ಇದರ ಕುರಿತು ಅಪಾರವಾದ ಗೌರವವಿದೆ. ಆದರೆ ಇಂದಿನ ದಿನಮಾನದಲ್ಲಿ ಚುನಾವಣೆ ನೀತಿಗೆ ಭರ್ಜರಿಯಾದ ಸರ್ಜರಿ ಅವಶ್ಯವಿದೆ. ಸಂವಿಧಾನ ರಚನೆ ಸಂದರ್ಭದಲ್ಲಿದ್ದ ಚುನಾವಣೆ ನೀತಿಗಳು ಇಂದಿಗೂ ಹೆಚ್ಚು ಪರಿಷ್ಕರಣೆ ಆಗದೇ ಉಳಿದುಕೊಂಡಿರುವುದು ಸೋಜಿಗದ ಸಂಗತಿ. ಸಂವಿಧಾನದ ಅನೇಕ ವಿಧಿಗಳು ಕಾಲಾನುಕಾಲಕ್ಕೆ ಪರಿಷ್ಕರಣೆಗೊಳ್ಳುತ್ತಿವೆ. ಆದರೆ ಚುನಾವಣೆ ನೀತಿಗೆ ಈ ಬದಲಾವಣೆಯ ಬಿಸಿ ಅಷ್ಟೇನೂ ತಟ್ಟಿಲ್ಲ ಎಂಬುದೇ ವಿಪರ್ಯಾಸ. ಇದರಿಂದ ಜನರನ್ನಾಳಲು ನಾಲಾಯಕ್ ನಾಯಕರು ಆಯ್ಕೆಯಾಗುತ್ತಿರುವುದು ದೇಶದ ಪ್ರಗತಿಗೆ, ಪ್ರಜೆಗಳ ಹಿತಕ್ಕೆ ಮಾರಕ!

ಐವತ್ತು ಜನರು ಪ್ರಯಾಣಿಸಬಹುದಾದ ಸಾರಿಗೆ ಸಂಸ್ಥೆಯ ಬಸ್ ಒಂದಕ್ಕೆ ಚಾಲಕನನ್ನು ಆಯ್ಕೆ ಮಾಡಬೇಕಾದರೆ ಅವನಿಗೆ ಕನಿಷ್ಠ ವಿದ್ಯಾರ್ಹತೆ, ಅನುಭವ, ಚಾಲನಾ ಪರವಾನಗಿ, ಆರೋಗ್ಯ, ವಯೋಮಾನ ಎಲ್ಲಾ ಮಾನದಂಡಗಳು ಪೂರೈಕೆಯಾದರೆ ಮಾತ್ರ ಅವನನ್ನು ಚಾಲನೆ ಮಾಡಲು ಯೋಗ್ಯ ಎಂದು ಆಯ್ಕೆ ಮಾಡಿ ಬಸ್ ಚಲಾಯಿಸಲು ನೀಡಲಾಗುತ್ತದೆ. ನಿವೃತ್ತಿ ವಯಸ್ಸು ತಲುಪಿದ ಮೇಲೆ ಆತ ಎಷ್ಟೇ ಸಮರ್ಥನಾಗಿದ್ದರೂ, ವಯಸ್ಸಾದ ಕಾರಣಕ್ಕೆ ಅಸಮರ್ಥ ಎಂದು ಘೋಷಿಸಿ ಅವರನ್ನು ಕೆಲಸದಿಂದ ಬಿಡುಗಡೆ ಮಾಡಿ ಕಳುಹಿಸಲಾಗುತ್ತದೆ. ಆದರೆ ದೇಶ ನಡೆಸುವ ಜನಪ್ರತಿನಿಧಿ ಆಯ್ಕೆಗೆ ಈ ತರಹದ ಯಾವುದೇ ಮಾನದಂಡಗಳೇ ಇಲ್ಲ. ಮಾನವೇ ಇಲ್ಲದವರು ದಂಡನಾಯಕನಾಗುವುದು ಎಷ್ಟರ ಮಟ್ಟಿಗೆ ಸರಿ?. ಭಾರತೀಯನಾಗಿ ಕನಿಷ್ಠ ವಯೋಮಾನ ಹೊಂದಿದ್ದರೆ ಆತ-ಆಕೆ ಚುನಾವಣೆಯಲ್ಲಿ ಸ್ಪರ್ಧಿಸಲು ಯೋಗ್ಯ. ವಿದ್ಯಾರ್ಹತೆ, ಅನುಭವ, ವಯೋಮಾನ, ನಿವೃತ್ತಿ ಯಾವುದರ ಗೋಜಲು ಇಲ್ಲವೇ ಇಲ್ಲ. ಒಮ್ಮೆ ಜೈಲಿಗೆ ಹೋಗಿ ಬಂದರೆ ಅವನನ್ನು ಸರ್ಕಾರಿ ಕೆಲಸಕ್ಕೆ ಸೇರಲು ಅನರ್ಹ ಎಂದು ಘೋಷಿಸಲಾಗುತ್ತದೆ. ಆದರೆ ಜನಪ್ರತಿನಿಧಿಯೊಬ್ಬ ಜೈಲಿನಿಂದಲೇ ಸ್ಪರ್ಧಿಸಬಹುದು, ಜಯಗಳಿಸಬಹುದು ಎಂದರೆ ಇದಕ್ಕಿಂತ ಹಾಸ್ಯಾಸ್ಪದವಾದ ವಿಷಯ ಮತ್ತೊಂದು ಉಂಟೇ? ವಿಶ್ವಕ್ಕೆ ಮಾದರಿಯಾದ ಸಂವಿಧಾನದಲ್ಲಿ ಜೈಲಿನಲ್ಲಿರುವ ಆರೋಪಿ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹ ಎಂದು ಪರಿಷ್ಕರಣೆ ಮಾಡಲು ಸಾಧ್ಯವೇ ಇಲ್ಲವೇ?

ಉತ್ತರ ಭಾರತದ ರಾಜ್ಯವೊಂದರಲ್ಲಿ 9ನೇ ತರಗತಿ ಓದಿದವನು ಶಾಸಕನಾಗಿ, ಕ್ಯಾಬಿನೆಟ್ ದರ್ಜೆ ಸಚಿವನಾಗಿ ಕೆಲಸ ನಿರ್ವಹಿಸುತ್ತಾನೆ. ಅವನ ಕೈ ಕೆಳಗೆ ಐಎಎಸ್ ಅಧಿಕಾರಿಗಳು ಕೆಲಸ ನಿರ್ವಹಿಸಬೇಕು ಎಂದರೆ ಇದಕ್ಕಿಂತ ದೌರ್ಭಾಗ್ಯ ಮತ್ತೊಂದು ಉಂಟೇ. ಅನೇಕ ಸಚಿವರು ಕನಿಷ್ಠ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರುವುದಿಲ್ಲ. ಕನಿಷ್ಠ ಜ್ಞಾನ ಹೊಂದಿಲ್ಲದ ಕಾರಣಕ್ಕೆ ತಮ್ಮ ಕ್ಷೇತ್ರ ಹಾಗೂ ಇಲಾಖೆಯಲ್ಲಿ ಅಭಿವೃದ್ಧಿ ಮಾಡಲಾಗದೆ ಸರ್ಕಾರದ ಅನುದಾನದ ಹಣ ಪೋಲಾಗುತ್ತಿರುವುದನ್ನು ಕಾಣಬಹುದು.

ಎಷ್ಟೋ ಶಾಸಕರು, ಸಂಸದರು ತಮ್ಮ ವೈಯಕ್ತಿಕ ಕೆಲಸಗಳನ್ನು ಮಾಡಿಕೊಳ್ಳಲಾಗದಷ್ಟು ದೈಹಿಕವಾಗಿ ಅಸಮರ್ಥರಾಗಿರುತ್ತಾರೆ. ಅಂಥವರು ಜನರ ಕೆಲಸಗಳನ್ನು ಮಾಡಿಕೊಡಲು ಸಾಧ್ಯವೇ? ನಮ್ಮ ದೇಶದಲ್ಲಿ ಆಸ್ಪತ್ರೆಗೆ ದಾಖಲಾಗಿ ಅನೇಕ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ಚಲಾಯಿಸಿದ ಉದಾಹರಣೆಗಳು ಸಹ ಉಂಟು. ಇಂತಹ ಅವಕಾಶಗಳು ಚುನಾವಣೆ ಕಾನೂನಿನಲ್ಲಿ ಪರಿಷ್ಕರಣೆ ಆಗದೇ ಇರುವ ಕಾರಣಕ್ಕೆ ಆಗಿದೆ. ಅಸಮರ್ಥರೆಲ್ಲರೂ ಸಮರ್ಥರನ್ನು ಆಳುವ ಅವಕಾಶವಿದೆ.

2006ರ ಈಚೆಗೆ ನೇಮಕಗೊಂಡ ಸರ್ಕಾರಿ ನೌಕರರಿಗೆ ಮಾಸಿಕ ಪಿಂಚಣಿಯನ್ನು ರದ್ದು ಪಡಿಸಲಾಗಿದೆ. ಆದರೆ ಶಾಸಕರಾದವರಿಗೆ, ಸಂಸದರಾದವರಿಗೆ ಏಕೆ ಇದೇ ಮಾನದಂಡವನ್ನು ಅನುಸರಿಸಬಾರದು. ಒಮ್ಮೆ ಶಾಸಕ, ಸಂಸದನಾದವನು ಅವನ ಜೀವಿತ ಕಾಲದ ಅಂತ್ಯದವರೆಗೂ ಪಿಂಚಣಿ ಪಡೆಯಲು ಯೋಗ್ಯನಾಗುತ್ತಾನೆ. ಇದು ಎಷ್ಟು ಸರಿ? ಅವರಿಗೂ ಪಿಂಚಣಿ ಯೋಜನೆ ರದ್ದುಪಡಿಸಬಹುದಲ್ಲವೇ? ಅನೇಕ ಬಗೆಯಲ್ಲಿ ದೇಶದ ಸಂಪತ್ತನ್ನು ಲೂಟಿ ಮಾಡಿ, ನಾಲ್ಕಾರು ತಲೆಮಾರು ಕೂತು ತಿನ್ನುವಷ್ಟು ಮಾಡಿಕೊಳ್ಳುವವರಿಗೆ ಜನರು ಬೆವರು ಸುರಿಸಿ ದುಡಿದ ತೆರಿಗೆ ಹಣದಲ್ಲಿ ಏಕೆ ಪಿಂಚಣಿ ನೀಡಬೇಕು? ಗೂಬೆ-ಗೂಸುಂಬೆಗಳೆಲ್ಲಾ ಸರ್ಕಾರಿ ಸವಲತ್ತು ಪಡೆಯಲು ಬಕಪಕ್ಷಿಗಳಂತೆ ಕಾಯುತ್ತಾ ಇವೆ ಅಷ್ಟೇ. ಇವರಿಗೆ ಸಮಾಜ ಸೇವೆ ಎಂಬುದು ಒಂದು ಮುಖವಾಡ. ಸರ್ಕಾರ ನೀಡುವ ಸವಲತ್ತು, ಕಾರು, ಬಂಗಲೆ ಇವುಗಳ ಕುರಿತೇ ಹೆಚ್ಚು ಆಸಕ್ತಿ. ತಮ್ಮ ಅನಾರೋಗ್ಯಕ್ಕೆ ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡಿಸುವ ಅನೇಕ ಖದೀಮ ರಾಜಕಾರಣಿಗಳು ಸಹ ಉಂಟು. ಇತ್ತ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಹೆರಿಗೆ ಮಾಡಿಸಲು ವೈದ್ಯರ ಕೈಯನ್ನು ಬೆಚ್ಚಗೆ ಮಾಡುವ ವ್ಯವಸ್ಥೆ ರೂಪಿಸಿರುವ ಈ ಜನನಾಯಕರು ತಮ್ಮ ಚಿಕಿತ್ಸೆಗೆ ವಿದೇಶಕ್ಕೆ ಜನರ

> **“ ಭಾರತದ ಪ್ರತಿಯೊಬ್ಬ ಪ್ರಜೆಯೂ ಜಾಗೃತಗೊಳ್ಳಬೇಕು. ಚುನಾವಣೆ ನೀತಿಯಲ್ಲಿನ ಪರಿಷ್ಕರಣೆಗೆ ಧ್ವನಿ ಎತ್ತಬೇಕು. ನಮ್ಮನ್ನು ಆಳುವವರು ನಮಗಿಂತಲೂ ವಿದ್ಯಾವಂತರೂ, ಬುದ್ಧಿವಂತರೂ ಆಗಿರಬೇಕು ಎಂಬ ಆಶಯವಿರಬೇಕು. ಅನರ್ಹರನ್ನು ಆಯ್ಕೆ ಮಾಡಿದರೆ ಅದರ ಫಲವನ್ನು ನಾವೇ ಅನುಭವಿಸಬೇಕಾಗುತ್ತದೆ. ಜಾತಿ ಧರ್ಮಕ್ಕಿಂತ ದೇಶದ ಹಿತ ಮುಖ್ಯ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಕನಿಷ್ಠ ವಿದ್ಯಾರ್ಹತೆ, ಅನುಭವ, ಅಕ್ರಮ ಮಾಡಿದರೆ ಅನರ್ಹಗೊಳಿಸುವ ಕಾನೂನು, ಗರಿಷ್ಠ ವಯೋಮಿತಿ, ಕ್ರಿಮಿನಲ್‌ಗಳು ಅರ್ಹರಲ್ಲ, ಜೈಲಿನಿಂದ ಸ್ಪರ್ಧಿಸುವಂತಿಲ್ಲ, ಎರಡು ಕ್ಷೇತ್ರಗಳಲ್ಲಿ ಒಮ್ಮೆಲೆ ಸ್ಪರ್ಧಿಸುವಂತಿಲ್ಲ, ರಾಜೀನಾಮೆ ನೀಡಿ ಮತ್ತೆ ಸ್ಪರ್ಧಿಸಿದರೆ ಚುನಾವಣಾ ವೆಚ್ಚವನ್ನು ಭರಿಸಬೇಕು, ಮೂರಕ್ಕಿಂತ ಹೆಚ್ಚು ಬಾರಿ ಸ್ಪರ್ಧಿಸಬಾರದು, ತೀವ್ರತರವಾದ ಅನಾರೋಗ್ಯವಿದ್ದಲ್ಲಿ ಕಡ್ಡಾಯ ನಿವೃತ್ತಿ, ಪಿಂಚಣಿ ಯೋಜನೆ ರದ್ದತಿ ಹೀಗೆ ಹಲವು ಹೊಸ ನೀತಿಗಳನ್ನು ಸೇರಿಸಿ ಪರಿಷ್ಕರಿಸಬೇಕು.**

ದುಡ್ಡಿನಲ್ಲಿ ಹೋಗಿ ಬರುವುದು ಎಷ್ಟು ಸರಿ? ಇವುಗಳನ್ನು ಪ್ರಶ್ನಿಸುವವರು ಯಾರು? ಜನರು ಸಂಘಟಿತರಾಗಿ ಪ್ರಶ್ನಿಸದೇ ಹೋದಲ್ಲಿ ಜನರು ಬೆವರು ಸುರಿಸಿ ದುಡಿದು ಕಟ್ಟಿದ ತೆರಿಗೆ ಹಣವನ್ನು ನೀರಿನಂತೆ ಖರ್ಚು ಮಾಡುವ ರಾಜಕಾರಣಿಗಳಿಗೆ ಬುದ್ಧಿ ಬರುವುದೇ ಇಲ್ಲ.

ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಆರೋಪಿಗೆ ತನ್ನ ಕ್ಷೇತ್ರವನ್ನು ಪ್ರವೇಶಿಸಲು ಕೋರ್ಟ್ ನಿರಾಕರಣೆ ಮಾಡಿದೆ. ಆತ ಚುನಾವಣೆಯಲ್ಲಿ ಗೆದ್ದು ನಾಳೆ ಮಂತ್ರಿಯಾದರೂ ಆಶ್ಚರ್ಯವಿಲ್ಲ!. ಮತ್ತೊಬ್ಬ ಅಭ್ಯರ್ಥಿ ಕ್ರಿಮಿನಲ್ ಹಿನ್ನೆಲೆ ಹೊಂದಿದ್ದು, ಅನೇಕ ಕೇಸುಗಳ ಪಟ್ಟಿಯನ್ನೇ ಸ್ವಯಂ ಘೋಷಿಸಿದ್ದಾನೆ. ಅವನು ನಾಳೆ ಆಯ್ಕೆಯಾಗಿ ಪವಿತ್ರ ಸ್ಥಳ ಎಂದೇ ಕರೆಯಲ್ಪಡುವ ವಿಧಾನಸೌಧಕ್ಕೆ ಪ್ರವೇಶಿಸಿ ದರ್ಬಾರು ಮಾಡುವುದರಲ್ಲಿ ಆಶ್ಚರ್ಯವಿಲ್ಲ. ಏನಾಗಿದೆ ಈ ಕಾನೂನು ವ್ಯವಸ್ಥೆಗೆ?. ಇಂದು ವಿವಾದಕ್ಕೆ ಈಡಾಗಿರುವ ಜನನಾಯಕರಿಗೆ, ಆರೋಪಿಗಳಿಗೆ, ಜೈಲುವಾಸಿಗಳಿಗೆ, ಕ್ರಿಮಿನಲ್ ಹಿನ್ನೆಲೆ ಹೊಂದಿರುವವರಿಗೆ, ರೌಡಿಶೀಟರ್‌ಗಳಿಗೆ ಪ್ರಮುಖ ಪಕ್ಷಗಳು ಟಿಕೆಟ್ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶಕೊಟ್ಟಿವೆ. ಇವರು ಆಯ್ಕೆಗೊಂಡು ನಾಳೆ ಸಮಾಜಕ್ಕೆ ನೀಡುವ ಸಂದೇಶವಾದರೂ ಏನು? ಕೊಡುಗೆಯಾದರೂ ಏನು? ಕೆಲವು ಕ್ಷೇತ್ರಗಳಲ್ಲಂತೂ ಸ್ಪರ್ಧಿಗಳಲ್ಲಿ ಅನೇಕರು ಅಯೋಗ್ಯರೇ ಆಗಿದ್ದಾರೆ. ಸೂಕ್ತ ಅಭ್ಯರ್ಥಿಯನ್ನು ಆರಿಸಲು ಮತದಾರರಿಗೆ ಅವಕಾಶವೇ ಇಲ್ಲ.

ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗುವ ಅನೇಕ ಮಹಿಳಾ ಅಭ್ಯರ್ಥಿಗಳು ಮೀಸಲಾತಿ ಕಾರಣದಿಂದ ಅಧ್ಯಕ್ಷರಾಗುವ ಭಾಗ್ಯ ಪಡೆಯುವುದು ಸಹ ಉಂಟು. ಆದರೆ ಅನೇಕ ಅಧ್ಯಕ್ಷರು ಅಧ್ಯಕ್ಷರಾದ ಕಾರಣ ಅವರ ಪತಿ ಅಥವಾ ಮಕ್ಕಳು ಅಧಿಕಾರ ಚಲಾಯಿಸುವುದನ್ನು ಕಾಣಬಹುದು. ಓದುಬರಹ ಬರದ ಅನೇಕ ಸದಸ್ಯರು ಜಾತಿಬಲ, ತೋಳ್ಬಲ, ಹಣಬಲದಿಂದ ಆಯ್ಕೆಯಾಗಿ ದೂರದೃಷ್ಟಿ ಇಲ್ಲದೆ ಜನರಿಗೆ ತಲುಪಬೇಕಾದ ಸೇವೆಗಳಲ್ಲಿ, ಸಾರ್ವಜನಿಕ ಕೆಲಸಗಳಲ್ಲಿ ಗೋಲ್‌ಮಾಲ್ ಮಾಡುವುದುಂಟು. ಇಂತಹ ಸದಸ್ಯರು ಆಯ್ಕೆಯಾದ ಸಂದರ್ಭಗಳಲ್ಲಿ ಅಧಿಕಾರಿ ವರ್ಗದವರಿಗೆ ಹಬ್ಬದೂಟದಂತೆ. ಅನೇಕರು ಸದಸ್ಯರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಕಂಡಕಂಡಲ್ಲಿ ಸಹಿ ಪಡೆದು ಸರ್ಕಾರದ ಅನುದಾನಗಳನ್ನು ತಿಂದುತೇಗುವುದು ಸುಳ್ಳಲ್ಲ. ಕನಿಷ್ಠ ವಿದ್ಯಾರ್ಹತೆಯ ಮಾನ ದಂಡದ ಮೇಲೆ ಆಯ್ಕೆಯಾದರೆ ಪ್ರಶ್ನಿಸುವ ಮನೋಭಾವ ಬೆಳೆಯುತ್ತದೆ. ಅಧಿಕಾರಿಗಳು ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಬಿಡದೇ ಇರಬಹುದು. ಈ ಕುರಿತು ಸಂಬಂಧಪಟ್ಟವರು ಗಮನಹರಿಸಬೇಕಿದೆ. ಇಲ್ಲವಾದಲ್ಲಿ ದೇಶ ಪ್ರಗತಿ ಅಲ್ಲ ಅಧೋಗತಿ ತಲುಪುವುದರಲ್ಲಿ ಅನುಮಾನವೇ ಇಲ್ಲ.

ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ದೆಹಲಿಯ ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಸಾಮಾನ್ಯ ಕುಟುಂಬದಿಂದ ಬಂದವರು. ಅನೇಕ ಜನ ಪರ ಕಾರ್ಯಗಳಿಂದ ಸಾಮಾನ್ಯ ಜನರ ಪಾಲಿಗೆ ಹೀರೋ ಆಗಿ ಗೋಚರಿಸಿದವರು. ಭ್ರಷ್ಟಾಚಾರ ನಿರ್ಮೂಲನೆ ಸಂಕೇತವಾಗಿ ಪೊರಕೆ ಚಿಹ್ನೆಯನ್ನು ತಮ್ಮ ಪಕ್ಷದ ಗುರುತಾಗಿ ಇಟ್ಟುಕೊಂಡು ಉತ್ತರ ಭಾರತದ ಅನೇಕ ರಾಜ್ಯಗಳಲ್ಲಿ ತಮ್ಮ ಪ್ರಭಾವವನ್ನು ವಿಸ್ತರಿಸಿಕೊಂಡವರು. ಅಣ್ಣಾ ಹಜಾರೆಯಂತಹ ಮೇರು ವ್ಯಕ್ತಿತ್ವದ ನಾಯಕರ ಗರಡಿಯಲ್ಲಿ ಪಳಗಿದವರು. ಇಂದು ಅವರೂ ಸಹ ತಮ್ಮ ಬಂಗಲೆ ನವೀಕರಣಕ್ಕೆ ನಲವತ್ತು ಕೋಟಿ ರೂಪಾಯಿಗಳಿಗೂ ಹೆಚ್ಚು ಸಾರ್ವಜನಿಕರ ಹಣ ಬಳಸಿದ್ದಾರೆ ಎಂದರೆ ಈ ದೇಶ ಯಾರನ್ನು ನಂಬುವುದು? ಅಧಿಕಾರದ ಆಸೆ, ಐಷಾರಾಮಿ ಬದುಕು ಇಂತಹ 'ಆಮ್ ಆದ್ಮಿ'ಯನ್ನು ಬಿಡಲಿಲ್ಲವಲ್ಲ ಎಂಬುದೇ ವಿಪರ್ಯಾಸ. ಜಾರ್ಜ್ ಆರ್ವೆಲ್ ಅವರು ತಮ್ಮ ಕಾದಂಬರಿಯಾದ 'ಅನಿಮಲ್ ಫಾರ್ಮ್'ನಲ್ಲಿ ಸಮಾಜದಲ್ಲಿನ ಅಸಮಾನತೆಯನ್ನು ವಿಡಂಬನಾತ್ಮಕವಾಗಿ ಹೇಳಿದ್ದಾರೆ. ಪ್ರಾಣಿಗಳನ್ನು ಸಂಕೇತವಾಗಿ ಬಳಸಿರುವ ಈ ಕಾದಂಬರಿ ಯಲ್ಲಿ 'ಎಲ್ಲಾ ಪ್ರಾಣಿಗಳು ಸಮಾನರು, ಆದರೆ ಕೆಲವು ಪ್ರಾಣಿಗಳು ಹೆಚ್ಚು ಸಮಾನರು' ಎಂಬ ಮಾತನ್ನು ಹೇಳುವುದರ ಮೂಲಕ ವ್ಯವಸ್ಥೆಯ ದುಸ್ಥಿತಿಗೆ ಕನ್ನಡಿ ಹಿಡಿದಿದ್ದಾರೆ. ಭಾರತ ದೇಶದ ಇಂದಿನ ಪರಿಸ್ಥಿತಿಗೆ ಈ ಕಾದಂಬರಿಯ ಸನ್ನಿವೇಶಗಳು ಪೂರಕವಾಗಿವೆ. ಸಂವಿಧಾನದಲ್ಲಿ ಸಮಾನತೆ ಕುರಿತು ಇರುವ ಮಾತು ಕೇವಲ ಕಾಗದಕ್ಕೆ ಸೀಮಿತವಾದಂತಿದೆ. ಸಮಾನತೆ ಎಂಬುದು ಮರೀಚಿಕೆಯಾಗಿದೆ!

ಭಾರತದ ಪ್ರತಿಯೊಬ್ಬರ ಪ್ರಜೆಯೂ ಜಾಗೃತಗೊಳ್ಳಬೇಕು. ಚುನಾವಣೆ ನೀತಿಯಲ್ಲಿನ ಪರಿಷ್ಕರಣೆಗೆ ಧ್ವನಿ ಎತ್ತಬೇಕು. ನಮ್ಮನ್ನು ಆಳು ವವರು ನಮಗಿಂತಲೂ ವಿದ್ಯಾವಂತರೂ, ಬುದ್ಧಿವಂತರೂ ಆಗಿರಬೇಕು ಎಂಬ ಆಶಯವಿರಬೇಕು. ಅನರ್ಹರನ್ನು ಆಯ್ಕೆ ಮಾಡಿದರೆ ಅದರ ಫಲವನ್ನು ನಾವೇ ಅನುಭವಿಸಬೇಕಾಗುತ್ತದೆ. ಜಾತಿ ಧರ್ಮಕ್ಕಿಂತ ದೇಶದ ಹಿತ ಮುಖ್ಯ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ಗಳಿಗೆ ಕನಿಷ್ಠ ವಿದ್ಯಾರ್ಹತೆ, ಅನುಭವ, ಅಕ್ರಮ ಮಾಡಿದರೆ ಅನರ್ಹಗೊಳಿಸುವ ಕಾನೂನು, ಗರಿಷ್ಟ ವಯೋಮಿತಿ, ಕ್ರಿಮಿನಲ್‌ಗಳು ಅರ್ಹರಲ್ಲ, ಜೈಲಿನಿಂದ ಸ್ಪರ್ಧಿಸುವಂತಿಲ್ಲ, ಎರಡು ಕ್ಷೇತ್ರಗಳಲ್ಲಿ ಒಮ್ಮೆಲೆ ಸ್ಪರ್ಧಿಸುವಂತಿಲ್ಲ, ರಾಜೀನಾಮೆ ನೀಡಿ ಮತ್ತೆ ಸ್ಪರ್ಧಿಸಿದರೆ ಚುನಾವಣಾ ವೆಚ್ಚವನ್ನು ಭರಿಸಬೇಕು, ಮೂರಕ್ಕಿಂತ ಹೆಚ್ಚು ಬಾರಿ ಸ್ಪರ್ಧಿಸಬಾರದು, ತೀವ್ರತರವಾದ ಅನಾರೋಗ್ಯವಿದ್ದಲ್ಲಿ ಕಡ್ಡಾಯ ನಿವೃತ್ತಿ, ಪಿಂಚಣಿ ಯೋಜನೆ ರದ್ದತಿ ಹೀಗೆ ಹಲವು ಹೊಸ ನೀತಿಗಳನ್ನು ಸೇರಿಸಿ ಪರಿಷ್ಕರಿಸಬೇಕು. ಇಲ್ಲವಾದಲ್ಲಿ ನಾಲಾಯಕ್ ನಾಯಕರ ಕೈಯಲ್ಲಿ ಲಾಯಕ್ ಪ್ರಜೆಗಳು ಬುದ್ಧಿ ಕೇಳಬೇಕಾದ ದೌರ್ಭಾಗ್ಯ ಒದಗಿ ಬರುವುದರಲ್ಲಿ ಅನುಮಾನವಿಲ್ಲ. ಏನಂತೀರಿ?

ಪದ ತಾಂಬೂಲ:
ದೇಶ ಹಾಳಾಗುವುದು ದುರುಳರ ದೌರ್ಜನ್ಯದಿಂದ ಅಲ್ಲ, ಸಜ್ಜನರ ಮೌನದಿಂದ

ಜಾತಿ ಸಮೀಕರಣ ಸೂತ್ರದಡಿ ವಿವಿಧ ಪಕ್ಷಗಳ ಗೆಲುವಿನ ಲೆಕ್ಕಾಚಾರ

ಕರ್ನಾಟಕದ ವಿಧಾನಸಭೆ ಚುನಾವಣೆ 2023: ಪ್ರಬಲ ಸಮುದಾಯಗಳ ಓಲೈಕೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಕಸರತ್ತು







ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆ ಮತದಾನಕ್ಕೆ ಕೇವಲ 24 ಗಂಟೆ ಬಾಕಿ ಇದೆ. ಆದರೆ ಈ ಚುನಾವಣೆಯಲ್ಲಿ ಗೆಲುವು ಸಾಧಿಸಲು ರಾಜಕೀಯ ಪಕ್ಷಗಳು ತಿಂಗಳಾನುಗಟ್ಟಲೆಯಿಂದ ಕಸರತ್ತಿನಲ್ಲಿ ತೊಡಗಿವೆ. ಈ ಕಸರತ್ತುಗಳ ಪೈಕಿ ಎಲ್ಲ ಪಕ್ಷಗಳು ಜಾತಿ ಲೆಕ್ಕಾಚಾರದಲ್ಲಿ ಹೆಚ್ಚು ತಲೆಕೆಡಿಸಿಕೊಂಡಿವೆ. ಏಕೆಂದರೆ ಚುನಾವಣೆಗಳು ನಡೆಯುತ್ತಿರುವುದೇ ಜಾತಿಗಳ ಆಧಾರದ ಮೇಲೆ, ಜಾತಿ ಸಮೀಕರಣದಲ್ಲಿ.

ಈ ಬಾರಿ ರಾಜ್ಯ ಚುನಾವಣೆಯಲ್ಲಿ ಜಾತಿ ರಾಜಕೀಯವೇ ಪ್ರಮುಖವಾಗಿ ವಿಷಯವಾಗಿದೆ. ಅದರಲ್ಲೂ ಪ್ರಮುಖವಾಗಿ ಲಿಂಗಾಯತ, ಒಕ್ಕಲಿಗ, ಪರಿಶಿಷ್ಟ ಸಮುದಾಯಗಳು ಹಾಗೂ ಹಿಂದುಳಿದ ವರ್ಗಗಳ ಜಾತಿ ಸಮೀಕರಣ ಗೆಲುವಿಗೆ ಪ್ರಮುಖ ಕಾರಣವಾಗಲಿದೆ ಎಂಬುದು ರಾಜಕೀಯ ವಿಶ್ಲೇಷಕರ ಅಂಬೋಣ.

ಕರ್ನಾಟಕದಲ್ಲಿ ಒಂದೊಂದು ಪಕ್ಷಗಳು ಒಂದು ಜಾತಿ ಬಲ ಪಡೆದುಕೊಂಡಿವೆ. ಬಿಜೆಪಿಗೆ ಲಿಂಗಾಯತರ ಬೆಂಬಲವಿದ್ದರೆ, ಕುಟುಂಬದ ಪಕ್ಷವೆಂದೇ ಖ್ಯಾತಿ ಗಳಿಸಿರುವ ಜೆಡಿಎಸ್ ಪಕ್ಷಕ್ಕೆ ಒಕ್ಕಲಿಗ ಸಮುದಾಯವೇ ಪ್ರಮುಖ ಶಕ್ತಿ. ಕಾಂಗ್ರೆಸ್ ಪಕ್ಷ, ಅಲ್ಪಸಂಖ್ಯಾತರು ಹಾಗೂ ಎಲ್ಲ ಜಾತಿಗಳ ಓಲೈಕೆಯಲ್ಲಿ ತೊಡಗಿದೆ.

ಈ ಬಾರಿಯ ಚುನಾವಣೆಯಲ್ಲಿ ಜಾತಿ ರಾಜಕೀಯ ತುಸು ಹೆಚ್ಚೇ ಎಂಬಂತೆ ನಡೆದಿದೆ. ಕಳೆದ ಏಪ್ರಿಲ್‌ನಲ್ಲಿ ಕಾಂಗ್ರೆಸ್ ಪಕ್ಷ ರಾಜಕೀಯ ನಾಟಕದಲ್ಲಿ ಒಂದು ಕಥನ ಆರಂಭಿಸಿ ಲಿಂಗಾಯತರಿಗೆ ಬಿಜೆಪಿಯಿಂದ ದ್ರೋಹವಾಗುತ್ತಿದೆ ಎಂದು ಪ್ರಚಾರ ನಡೆಸಿತು. ಬಿಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲಾಗಿದೆ. ಜಗದೀಶ್ ಶೆಟ್ಟರ್, ಲಕ್ಷ್ಮಣ ಸವದಿ ಮೂಲೆಗುಂಪು ಮಾಡಲಾಗಿದೆ ಎಂದೆಲ್ಲಾ ಆರೋಪಗಳ ಪಟ್ಟಿ ಬಿಡುಗಡೆ ಮಾಡಿತು.

ಈ ಆರೋಪಗಳಿಂದ ಮುಕ್ತವಾಗಲು ಬಿಜೆಪಿ ಎಂದಿನಂತೆ ಹೆಚ್ಚು ಲಿಂಗಾಯತರನ್ನು ಕಣಕ್ಕಿಳಿಸಿದೆ. ಮತ್ತೊಂದು ಪ್ರಬಲ ಸಮುದಾಯವಾಗಿರುವ ಒಕ್ಕಲಿಗರಿಗೂ ಹೆಚ್ಚು ಆದ್ಯತೆ ನೀಡಿದೆ. ಒಕ್ಕಲಿಗರನ್ನು ಓಲೈಸಲು ವಿಮಾನ ನಿಲ್ದಾಣ ಬಳಿ ಬೃಹತ್ ಕೆಂಪೇಗೌಡ ಪ್ರತಿಮೆ ಅನಾವರಣ, ಟಿಪ್ಪುವನ್ನು 17ನೇ ಶತಮಾನದಲ್ಲಿ ಕೊಂದಿದ್ದು ಒಕ್ಕಲಿಗರೇ ಎಂಬಂತೆ ಬಿಜೆಪಿ ಬಿಂಬಿಸಿತು. ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳು ಕಣಕ್ಕಿಳಿಸಿರುವವರ ಅಭ್ಯರ್ಥಿಗಳ ಜಾತಿ ಲೆಕ್ಕಾಚಾರ ಹಾಕಿದರೆ ಶೇಕಡ 45ಕ್ಕಿಂತ ಹೆಚ್ಚು ಲಿಂಗಾಯತರ, ಒಕ್ಕಲಿಗರಿಗೆ ಮಣೆ ಹಾಕಿದೆ. ಲಿಂಗಾಯತರಿಗೆ ಬಿಜೆಪಿ ಹೆಚ್ಚು ಟಿಕೆಟ್ ನೀಡಿದ್ದರೆ, ಜೆಡಿಎಸ್ ಎಂದಿನಂತೆ ಬ್ಯಾಟ್ ಬೀಸಿರುವುದು ಒಕ್ಕಲಿಗರ ಪರವಾಗಿ.

2017-18 ಜಾತಿಗಣತಿಯ ವರದಿಗಳು ಅನಧಿಕೃತವಾಗಿ ಹೊರಬಿದ್ದಿರುವುದು ರಾಜ್ಯದಲ್ಲಿ ಲಿಂಗಾಯತರ ಜನಸಂಖ್ಯೆ ಶೇಕಡ 14-18 ರಷ್ಟಿದ್ದರೆ, ಒಕ್ಕಲಿಗರ ಪ್ರಾಬಲ್ಯ ಶೇಕಡ 11-16ರಷ್ಟಿದೆ. 2018ರ ಚುನಾವಣೆಯಂತೆ ಈ ಬಾರಿಯೂ ಬಿಜೆಪಿ ಒಬ್ಬೇ ಒಬ್ಬ ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯದವರನ್ನು ಕಣಕ್ಕಿಳಿಸಿಲ್ಲ. ಕಾಂಗ್ರೆಸ್ ಮತ್ತೆ ಅಹಿಂದ ಮಂತ್ರ ಜಪಿಸಿದೆ. ಇನ್ನು ಜೆಡಿಎಸ್‌ನಲ್ಲಿ ಗೌಡರ ಸಾಮ್ರಾಜ್ಯ.

ಇಡೀ ರಾಜ್ಯವನ್ನು ಅವಲೋಕಿಸಿದರೆ ಉತ್ತರ ಕರ್ನಾಟಕದಲ್ಲಿ ಲಿಂಗಾಯತರ ಪ್ರಾಬಲ್ಯ, ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರ ಶಕ್ತಿ, ಕರಾವಳಿ (ಇಲ್ಲಿ ಹಿಂದುತ್ವ ಹಾಗೂ ನರೇಂದ್ರ ಮೋದಿ ಪರ ಅಲೆಯೂ ಹೆಚ್ಚಾಗಿದೆ) ಮತ್ತು ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ವರ್ಗಗಳ ಶಕ್ತಿ ಹೆಚ್ಚಾಗಿದೆ. ಕಾಂಗ್ರೆಸ್ ಎಲ್ಲ ಜಾತಿಗಳವರಿಗೂ ಟಿಕೆಟ್ ಹಂಚಿಕೆ ಮಾಡಿದೆ.

ಈ ಬಾರಿ ಒಂದು ವಿಶೇಷ ಎಂದರೆ 46 ಕ್ಷೇತ್ರಗಳಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಒಂದೇ ಜಾತಿಯ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಈ ಪೈಕಿ 21 ಕ್ಷೇತ್ರದಲ್ಲಿ ಲಿಂಗಾಯತರ ನಡುವೆ ಫೈಟ್ ಇದ್ದರೆ, 25 ಕ್ಷೇತ್ರದಲ್ಲಿ ಒಕ್ಕಲಿಗರ ನಡುವೆಯೇ ಪೈಪೋಟಿ ನಡೆಯಲಿದೆ.

ಒಳ ಮೀಸಲಾತಿಯ ಒಳೇಟು: ಬೇರೆ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿ ಒಳ ಜಾತಿ, ಪಂಗಡಗಳ ವಿಚಾರವೂ ಮುನ್ನೆಲೆಗೆ ಬಂದಿದೆ. ಪ್ರಮುಖವಾಗಿ ಲಿಂಗಾಯತರ ಸಮುದಾಯದ ಗಾಣಿಗ, ಬಣಜಿಗ, ಪಂಚಮಸಾಲಿ ಲಿಂಗಾಯತರ ಬಗ್ಗೆಯೂ ಸಾಕಷ್ಟು ಚರ್ಚೆಗಳು ನಡೆದಿವೆ. ಇನ್ನು ಪರಿಶಿಷ್ಟ ಸಮುದಾಯದಲ್ಲಿ ಎಸ್‌ಸಿ ಬಲ, ಎಸ್‌ಸಿ ಎಡ ಪಂಗಡಗಳ ಲೆಕ್ಕಾಚಾರ ಬಹುತೇಕ ಎಲ್ಲ ಪಕ್ಷಗಳಿಗೂ ಕಬ್ಬಿಣದ ಕಡಲೆಯಾಗಿತ್ತು. ಒಳ ಮೀಸಲಾತಿಯ ಒಳೇಟು ಯಾರಿಗೆ ಬೀಳಲಿದೆಯೋ ಎಂಬುದು ಮೇ 10ಕ್ಕೆ ಗೊತ್ತಾಗಲಿದೆ. ಇದು ಬಹಿರಂಗವಾಗುವುದು ಮೇ 13ಕ್ಕೆ.

ಮುಸ್ಲಿಮರಿಗೆ ನೀಡಿದ್ದ ಶೇಕಡ 4 ಮೀಸಲಾತಿಯನ್ನು

ಜಾತಿವಾರು ವಿವಿಧ ಪಕ್ಷಗಳ ಅಭ್ಯರ್ಥಿಗಳ ಆಯ್ಕೆ


ಜಾತಿ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಲಿಂಗಾಯತ	68	46	43
ಒಕ್ಕಲಿಗ	42	42	54
ಎಸ್‌ಸಿ	36	37	36
ಎಸ್‌ಟಿ	17	18	14
ಮುಸ್ಲಿಮ್	0	15	22
ಕ್ರೈಸ್ತ/ಜೈನ್	1	4	2
ಬ್ರಾಹ್ಮಣರು	13	7	2
ಕುರುಬ	7	15	11
ಹಿಂದುಳಿದವರ್ಗ	17	17	12
ಇತರೆ	23	22	14

ಬಿಜೆಪಿ ಸರ್ಕಾರ ರದ್ದು ಮಾಡಿ ಅದನ್ನು ಶೇಕಡ 2ರಂತೆ ಲಿಂಗಾಯತರು, ಒಕ್ಕಲಿಗರಿಗೆ ನೀಡಿದ ವಿಷಯ ಭಾರಿ ವಿವಾದಕ್ಕೂ ಕಾರಣವಾಗಿತ್ತು. ಎಸ್‌ಸಿ ಬಲ, ಎಸ್‌ಸಿ ಎಡ ಪಂಗಡಗಳ ಮೀಸಲಾತಿಯೂ ಚರ್ಚೆಗೆ ಗ್ರಾಸವಾಗಿತ್ತು. ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ 36 ಕ್ಷೇತ್ರ, ಪರಿಶಿಷ್ಟ ಪಂಗಡಕ್ಕೆ 15 ಕ್ಷೇತ್ರ ಮೀಸಲಾಗಿದೆ. ಒಳ ಮೀಸಲಾತಿಯನ್ನು ಚುನಾವಣೆ ಸಂದರ್ಭದಲ್ಲಿ ಘೋಷಣೆ ಮಾಡಿದ್ದು ತೀವ್ರ ಚರ್ಚೆಗೆ ಗ್ರಾಸವಾಯಿತು. ದಲಿತರಿಗೆ ಟಿಕೆಟ್ ಹಂಚಿಕೆ ವಿಷಯದಲ್ಲಿ ಬಿಜೆಪಿ ಎಸ್‌ಸಿ ಎಡ ಪಂಗಡದವರಿಗೆ 11 ಹಾಗೂ ಲಂಬಾಣಿ ಪಂಗಡಕ್ಕೆ 10 ಸೀಟು ನೀಡಿದೆ. ಕಾಂಗ್ರೆಸ್ 16 ಮಂದಿ ಎಸ್‌ಸಿ ಬಲ ಪಂಗಡ (ಮಲ್ಲಿಕಾರ್ಜುನ ಖರ್ಗೆ ಇದೇ ಬಣದವರು) ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಲಂಬಾಣಿ ಸಮುದಾಯದ ಐವರಿಗೆ ಟಿಕೆಟ್ ಘೋಷಿಸಿದೆ ಕಾಂಗ್ರೆಸ್.

ಒಟ್ಟಾರೆಯಾಗಿ ಈ ಬಾರಿಯ ಚುನಾವಣೆಯಲ್ಲಿ ಹಣಬಲ, ತೋಳ್ಬಲ, ಅಧಿಕಾರ ಬಲದ ಜೊತೆಗೆ ಜಾತಿ ಬಲ ಕೂಡ ರಾಜಕೀಯ ಪಕ್ಷಗಳಿಗೆ ಬೇಕಾಗಿದೆ. ಜಾತಿ ಲೆಕ್ಕಾಚಾರವನ್ನು ಯಾವ ಪಕ್ಷ ಯಾವ ರೀತಿ ಹಾಕಿದೆ ಎನ್ನುವುದು ಬಹುಮುಖ್ಯ. ಈ ಜಾತಿ ಸಮೀಕರಣವೇ ಗೆಲುವಿಗೆ ಪ್ರಮುಖ ಕಾರಣವೂ ಆಗಬಹುದೇನೋ!

ಮೇ 10ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸಿ ತಾಣಗಳಿಗೆ ಪ್ರವೇಶವಿದೆ

ಮಂಡ್ಯ, ಕೊಡಗು ಜಿಲ್ಲೆಗಳಲ್ಲಿ ಮತದಾನ ಮಾಡದವರಿಗೆ ಪ್ರವಾಸಿ ಕೇಂದ್ರಗಳಿಗೆ ಪ್ರವೇಶವಿಲ್ಲ



ಮೈಸೂರು, ಮೇ 8(ಆರ್‌ಕೆ)- ಮೈಸೂರು ಜಿಲ್ಲೆಯ ಎಲ್ಲಾ ಪ್ರವಾಸಿ ತಾಣಗಳು ಮೇ 10 ಮತದಾನ ದಿನ ಎಂದಿನಂತೆ ಪ್ರವಾಸಿಗರಿಗೆ ಪ್ರವೇಶಾವಕಾಶವಿರುತ್ತದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

ಪ್ರತಿಯೊಬ್ಬ ಪ್ರಜೆಯೂ ಮತದಾನ ಮಾಡಬೇಕು. ಆದರೆ, ಮೈಸೂರು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ ಸೇರಿದಂತೆ ಎಲ್ಲಾ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅವಕಾಶವಿರುತ್ತದೆ. ಪ್ರವಾಸೋದ್ಯಮ ಪ್ರೋತ್ಸಾಹಿಸುವ ದೃಷ್ಟಿಯಿಂದ ಮತದಾನ ದಿನದಂದು ಪ್ರವಾಸಿ ತಾಣಗಳನ್ನು ತೆರೆಯಲಾಗುವುದು ಎಂದು ತಿಳಿಸಿದರು.

ಪ್ರತೀ ಪ್ರವಾಸಿ ಕೇಂದ್ರಗಳಲ್ಲಿ ಇಲಾಖೆಯ ಸಿಬ್ಬಂದಿ ಮತದಾನ ಮಾಡುವಂತೆ ಪ್ರವಾಸಿಗರಿಗೆ ಸೂಚಿಸಲಾಗಿದೆ. ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳಿಗೂ ಅಂದು ಪ್ರವೇಶಾವಕಾಶವಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಆದರೆ ಮಂಡ್ಯ ಮತ್ತು ಕೊಡಗು ಜಿಲ್ಲೆಗಳಲ್ಲಿ ಮತದಾನ ಮಾಡದವರಿಗೆ ಮೇ 10ರಂದು ಪ್ರವಾಸಿ ಕೇಂದ್ರಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಮಂಡ್ಯ ಜಿಲ್ಲಾಧಿಕಾರಿ ಹೆಚ್.ಎನ್. ಗೋಪಾಲಕೃಷ್ಣ ಆದೇಶದಲ್ಲಿ ತಿಳಿಸಿದ್ದಾರೆ. ಅದೇ ರೀತಿ ಕೊಡಗು ಜಿಲ್ಲಾಡಳಿತವೂ ಸಹ ಅದೇ ಮಾದರಿಯ ಆದೇಶ ಹೊರಡಿಸಿದೆ. ಹೊರ ರಾಜ್ಯದವರನ್ನು ಹೊರತುಪಡಿಸಿ ಕರ್ನಾಟಕದ ಪ್ರವಾಸಿಗರಿಗೆ ಮತದಾನ ಮಾಡಿದರೆ ಮಾತ್ರ ಪ್ರವಾಸಿ ಕೇಂದ್ರಗಳಿಗೆ ಪ್ರವೇಶ ಕಲ್ಪಿಸಲು ನಿರ್ಧರಿಸಲಾಗಿದೆ.

ಈ ಚುನಾವಣೆ ಹಣ, ಜನ ಬಲದ ನಡುವಿನ ಸಂಘರ್ಷ

30 ಸಾವಿರ ಮತಗಳ ಅಂತರದಿಂದ ದರ್ಶನ್ ಗೆಲ್ಲಿಸಿ: ವಿಪಕ್ಷ ನಾಯಕ ಸಿದ್ದರಾಮಯ್ಯ ಮನವಿ



ನಂಜನಗೂಡು, ಮೇ 8– ಈ ಚುನಾವಣೆ ಹಣ ಮತ್ತು ಜನಬಲದ ನಡುವಿನ ಸಂಘರ್ಷ. ಜನಬಲದ ಮುಂದೆ ಹಣಬಲ ಏನೂ ಮಾಡಲು ಸಾಧ್ಯವಿಲ್ಲ. ದರ್ಶನ್ ಧ್ರುವನಾರಾಯಣ್ ಮತ್ತು ಧೀರೈನ್ ಧ್ರುವರನ್ನು ತಬ್ಬಲಿಗಳೆಂದು ನಾನು ಹೇಳುವುದಿಲ್ಲ. ನಿಮ್ಮ ಮನೆ ಮಕ್ಕಳೆಂದು ಹೇಳುತ್ತೇನೆ. ದರ್ಶನ್ ಗೆದ್ದರೆ ನಾನೇ ಗೆದ್ದಂತೆ ದರ್ಶನ್‌ಗೆ ನೀಡುವ ಒಂದೊಂದು ಮತವೂ ಕೂಡ ಸಿದ್ದರಾಮಯ್ಯ ಅವರಿಗೆ ನೀಡಿದಂತೆ ಎಂದು ತಿಳಿದು ಅವರನ್ನು 30 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿಕೊಡಬೇಕು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು.

ನಗರದ ವಿದ್ಯಾವರ್ಧಕ ಮೈದಾನದಲ್ಲಿ ಸೋಮವಾರ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ನಂಜನಗೂಡಿನ ಬಿಜೆಪಿ ಶಾಸಕರು ಕಳೆದ 4 ವರ್ಷದಲ್ಲಿ ಲೂಟಿ ಬಿಟ್ಟರೆ ಬೇರೆ ಏನೂ ಮಾಡಿಲ್ಲ. ಈಗಿನ ಶಾಸಕರು ಮತ್ತು ಧ್ರುವನಾರಾಯಣ್ ನಡುವೆ ಹೋಲಿಕೆ ಸಾಧ್ಯವಿಲ್ಲ. ಧ್ರುವನಾರಾಯಣ್ ಅವರ ಕೈ ಬಾಯಿ ಶುದ್ಧವಾಗಿತ್ತು. ಮನೆಯಲ್ಲಿ ತೊಂದರೆಯಿದ್ದರೂ, ತೋರ್ಪಡಿಸಿಕೊಳ್ಳದೆ ಪ್ರಾಮಾಣಿಕವಾಗಿ ಜನಸೇವೆ ಮಾಡಿ ರಾಜಕೀಯವನ್ನೇ ಉಸಿರಾಗಿಸಿಕೊಂಡಿದ್ದರು. ನಾನು ತಿಳಿದಂತೆ ಅಸೆಂಬ್ಲಿಯಲ್ಲಿ ಈಗಿನ ಶಾಸಕರು ಎಂದೂ ಮಾತನಾಡಿಲ್ಲ. ಇಂತಹ ನಿಷ್ಕ್ರೀಯ ಶಾಸಕರ ಅಂತ್ಯ ಕಾಣಿಸಬೇಕಾದರೆ ದರ್ಶನ್ ಧ್ರುವರನ್ನು ಕನಿಷ್ಠ 30 ಸಾವಿರ ಮತಗಳ ಅಂತರದಿಂದ ಗೆಲ್ಲಿಸಬೇಕು. ಅವರು ಇನ್ನೂ ಯುವಕರಿದ್ದಾರೆ. ಅವರನ್ನು ನಾವೆಲ್ಲರೂ ಸೇರಿ ತಯಾರಿ ಮಾಡೋಣ. ನಾನು ಮಾಹಿತಿ ಪಡೆದಿದ್ದೇನೆ. ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೂ, ನಂಜನಗೂಡಿನಲ್ಲಿ ದರ್ಶನ್ ಧ್ರುವರ ಗೆಲುವೂ ಕೂಡ ಅಷ್ಟೇ ಸತ್ಯ ಎಂದರು.

ಇನ್ನೊಬ್ಬ ಧ್ರುವನಾರಾಯಣ್ ಹುಟ್ಟಲು ಸಾಧ್ಯವಿಲ್ಲ: ಧ್ರುವನಾರಾಯಣ ನಂಜನಗೂಡಿನಿಂದ ಸ್ಪರ್ಧಿಸಿದ್ದರೆ ನೂರಕ್ಕೆ ನೂರು ಗೆದ್ದು ಮುಂಬರುವ ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗುತ್ತಿದ್ದರು. ಅವರ ಸ್ಥಾನದಲ್ಲಿ ನಾವೆಲ್ಲಾ ಮುಖಂಡರು ಸೇರಿ ಅವರ ಮಗ ದರ್ಶನ್ ಧ್ರುವನಾರಾಯಣನನ್ನು ಚುನಾವಣೆಗೆ ನಿಲ್ಲಿಸಿದ್ದೇವೆ. ದರ್ಶನ್ ಅವರಿಗೆ ಆಶೀರ್ವಾದ ಮಾಡಿ ಗೆಲ್ಲಿಸಿದರೆ ಧ್ರುವನಾರಾಯಣರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಕ್ಷೇತ್ರದಲ್ಲಿ ನಡೆದ ಉಪ ಚುನಾವಣೆಯಲ್ಲಿ ನಮ್ಮ ಪಕ್ಷದ ಕೇಶವಮೂರ್ತಿ, ಬಿಜೆಪಿಯ ಶ್ರೀನಿವಾಸ ಪ್ರಸಾದ್ ವಿರುದ್ಧ 23 ಸಾವಿರ ಮತಗಳಿಂದ ಗೆಲುವನ್ನು ಪಡೆದಿದ್ದರು. ಆಗ ಕ್ಷೇತ್ರಕ್ಕೆ ವಿಶೇಷ ಅನುದಾನ ನೀಡಿ ಅಭಿವೃದ್ಧಿಪಡಿಸಲಾಗಿತ್ತು. ದರ್ಶನ್‌ರನ್ನು ಗೆಲ್ಲಿಸಿದರೆ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಜವಾಬ್ದಾರಿ ನಮ್ಮದು ಎಂದರು.

> ನಮ್ಮ ನಾಯಕರು ಕಾರ್ಯಕರ್ತರ ಒತ್ತಾಸೆಯಂತೆ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಕ್ಷೇತ್ರದ ಜನತೆ ಭ್ರಷ್ಟಾಚಾರದ ವಿರುದ್ಧ ಬದಲಾವಣೆ ಬಯಸಿದ್ದಾರೆ. ನಿಮ್ಮನ್ನು ನಂಬಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದೇನೆ. ನೀವೇ ನನ್ನ ತಂದೆ ತಾಯಿಗಳು ಎಂದು ಭಾವಿಸಿದ್ದೇನೆ. ಆಸೆ, ಆಮಿಷಗಳಿಗೆ ಬಲಿಯಾಗದೆ, ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಆಶೀರ್ವದಿಸಬೇಕು.
> – ದರ್ಶನ್, ಕಾಂಗ್ರೆಸ್ ಅಭ್ಯರ್ಥಿ.

ನುಡಿದಂತೆ ನಡೆಯುತ್ತೇವೆ: ಬಿಜೆಪಿ ಸರ್ಕಾರ ಕಳೆದ 4 ವರ್ಷದಿಂದ ಏನೂ ಅಭಿವೃದ್ಧಿ ಮಾಡಿಲ್ಲ. ಬೆಲೆ ಏರಿಕೆಯಿಂದ ಜನರು ತತ್ತರಿಸಿದ್ದಾರೆ. ಶೇ.40 ಕಮಿಷನ್ ಸರ್ಕಾರವೆಂದು ಅಪಖ್ಯಾತಿ ಪಡೆದಿದೆ. ಅವರು ಮತ್ತೆ ಗೆದ್ದರೆ 80 ಕಮಿಷನ್ ಪಡೆಯುತ್ತಾರೆ. ಜನರ ಸಂಕಷ್ಟ ಪರಿಹರಿಸಲು ಕಾಂಗ್ರೆಸ್ 5 ಗ್ಯಾರಂಟಿ ನೀಡಿದೆ. ಮೋದಿ ಇದನ್ನು ಜಾರಿಗೊಳಿಸುವುದು ಅಸಾಧ್ಯವೆನ್ನುತ್ತಾರೆ. ನಾನು 13 ಬಾರಿ ಹಣಕಾಸು ಸಚಿವನಾಗಿ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಗೊತ್ತಿದೆ. ಹೇಗೆ ಹೊಂದಿಸಿ ಜಾರಿಗೊಳಿಸಬೇಕೆಂಬುದೂ ಗೊತ್ತಿದೆ. ಈ ಹಿಂದೆ ನಾವು ಕೊಟ್ಟ ಮಾತಿನಂತೆ ನಡೆದಿದ್ದೇವೆ. ಈ ಬಾರಿಯು ಕೂಡ ನುಡಿದಂತೆ ನಡೆಯುತ್ತೇವೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯರಾದ ಲತಾಸಿದ್ದಶೆಟ್ಟಿ, ಕೆ.ಮಾರುತಿ, ದಯಾನಂದಮೂರ್ತಿ, ಕೆಪಿಸಿಸಿ ಸದಸ್ಯ ಅಕ್ಬರ್ ಅಲೀಂ, ಮುಖಂಡರಾದ ಹೆಚ್.ಎಸ್.ಮೂಗಶೆಟ್ಟಿ, ಕರಳಪುರ ನಾಗರಾಜು, ಗೋವಿಂದರಾಜು, ಕುಳ್ಳಯ್ಯ, ಧೀರೈನ್ ಧ್ರುವನಾರಾಯಣ್, ಎಂ.ಮಾದಪ್ಪ, ಎನ್.ಟಿ.ಗಿರೀಶ್, ಅನ್ಸರ್ ಅಹಮದ್, ನಗರಸಭಾ ಸದಸ್ಯರಾದ ಗಾಯಿತ್ರಿ, ಎಸ್.ಪಿ.ಮಹೇಶ್ ಸೇರಿದಂತೆ ಕಾರ್ಯಕರ್ತರು ಇದ್ದರು.



ಯಳಂದೂರು ತಾಲೂಕಿನ ಅಂಬಳೆ ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎ.ಆರ್.ಕೃಷ್ಣಮೂರ್ತಿ ಮತಯಾಚನೆ ಮಾಡಿದರು.

ಎಆರ್‌ಕೆಗೆ ಎಲ್ಲೆಡೆ ಸ್ಪಂದನೆ, ರಾತ್ರಿಯಲ್ಲೂ ಜನಜಾತ್ರೆ

ಯಳಂದೂರು, ಮೇ 8– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್.ಕೃಷ್ಣಮೂರ್ತಿ ಅವರಿಗೆ ಕ್ಷೇತ್ರದ ಎಲ್ಲ ಕಡೆಯೂ ಉತ್ತಮ ಸ್ಪಂದನೆ ದೊರೆಯುತ್ತಿದ್ದು, ರಾತ್ರಿಯಲ್ಲೂ ಸ್ವಯಂ ಪ್ರೇರಿತರಾಗಿ ಜನರು ಭಾಗವಹಿಸುವ ಮೂಲಕ ಉತ್ತಮ ಬೆಂಬಲ ಸೂಚಿಸುತ್ತಿದ್ದಾರೆ.

ಇದಕ್ಕೆ ಸಾಕ್ಷಿ ಎಂಬಂತೆ ಶುಕ್ರವಾರ ರಾತ್ರಿ ತಾಲೂಕಿನ ಕಂದಹಳ್ಳಿ, ಅಂಬಳೆ, ಅಂಬಳೆ–02, ಚಂಗಚಹಳ್ಳಿ, ವೈ.ಕೆ.ಮೋಳೆ ಗ್ರಾಮಗಳಲ್ಲಿ ಜನಜಾತ್ರೆಯೇ ನೆರೆದಿತ್ತು. ಈ ಸಂದರ್ಭದಲ್ಲಿ ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ತಮ್ಮ ಅಪಾರ ಬೆಂಬಲಿಗರೊಂದಿಗೆ ಸಂಚರಿಸಿ ಮತಯಾಚನೆ ಮಾಡಿದ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಕ್ಷೇತ್ರದಲ್ಲಿ ಈ ಬಾರಿ ನನಗೆ ಉತ್ತಮ ಸ್ಪಂದನೆ ಲಭಿಸುತ್ತಿದೆ. ಜನರ ಆಯ್ಕೆ ಈ ಬಾರಿ ಕಾಂಗ್ರೆಸ್ ಪಕ್ಷ ಆಗಿದೆ. ಕ್ಷೇತ್ರದ ಜನರು ಅಭಿವೃದ್ಧಿಗಾಗಿ ಹಾತೊರೆಯುತ್ತಿದ್ದಾರೆ. ಕಳೆದ 5 ವರ್ಷಗಳಿಂದಲೂ ಇಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಎಂದರು.

ಕಳೆದ 6 ಚುನಾವಣೆಗಳಲ್ಲೂ ನಾನು ಸೋತಿದ್ದೇನೆ. ಒಂದು ಮತದ ಸೋಲು ನನ್ನನ್ನು ಬಾಧಿಸುತ್ತಿದೆ. ಈ ಬಾರಿ ಮತದಾರರು ನನ್ನ ಮೇಲೆ ಅನುಕಂಪವನ್ನು ಇಟ್ಟಿದ್ದಾರೆ. ಹಾಗಾಗಿ ಈ ಬಾರಿ ಚುನಾವಣೆಯನ್ನು ಗೆಲ್ಲುವ ವಿಶ್ವಾಸವಿದೆ. ಇದಕ್ಕೆ ಸಾಕ್ಷಿ ಎಂಬಂತೆ ಎಲ್ಲೆಡೆ ಅಭೂತಪೂರ್ವ ಬೆಂಬಲ ವ್ಯಕ್ತವಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಬ್ಲಾಕ್ ಕಾಂಗ್ರೆಸ್ ಎಚ್.ವಿ. ಚಂದ್ರು, ಡಿ.ಎನ್. ನಟರಾಜು, ಅಂಬಳೆ ಶಿವಾನಂದಸ್ವಾಮಿ, ಸಿದ್ಧನಾಯಕ, ಪ್ರತಾಪ್, ಕಂದಹಳ್ಳಿ ನಂಜುಂಡಸ್ವಾಮಿ, ಚೇತನ್, ಗಣಿಗನೂರು ಬಂಗಾರು, ವೈ.ಕೆ.ಮೋಳೆನಾಗರಾಜು, ಸ್ವಾಮಿ ಸೇರಿದಂತೆ ಹಲವರು ಇದ್ದರು.

ಸೋಮಣ್ಣಗೆ ಕಬ್ಬು ಬೆಳೆಗಾರರ ಸಂಘದ ಬೆಂಬಲ



ಚಾಮರಾಜನಗರ, ಮೇ 8– ರೈತರ ಪರ ಚಿಂತನೆವುಳ್ಳ, 20ರ ಅಂಶಗಳ ಪ್ರಣಾಳಿಕೆಯನ್ನು ಒಪ್ಪಿಕೊಂಡು ಸ್ಥಳೀಯ ರೈತರ ಸಮಸ್ಯೆಗಳಿಗೆ ಸ್ಪಂದಿಸಿರುವ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರಿಗೆ ಕಬ್ಬು ಬೆಳೆಗಾರರ ಸಂಘವು ಸಂಪೂರ್ಣ ಬೆಂಬಲ ನೀಡಲಿದೆ ಎಂದು ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಘೋಷಿಸಿದ್ದಾರೆ.

ಸಮೀಪದ ಮೂಡ್ಲುಪುರದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಭೆ ನಡೆಸಿ, ಸರ್ವಾನುಮತದಿಂದ ಬಿಜೆಪಿಯನ್ನು ಬೆಂಬಲಿಸಿ, ಅವರನ್ನು ವರುಣಾ ಹಾಗೂ ಚಾ.ನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಅವರ ಗೆಲುವಿಗೆ ಶ್ರಮಿಸಲಾಗುತ್ತದೆ ಎಂದು ತಿಳಿಸಿದರು.

ಸಭೆಗೆ ಆಗಮಿಸಿದ್ದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ಅವರನ್ನು ಕಬ್ಬು ಬೆಳೆಗಾರರ ಸಂಘದ ವತಿಯಿಂದ ಹೂವಿನ ಹಾರ ಹಾಕಿ ಸ್ವಾಗತ ಕೋರಲಾಯಿತು. ಭಾಗ್ಯರಾಜ್ ಮಾತನಾಡಿ, ಸೋಮಣ್ಣ ಅವರು ಚಾ.ನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವುದು ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿದೆ. ಉಸ್ತುವಾರಿ ಸಚಿವರಾಗಿ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಒತ್ತು ನೀಡಿದ್ದರು. 20 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಯಲ್ಲಿ ಅವರ ಪರಿಶ್ರಮ ಬಹಳ ಇತ್ತು ಎಂದರು.

ಬಿಜೆಪಿ ಅಭ್ಯರ್ಥಿ ಸೋಮಣ್ಣ ಮಾತನಾಡಿ, ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಕೈಗೊಂಡಿರುವ 20 ಅಂಶಗಳ ಪ್ರಣಾಳಿಕೆ ಸಮಂಜಸವಾಗಿದೆ. ನಿಮ್ಮ ಈ ಅಂಶಗಳನ್ನು ಮುಂದಿನ ದಿನಗಳಲ್ಲಿ ನಮ್ಮ ಬಿಜೆಪಿ ಸರ್ಕಾರ ಅಧಿಕಾರ ಬಂದ ತಕ್ಷಣದಿಂದಲೇ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಹೀಗಾಗಿ ನಿಮ್ಮೆಲ್ಲರ ಸಂಪೂರ್ಣ ಬೆಂಬಲ ಅಗತ್ಯವಾಗಿದೆ. ವರುಣ ಹಾಗೂ ಚಾ.ನಗರ ಕ್ಷೇತ್ರಗಳಲ್ಲಿ ತಾವುಗಳು ಮತ ಹಾಕುವ ಜೊತೆಗೆ ಇತರರು ಸಹಮತ ಹಾಕಿಸುವ ಮೂಲಕ ನಿಮ್ಮ ಸೋಮಣ್ಣಗೆ ಆಶೀರ್ವದಿಸಬೇಕೆಂದು ಅವರು ಮನವಿ ಮಾಡಿದರು.

ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಪಟೇಲ್ ಶಿವಮೂರ್ತಿ, ಜಿಲ್ಲಾಧ್ಯಕ್ಷ ಸೋಮಶೇಖರ್, ಕಾರ್ಯದರ್ಶಿ ಕಿರಗಸೂರು ಶಂಕರ್, ತಾಲೂಕು ಅಧ್ಯಕ್ಷ ಮೂಡ್ಲುಪುರ ನಾಗರಾಜು, ಉಪಾಧ್ಯಕ್ಷ ಹೆಗ್ಗೋಠಾರ ಶಿವಸ್ವಾಮಿ, ಗ್ರಾಮ ಘಟಕದ ಅಧ್ಯಕ್ಷ ಉಡಿಗಾಲ ಮಂಜುನಾಥ, ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಪಾಂಡವಪುರದಲ್ಲಿ ಪುಟ್ಟರಾಜು ಬಿರುಸಿನ ಪ್ರಚಾರ

ವಿಪಕ್ಷದವರ ಮಾತಿಗೆ ಮರಳಾಗದೇ ಜೆಡಿಎಸ್ ಮತ ನೀಡಲು ಮನವಿ

ಪಾಂಡವಪುರ, ಮೇ 8– ಮೇಲುಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಶಾಸಕ ಸಿ.ಎಸ್.ಪುಟ್ಟರಾಜು ಪಟ್ಟಣದ ಹಲವು ವಾರ್ಡ್‌ಗಳಲ್ಲಿ ರೋಡ್ ಶೋ ನಡೆಸುವ ಮೂಲಕ ಬಿರುಸಿನ ಪ್ರಚಾರ ನಡೆಸಿದರು.

ಬೆಳಗ್ಗೆ ಹಾರೋಹಳ್ಳಿ ಗ್ರಾಮದಲ್ಲಿ ಪ್ರಚಾರ ಆರಂಭಿಸಿದ ಸಿ.ಎಸ್.ಪುಟ್ಟರಾಜು ಬಳಿಕ ಪಟ್ಟಣದ ಮಹಾಕಾಳೇಶ್ವರಿ, ಆದಿಶಕ್ತಿ, ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ದರ್ಗಕ್ಕೂ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪಟ್ಟಣದ ಮಹಾಂಕಾಳೇಶ್ವರಿ ಬಡಾವಣೆ, ಕೃಷ್ಣನಗರ, ಬಸವನಗುಡಿ ಬೀದಿ, ಸುಬ್ರಹ್ಮಣ್ಯ ಬಡಾವಣೆ, ಬೀರಶೆಟ್ಟಹಳ್ಳಿ, ಹಿರೋಡೆ ಬೀದಿ, ವಿ.ಸಿ.ಕಾಲೋನಿ, ಭೋವಿ ಕಾಲೋನಿ, ತ್ಯಾಗರಾಜ ಕಾಲೋನಿ, ಪಾರ್ಕ್ ಸೇರಿದಂತೆ ವಿವಿಧೆಡೆ ಪ್ರಚಾರ ನಡೆಸಿ ಜೆಡಿಎಸ್‌ಗೆ ಮತ ನೀಡುವಂತೆ ಮನವಿ ಮಾಡಿದರು. ಸಿ.ಎಸ್.ಪುಟ್ಟರಾಜು ಪ್ರಚಾರಕ್ಕೆ ಹೋದಲ್ಲೆಲ್ಲಾ ಕಾರ್ಯಕರ್ತರು, ಮುಖಂಡರು ಭವ್ಯ ಸ್ವಾಗತ ಕೋರಿದರು. ಹೆಣ್ಣುಮಕ್ಕಳು ಆರತಿ ಬೆಳಗಿ ನೆಚ್ಚಿನ ನಾಯಕನನ್ನು ಬರಮಾಡಿಕೊಂಡರು. ಇದೇ ವೇಳೆ ಸಿ.ಎಸ್.ಪುಟ್ಟರಾಜು ಹಿರಿಯರ ಕಾಲಿಗೆ ಬಿದ್ದು ಆಶೀರ್ವಾದ ಪಡೆದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಕೊಟ್ಟಿರುವ ಕೊಡುಗೆಯೇ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ. ಕ್ಷೇತ್ರದ ಮತದಾರರು ಯಾವುದೇ ಮರಳು ಮಾತಿಗೆ ಒಳಗಾಗದೆ ಅಭಿವೃದ್ಧಿಗಾಗಿ ಮತ್ತೊಮ್ಮೆ ಜೆಡಿಎಸ್‌ಗೆ ಮತ ನೀಡಲಿದ್ದಾರೆ ಎನ್ನುವ ನಂಬಿಕೆ ನನ್ನಲ್ಲಿ ಅಚಲವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ರಾಜ್ಯಕ್ಕೆ ಹೆಚ್.ಡಿ.ಕುಮಾರಸ್ವಾಮಿ ಅವರ ಕೊಡುಗೆ ಅಪಾರ. ಮುಖ್ಯಮಂತ್ರಿಯಾಗಿ ರೈತರ ಸಾಲಮನ್ನಾ ಮಾಡಿದ ದೇಶದ ಏಕೈಕ ಸಿಎಂ ಎಚ್.ಡಿ.ಕುಮಾರಸ್ವಾಮಿ. ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ಕಾಂಗ್ರೆಸ್‌ನವರು ಕೊಟ್ಟ ಕಿರುಕುಳದ ನಡುವೆಯೂ ಸಹ ರೈತರ 25 ಸಾವಿರ ರೂ. ಸಾಲ ಮನ್ನಾ ಮಾಡಿದರು. ಇದೀಗ ಮತ್ತೆ ರಾಜ್ಯದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಹೆಚ್.ಡಿ.ಕುಮಾರ ಸ್ವಾಮಿ ಸಿಎಂ ಆದ ಬಳಿಕ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸದಸ್ಯರ ಸಾಲಮನ್ನಾ ಮಾಡುವುದರ ಜತೆಗೆ ಪಂಚರತ್ನ ಯೋಜನೆಗಳು ಅನುಷ್ಠಾನಗೊಳ್ಳಲಿವೆ ಎಂದರು.

ಶಾಸಕನಾಗಿ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿದ್ದೇನೆ. ರೈತರ ವಿದ್ಯುತ್ ಸಮಸ್ಯೆ ನೀಗಿಸಲು ಹೋಬಳಿಗೆ ಮೂರು ವಿದ್ಯುತ್ ಸಬ್‌ಸ್ಟೇಷನ್ ಮಂಜೂರು ಮಾಡಿಸಿದ್ದೇನೆ. ಕ್ಷೇತ್ರದ ಶೈಕ್ಷಣಿಕ ಪ್ರಗತಿಗೆ ಅಪಾರ ಕೊಡುಗೆ ನೀಡಿದ್ದೇನೆ. ಸಚಿವನಾಗಿದ್ದ ವೇಳೆ 6 ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿ ನೀರಾವರಿ ಸೌಲಭ್ಯ ನೀಡಿದ್ದೇನೆ. ಪಟ್ಟಣಕ್ಕೆ ಕುಡಿಯುವ ನೀರು, ಉತ್ತಮ ಕ್ರೀಡಾಂಗಣ, ಮುಖ್ಯರಸ್ತೆ, ಬಡಾವಣೆ ರಸ್ತೆಗಳು ಹೀಗೆ ಅಪಾರ ಕೊಡುಗೆ ನೀಡಿದ್ದೇನೆ. ಅದರಲ್ಲೂ ಕೋವಿಡ್ ಸಂದರ್ಭದಲ್ಲಿ ನಿಮ್ಮೆಲ್ಲರ ಕಷ್ಟಕ್ಕೆ ಸ್ಪಂದಿಸಿದ್ದೇನೆ. ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಮತ್ತಷ್ಟು ಆಲೋಚನೆಗಳನ್ನು ಹೊಂದಿದ್ದೇನೆ. ದಯಮಾಡಿ ಈ ಚುನಾವಣೆಯಲ್ಲಿ ಅಧಿಕ ಮತಕೊಟ್ಟು ಗೆಲ್ಲಿಸಿ ವಿಧಾನಸಭೆಗೆ ಕಳುಹಿಸಿಕೊಡಬೇಕೆಂದು ಮನವಿ ಮಾಡಿದರು.

ಈ ವೇಳೆ ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು ಸೇರಿದಂತೆ ಎಲ್ಲಾ ಪುರಸಭೆ ಸದಸ್ಯರು, ಮುಖಂಡರು ಹಾಜರಿದ್ದರು.

ಗುಂಡ್ಲುಪೇಟೆಗೆ ಸಮರ್ಪಕ ನೀರು ಪೂರೈಕೆಗಾಗಿ ಎಕ್ಸ್‌ಪ್ರೆಸ್ ಲೈನ್ ನಿರ್ಮಾಣ



ಗುಂಡ್ಲುಪೇಟೆ, ಮೇ 8– ಪಟ್ಟಣದ ಜನತೆಗೆ ಕುಡಿಯುವ ನೀರಿನ ಬವಣೆ ನೀಗಿಸಲು ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಎಕ್ಸ್‌ಪ್ರೆಸ್ ಲೈನ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ಪಟ್ಟಣದ ವಿವಿಧ ವಾರ್ಡುಗಳಲ್ಲಿ ಮತಯಾಚನೆ ಮಾಡಿ ಅವರು ಮಾತನಾಡಿದರು. ತಾವು ಶಾಸಕರಾಗಿ ಆಯ್ಕೆಯಾದ ನಂತರ ಕೋಟ್ಯಂತರ ರೂಪಾಯಿ ಅನುದಾನದಲ್ಲಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಕ್ರಮಕೈಗೊಳ್ಳಲಾಗಿದೆ. ಸರಿ ಸುಮಾರು 800 ಕೋಟಿ ಅನುದಾನದಲ್ಲಿ ಕ್ಷೇತ್ರದ ರಸ್ತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಸಾರ್ವಜನಿಕರ ಆರೋಗ್ಯಕ್ಕಾಗಿ ಸಾರ್ವಜನಿಕ ಆಸ್ಪತ್ರೆಗೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು. ಪಟ್ಟಣದ ಜನತೆಗೆ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಎಕ್ಸ್‌ಪ್ರೆಸ್ ಲೈನ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡಲಾಗಿದ್ದು ಸುಂದರವನ್ನಾಗಿಸಲು ಅಗತ್ಯ ಅನುದಾನ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಸದಸ್ಯರಾದ ನಾಗೇಶ್, ಶಶಿಧರ್(ದೀಪು), ಕಿರಣ್‌ಗೌಡ, ಮಂಗಳಮ್ಮ, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಮಲ್ಲೇಶ್ ಸೇರಿದಂತೆ ಹಲವರು ಇದ್ದರು.

ಮಡಿಕೇರಿಯ ಮತದಾರರು ಬದಲಾವಣೆ ಬಯಸಿದ್ದಾರೆ

ಕಾಂಗ್ರೆಸ್ ಅಭ್ಯರ್ಥಿ ಡಾ. ಮಂಥರ್‌ಗೌಡ ಗೆಲುವು ಖಚಿತ



ಮಡಿಕೇರಿ, ಮೇ 8– ಮಡಿಕೇರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಮಂಥರ್ ಗೌಡ ಅವರು ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮ್ಮದ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಂಥರ್ ಗೌಡ ಪರ ನಗರದ ಪ್ರಮುಖ ಬಡಾವಣೆಗಳಲ್ಲಿ ಕಾಂಗ್ರೆಸ್ ವತಿಯಿಂದ ನಡೆದ ಮತಯಾಚನೆ ಸಂದರ್ಭ ಮಾತನಾಡಿದ ಅವರು ಕ್ಷೇತ್ರದ ಮತದಾರರು ಬದಲಾವಣೆಯನ್ನು ಬಯಸಿದ್ದಾರೆ ಎಂದರು.

ಅಭಿವೃದ್ಧಿಯ ಚಿಂತನೆಯೊಂದಿಗೆ ಕಣಕ್ಕಿಳಿದಿರುವ ಉತ್ಸಾಹಿ ಯುವ ರಾಜಕಾರಣಿ ಮಂಥರ್ ಅವರ ಪರ ಯುವ ಸಮೂಹ ಒಲವು ತೋರಿದೆ. ಈ ಹಿಂದೆ ಕಂಡರಿಯದಷ್ಟು ಜನಬೆಂಬಲ ಕಾಂಗ್ರೆಸ್ ಅಭ್ಯರ್ಥಿಗೆ ದೊರೆಯುತ್ತಿದೆ. ಆದ್ದರಿಂದ ಮಂಥರ್ ಗೆಲುವು ಖಚಿತವೆಂದರು. ನಗರ ಕಾಂಗ್ರೆಸ್ ಉಸ್ತುವಾರಿಯ ಪ್ರಮುಖರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಯೋಜನೆಗಳ ಕುರಿತು ಮತದಾರರಿಗೆ ವಿವರಿಸಿ ಅಭ್ಯರ್ಥಿಯನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ನಗರ ಉಸ್ತುವಾರಿ ಹಾಗೂ ಮಡಿಕೇರಿ ನಗರ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕೆ.ಯು.ಅಬ್ದುಲ್ ರಜಾಕ್, ಉಪಾಧ್ಯಕ್ಷ ಮಹಮ್ಮದ್ ಯಾಕುಬ್, ಡಿಸಿಸಿ ಸದಸ್ಯ ಜಫ್ರುಲ್ಲಾ ಸೇರಿದಂತೆ ಅನೇಕರು ಮತಯಾಚನೆ ಸಂದರ್ಭ ಹಾಜರಿದ್ದರು.

ಅನ್ನದಾನಿ ಗೆಲ್ಲಿಸಿ ಹೆಚ್ಡಿಕೆ ಕೈ ಬಲಪಡಿಸಿ: ದೇವೇಗೌಡ



ಮಳವಳ್ಳಿ, ಮೇ 8– ನಾಡಿನ ರೈತರ ಉಳಿವಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೈ ಬಲಪಡಿಸಲು ಡಾ.ಕೆ. ಅನ್ನದಾನಿ ಅವರನ್ನು ಮತ್ತೊಮ್ಮೆ ಆಯ್ಕೆ ಮಾಡಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಮನವಿ ಮಾಡಿದರು.

ಪಟ್ಟಣದ ಅನಂತರಾಂ ವೃತ್ತದ ಬಳಿ ಸೋಮವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಸಂಕಷ್ಟದಲ್ಲಿದ್ದ ಸಂದರ್ಭ 25 ಸಾವಿರ ಕೋಟಿ ಸಾಲ ಮನ್ನಾ ಮಾಡುವ ಮೂಲಕ ನಾಡಿನ ಅನ್ನದಾತರ ಉಳಿವಿಗಾಗಿ ಕುಮಾರಸ್ವಾಮಿ ಹೋರಾಟ ನಡೆಸುತ್ತಿದ್ದಾರೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಬೇಕು ಎಂದರು.

ಒಬ್ಬ ರೈತನ ಮಗನಾಗಿ, ದೇಶದ ಪ್ರಧಾನಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗುವ ಅವಕಾಶ ನೀಡಿರುವ ನಿಮ್ಮ ಋಣ ನಮ್ಮ ಮೇಲಿದೆ. ಕಳೆದ ಬಾರಿ ಮಂಡ್ಯದಲ್ಲಿ ಏಳಕ್ಕೆ ಏಳು ಸ್ಥಾನ ಗೆಲ್ಲಿಸಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಸಹಕಾರ ನೀಡಿದ್ದೀರಿ. 90ನೇ ವಯಸ್ಸಿನಲ್ಲಿ ನಿಮ್ಮ ಮುಂದೆ ಬಂದು ನಿಂತಿದ್ದೇನೆ. ಮತ ಹಾಕಿ ನಮ್ಮ ಪಕ್ಷಕ್ಕೆ ಆಶೀರ್ವಾದ ಮಾಡಿ. ರೈತನ ಮಗನಾದ ನನ್ನ ಹೆಸರಿನಲ್ಲಿ ಪಂಜಾಬ್‌ನಲ್ಲಿ ಭತ್ತದ ತಳಿ ಹುಟ್ಟು ಹಾಕಿದ್ದಾರೆ. ಕೈ ಮುಗಿದು ಕೇಳುತ್ತೇನೆ ಕ್ಷೇತ್ರದ ಎಲ್ಲ ಸಮುದಾಯಗಳ ಜನರು ನಮ್ಮ ಅಭ್ಯರ್ಥಿ ಡಾ.ಕೆಅನ್ನದಾನಿಗೆ ಮತ ಕೊಡಿ. ಆತನನ್ನು ಮಂತ್ರಿ ಮಾಡದಿದ್ದರೂ ಬೇರೆ ಕಡೆ ತಿರುಗಿ ನೋಡದೇ ನಿಷ್ಠೆಯಿಂದ ಇದ್ದಾರೆ ಎಂದು ಹೇಳಿದರು.

ಡಾ.ಕೆ.ಅನ್ನದಾನಿ ಅವರಿಗೆ ಮುಸ್ಲಿಂ ಸೇರಿದಂತೆ ಎಲ್ಲಾ ಸಮುದಾಯದವರು ಮತ ನೀಡಿ ಗೆಲ್ಲಿಸಲು ಮುಂದಾಗಬೇಕು. ಹೆಚ್.ಡಿ.ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆಗಾಗಿ ಪಕ್ಷ ಬಲಪಡಿಸಿ. ಮೇ 13ಕ್ಕೆ ಅನ್ನದಾನಿಗೆ ಆಶೀರ್ವಾದ ಮಾಡಿ ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಅಧಿಕಾರಕ್ಕೆ ತನ್ನಿ ಎಂದು ಮನವಿ ಮಾಡಿದರು. ಜೆಡಿಎಸ್ ಅಭ್ಯರ್ಥಿ, ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಇಂತಹ ಇಳಿ ವಯಸ್ಸಿನಲ್ಲೂ ಹೆಚ್.ಡಿ.ದೇವೇಗೌಡರು ಕನ್ನಡಿಗರಿಗಾಗಿ ಹಾಗೂ ರೈತರಿಗಾಗಿ ಬಂದಿದ್ದಾರೆ. ನಮ್ಮ ನಾಯಕರು ನನ್ನ ಪರ ಮತಯಾಚನೆ ಮಾಡಿರುವುದು ನನ್ನ ಪುಣ್ಯ. ಅವರ ಆಶೀರ್ವಾದ ನನ್ನ ಮೇಲೆ ಇದೆ. ಹೆಚ್.ಡಿ.ದೇವೇ ಗೌಡ ಹಾಗೂ ಹೆಚ್.ಡಿ.ಕುಮಾರಣ್ಣ ಅವರ ಆಶೀರ್ವಾದದಿಂದ ಅಭ್ಯರ್ಥಿ ಆಗಿರುವೆ. ನನಗೆ ಮತ ನೀಡಿ ಗೆಲ್ಲಿಸಿ ಎಂದು ಮನವಿ ಮಾಡಿದರು.

ಜೆಡಿಎಸ್ ಜಿಲ್ಲಾ ಅಧ್ಯಕ್ಷ ಡಿ.ರಮೇಶ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಬಿ.ರವಿ ಕಂಸಾಗರ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ವಿ.ಎಂ.ವಿಶ್ವನಾಥ್, ಹಿಂದುಳಿದ ವರ್ಗಗಳ ರಾಜ್ಯ ಅಧ್ಯಕ್ಷ ಜಯರಾಮು, ಸಿಪಿಐ(ಎಂ) ಮುಖಂಡ ಟಿ.ಎಲ್.ಕೃಷ್ಣೇಗೌಡ, ಪುರಸಭೆ ಉಪಾಧ್ಯಕ್ಷ ಎಂ.ಟಿ.ಪ್ರಶಾಂತ್ ಇದ್ದರು.

ನನ್ನ ಅಧಿಕಾರಾವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ

ವೀರಶೈವ ಮುಖಂಡರ ಸಭೆಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್

ತಿ.ನರಸೀಪುರ, ಮೇ 8– ನನ್ನ ಅಧಿಕಾರಾವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಮಾದಾಪುರ ಗ್ರಾಮದ ಮರಡೇಶ್ವರ ಸ್ವಾಮಿ ದೇವಸ್ಥಾನ ಮುಂಭಾಗ ಶಾಸಕ ಎಂ.ಅಶ್ವಿನ್ ಕುಮಾರ್ ಬೆಂಬಲಿಸಲು ಆಯೋಜಿಸಿದ್ದ ವೀರಶೈವ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣೆಗೆ ಕೇವಲ ದಿನವಷ್ಟೇ ಬಾಕಿ ಇದೆ. ನಾನು ಶಾಸಕನಾಗಿ 5 ವರ್ಷ ಪೂರೈಸಿದ್ದೇನೆ. ಈ ಪೈಕಿ 2 ವರ್ಷ ಕೋವಿಡ್, ಪ್ರವಾಹ. ಸಿಕ್ಕ ಅವಧಿಯಲ್ಲಿ ಪ್ರಾಮಾಣಿಕವಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಎಲ್ಲಾ ಸಮಾಜದವರಿಗೂ ತಾರತಮ್ಯ ಮಾಡದೇ ಕೆಲಸ ಮಾಡಿಕೊಟ್ಟಿದ್ದೇನೆ. ಅದರಲ್ಲೂ ವೀರಶೈವ ಸಮಾಜಕ್ಕೆ ಹೆಚ್ಚಿನ ಒತ್ತು ನೀಡಿದ್ದೇನೆ. ನಾಳೆ ಚುನಾವಣೆ ಏನಾಗಲಿದೆಯೋ ಅದು ಬೇರೆ ವಿಷಯ. ಆದರೆ ನನ್ನನ್ನು ನಂಬಿ ನನ್ನ ಮೇಲೆ ವಿಶ್ವಾಸವಿರಿಸಿ ಹೆಚ್ಚಿನ ಸಂಖ್ಯೆಯಲ್ಲಿ ವೀರಶೈವ ಸಮಾಜದವರು ಸಭೆ ಮಾಡುತ್ತಿರುವುದನ್ನು ನೋಡಿದರೆ ನಾನು ಇವತ್ತೇ ಗೆದ್ದಿದ್ದೇನೆ ಎಂಬ ಫೀಲಿಂಗ್ ಬರುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಶಾಸಕನಾಗಿದ್ದ ವೇಳೆ ಲಿಂಗಾಯತ ಸಮುದಾಯ ಭವನಕ್ಕೆ 1 ಕೋಟಿ ರೂ. ಕೊಡುವುದಾಗಿ ಮುಖಂಡರೊಬ್ಬರ ಬಳಿ ಹೇಳಿದ್ದೆ. ಆದರೆ ಜಾಗದ ಸಮಸ್ಯೆಯಿಂದ ಅದು ಸಾಧ್ಯವಾಗಲಿಲ್ಲ. ಕಾಲಾವಕಾಶ ಸಹ ಕಡಿಮೆ ಇದ್ದ ಕಾರಣ ಅದು ನನೆಗುದಿಗೆ ಬಿತ್ತು ಎಂದ ಅಶ್ವಿನ್, ಬೇರೆಯವರ ರೀತಿ ಆಶ್ವಾಸನೆಗಳನ್ನು ಕೊಟ್ಟು ನಿರಾಸೆ ಮಾಡುವ ಸ್ವಭಾವ ನನಗಿಲ್ಲ. ಆದರೆ ಆಗುತ್ತೆ ಇಲ್ಲದಿದ್ದಲ್ಲಿ ಇಲ್ಲ ಎನ್ನುತ್ತೇನೆ. ಸುಳ್ಳು ಭರವಸೆ ನೀಡಿ ಮನೆಗೆ ಅಲೆಸುವ ಕೆಲಸ ನಾನೆಂದೂ ಮಾಡಿಲ್ಲ, ಮಾಡುವುದೂ ಇಲ್ಲ ಎಂದರು.



ಮತ್ತೊಂದು ಅವಕಾಶ ನೀಡಿ: ಕ್ಷೇತ್ರದ ಜನತೆ ಈ ಬಾರಿಯ ಚುನಾವಣೆಯಲ್ಲಿ ಮತ್ತೊಮ್ಮೆ ಗೆಲ್ಲಿಸಿ, ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿದ ಅಶ್ವಿನ್ ಕುಮಾರ್ ನಿಮ್ಮ ಮನೆ ಮಗನಾಗಿ ನಿಮ್ಮಲ್ಲಿ ಒಬ್ಬನಾಗಿ ಇಷ್ಟು ದಿನ ಕೆಲಸ ಮಾಡಿದ್ದೇನೆ, ಮುಂದೆಯೂ ಮಾಡುತ್ತೇನೆ ಎಂದು ಮನವಿ ಮಾಡಿದರು.

ಜೆಡಿಎಸ್ ಮುಖಂಡ ಉಕ್ಕಲಗೆರೆ ಅಡುಗೆ ಕುಮಾರ್ ಮಾತನಾಡಿ, 2018ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶಂಕರ್ ಚುನಾವಣೆಗೆ 3 ದಿನ ಬಾಕಿ ಇರುವಾಗ ನಾಪತ್ತೆಯಾದಾಗ ಇಡೀ ಸಮಾಜದವರು ಹಣಕ್ಕೆ ಆಸೆ ಪಡದೆ ಅಶ್ವಿನ್ ಕುಮಾರ್ ಬೆಂಬಲಕ್ಕೆ ನಿಂತು ಪ್ರಭಾವಿ ಸಚಿವರನ್ನು ಸೋಲಿಸಿತು. ಈ ಹಿಂದೆ ಸಚಿವರಾಗಿದ್ದವರು ವೀರಶೈವ ಸಮಾಜದ ಯಾವುದೇ ಕೆಲಸಗಳಿಗೆ ಅನುದಾನ ಕೊಡಲಿಲ್ಲ. ನಾನು ಕಾಂಗ್ರೆಸ್ ಪಕ್ಷದಲ್ಲಿದ್ದವನೇ, ಸಚಿವರ ನಡೆಯಿಂದ ಜೆಡಿಎಸ್ ಪಕ್ಷಕ್ಕೆ ಬಂದೆ. ಈಗ ಕ್ಷೇತ್ರದ ವೀರಶೈವ ಸಮಾಜದ ಬೀದಿಗಳು ಕಾಂಕ್ರೀಟ್ ಕಂಡಿವೆ ಎಂದರೆ ಅದಕ್ಕೆ ನಮ್ಮ ಶಾಸಕ ಅಶ್ವಿನ್ ಕುಮಾರ್ ನೀಡಿದ ಅನುದಾನ ಕಾರಣ. ವೀರಶೈವ ಸಮಾಜದವರು ರಾಜ್ಯದಲ್ಲಿ ಬಹುಸಂಖ್ಯಾತ ರಾದರೂ ಕ್ಷೇತ್ರದಲ್ಲಿ ಅಲ್ಪ ಸಂಖ್ಯಾತರಂತೆ ಇದ್ದೇವೆ. ಹಾಗಾಗಿ ನಮ್ಮ ಸಮಾಜಕ್ಕೆ ಬೆಂಬಲ ನೀಡುವ ನಮ್ಮ ಕಷ್ಟ ಸುಖದಲ್ಲಿ ಭಾಗಿಯಾಗುವ ಅಶ್ವಿನ್ ಕುಮಾರ್ ಅವರಿಗೆ ನಮ್ಮ ಮತ ನೀಡಿ ಅವರನ್ನು ಗೆಲ್ಲಿಸೋಣ ಎಂದರು.

ಜಾತಿ ರಾಜಕಾರಣ ನನಗೆ ಬೇಕಿಲ್ಲ

> ನನಗೆ ಜಾತಿ ಮುಖ್ಯವಲ್ಲ. ಜಾತಿ ರಾಜಕಾರಣ ನನಗೆ ಗೊತ್ತಿಲ್ಲ. ಅದು ನನಗೆ ಬೇಕಾಗೂ ಇಲ್ಲ.ಎಲ್ಲ ಸಮಾಜದವರನ್ನು ಸರಿ ಸಮಾನವಾಗಿ ಕಾಣುವ ಸ್ವಭಾವ ನನ್ನದು. ಅಶಕ್ತರು, ಹಿಂದುಳಿದವರು, ಬಡವರು ಯಾರೇ ಇರಲಿ ಅವರ ಕೆಲಸ ಮಾಡಿಕೊಡುವುದಷ್ಟೇ ನನಗೆ ಮುಖ್ಯ. ಈ ರೀತಿಯ ಕೆಲಸ ಮಾಡಿಕೊಂಡು ಬಂದಿರುವುದಕ್ಕೆ ನೀವು ಇಷ್ಟು ಪ್ರಮಾಣದಲ್ಲಿ ಬೆಂಬಲ ನೀಡಲು ಬಂದಿದ್ದೀರಾ, ನಿಮ್ಮ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ.
> – ಅಶ್ವಿನ್ ಕುಮಾರ್, ಶಾಸಕ.

ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವಸ್ವಾಮಿ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಪಪಂ ಮಾಜಿ ಅಧ್ಯಕ್ಷ ವೀರೇಶ್, ತಾಪಂ ಮಾಜಿ ಸದಸ್ಯ ಚಂದ್ರಶೇಖರ್, ಗ್ರಾಪಂ ಸದಸ್ಯ ಅಶೋಕ್, ಕುರುಬೂರು ಡೈರಿ ಅಧ್ಯಕ್ಷ ಕೆ.ಸಿ.ವೀರೇಶ್, ಸ್ವಾಮಿ, ರಾಜಶೇಖರ್, ಕು.ಶಿ.ಬೃಂಗೀಶ್, ಹೊನ್ನನಾಯಕ, ಬೆನಕನಹಳ್ಳಿ ಬಸಪ್ಪ ಇತರರಿದ್ದರು.

ಕರ್ನಾಟಕ ವಿಭಜಿಸುವ ಆರೋಪ: ಪ್ರಧಾನಿಯಾಗಿ ಸುಳ್ಳು ಹೇಳುವುದು ಸರಿಯಲ್ಲ

ರೋಡ್ ಶೋ, ಸಾರ್ವಜನಿಕ ಸಭೆ ಫ್ಯಾಷನ್ ಶೋ: ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆಕ್ಷೇಪ

ಮೈಸೂರು,ಮೇ 8(ಪಿಎಂ)– ಭಾರತದಿಂದ ಕರ್ನಾಟಕವನ್ನು ವಿಭಜಿಸುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಪ್ರಧಾನಿ ಮೋದಿ ನಂಜನಗೂಡು ಬಿಜೆಪಿ ಸಮಾವೇಶದಲ್ಲಿ ಹೇಳಿದ್ದು ಶುದ್ಧ ಸುಳ್ಳು. ಪ್ರಧಾನಿಯಾಗಿ ಇಷ್ಟರಮಟ್ಟಿಗೆ ಸುಳ್ಳು ಹೇಳುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕವನ್ನು ವಿಭಜಿಸುವ ಹೇಳಿಕೆಯನ್ನು ಕಾಂಗ್ರೆಸ್‌ನಿಂದ ಯಾರೂ ನೀಡಿಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಾರಾದರೂ ನೀಡಿದ್ದಾರೆಯೇ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರನ್ನು ಸೋಲಿಸಲೇಬೇಕೆಂದು ಪಣತೊಟ್ಟಿದ್ದಾರೆ. ಆದರೆ ಈ ಇಬ್ಬರು ನಾಯಕರು ಭಾರೀ ಮತಗಳ ಅಂತರದಿಂದ ಗೆದ್ದು ಕಾಂಗ್ರೆಸ್ ಅನ್ನು ಆಡಳಿತಕ್ಕೆ ತರಲಿದ್ದಾರೆ. ಪ್ರಧಾನಿ ಮೋದಿಯವರ ರೋಡ್ ಶೋ ಸಾರ್ವಜನಿಕರಲ್ಲಿ ಒಂದು ರೀತಿಯಲ್ಲಿ ಸಿನಿಕ ಭಾವನೆ ತಂದಿದೆ. ರಾಜ್ಯದಲ್ಲಿ ನೆರೆ ಹಾವಳಿಯಾದಾಗ, ಕೋವಿಡ್ ಸಂದರ್ಭದಲ್ಲಿ ಆಕ್ಸಿಜನ್ ಕೊರತೆ ಉಂಟಾದಾಗ ಮೋದಿಯವರು ಬರಲಿಲ್ಲ. ದುರಂತಗಳು ಸಂಭವಿಸಿದಾಗ ರಾಜ್ಯದತ್ತ ಮೋದಿಯವರು ತಲೆ ಹಾಕದೇ ಈಗ ಓಟಿಗಾಗಿ ಕರ್ನಾಟಕಕ್ಕೆ ಬಂದರು. ಕರ್ನಾಟಕದಿಂದ ಶೇ.60ರಷ್ಟು ತೆರಿಗೆ ಕೇಂದ್ರಕ್ಕೆ ಹೋಗುತ್ತಿದೆ. ಇದರಲ್ಲಿ ಜಿಎಸ್‌ಟಿ ಪಾಲು ಎಷ್ಟು ಕೊಟ್ಟಿದ್ದೀರಿ ಎಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಪ್ರಶ್ನಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದಲ್ಲಿ ಚುನಾವಣಾ ಪ್ರಚಾರ ಮುಗಿಸಿ ದೆಹಲಿಗೆ ವಾಪಸ್ಸಾಗಿದ್ದಾರೆ. ಓಟಿಗಾಗಿ ರ‍್ಯಾಲಿಗಳನ್ನು ಇಲ್ಲಿ ಮಾಡಿದ್ದಾರೆ. 40 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದೇನೆ. ಈ ಹಿಂದಿನ ಯಾವ ಪ್ರಧಾನಿಗಳು ಚುನಾವಣಾ ಪ್ರಚಾರಕ್ಕಾಗಿ ಇಷ್ಟೊಂದು ಸಮಯ ಕಳೆದಿರಲಿಲ್ಲ. ಆದರೆ ನರೇಂದ್ರ ಮೋದಿಯವರು ರೆಕಾರ್ಡ್ ಬ್ರೇಕ್ ಮಾಡಿದ್ದಾರೆ. ಇವರ ರೋಡ್ ಶೋ ಒಂದು ರೀತಿಯಲ್ಲಿ ಫ್ಯಾಷನ್ ಶೋನಂತೆ ಇತ್ತು. ಬಗೆ ಬಗೆಯ ವಸ್ತ್ರ ಧರಿಸಿ ಪ್ರದರ್ಶನ ಮಾಡಿದರು. ಇವರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದವರನ್ನು ದುಡ್ಡು ಕೊಟ್ಟು ಕರೆತರಲಾಗಿದೆ ಎಂದು ವಿಶ್ವನಾಥ್ ಹೇಳಿದರು.

ರಾಜ್ಯಕ್ಕೆ ಏನು ಕೊಟ್ಟಿದ್ದೇವೆ, ಏನು ಕೊಡುತ್ತೇವೆ ಎಂದು ಮೋದಿಯವರು ಹೇಳಲಿಲ್ಲ. ಕೇವಲ ಓಟಿಗಾಗಿ ಬಂದು ಹೋಗಿದ್ದಾರೆ. ರಾಜ್ಯದ ಅಕ್ಷರ, ಆರೋಗ್ಯ, ಆರ್ಥಿಕತೆ, ಕೃಷಿ ಸೇರಿದಂತೆ ಯಾವುದೇ ಕ್ಷೇತ್ರಗಳ ಬಗ್ಗೆ ಏನೂ ಹೇಳದೇ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ಮಾಡಿ ಹೋಗಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಮಾತನಾಡಿದರು.

ಮೀಸಲಾತಿ ತಪ್ಪಿಸುವ ಹುನ್ನಾರ

"ನಿಮ್ಮ ಎಲ್ಲಾ ಭ್ರಷ್ಟಾಚಾರ ಮುಚ್ಚಿಕೊಳ್ಳಲು ರ‍್ಯಾಲಿ ಮಾಡಿದರೆ ಅದು ಪ್ರಯೋಜನ ಆಗಲ್ಲ. ಕರ್ನಾಟಕದ ಜನತೆ ಈಗಾಗಲೇ ನಿರ್ಧಾರ ಮಾಡಿದ್ದಾರೆ. ರಾಜ್ಯದಲ್ಲಿ 2 ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಲಾಗಿದೆ. ಮತ್ತೆ 13 ಸಾವಿರ ಕನ್ನಡ ಶಾಲೆಗಳನ್ನು ಮುಚ್ಚಲು ಪ್ರಸ್ತಾವನೆ ಇದೆ. ಒಂದು ಲಕ್ಷದ 40 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿವೆ. ಒಂದು ಲಕ್ಷದ 20 ಸಾವಿರ ಸರ್ಕಾರದ ಆಡಳಿತಾತ್ಮಕ ಹುದ್ದೆಗಳು ಖಾಲಿ ಬಿದ್ದಿವೆ. ಅವುಗಳನ್ನು ಭರ್ತಿ ಮಾಡುತ್ತಿಲ್ಲ. ಈ ಹುದ್ದೆಗಳನ್ನು ಭರ್ತಿ ಮಾಡಿದರೆ ಮೀಸಲಾತಿ ಕೊಡಬೇಕಾಗುತ್ತದೆ ಎಂಬುದು ಇದರ ಹಿಂದಿರುವ ಹುನ್ನಾರ.

–ಎ.ಹೆಚ್.ವಿಶ್ವನಾಥ್, ಎಂಎಲ್‌ಸಿ

ಪ್ರಧಾನಿ ನರೇಂದ್ರ ಮೋದಿಯವರ ಮೇಲೆ ಇದ್ದಂತಹ ಅಭಿಮಾನದ ಕಟ್ಟೆ ಒಡೆದು ಹೋಯಿತು ಎಂದರು.

ರಾಜ್ಯ ಬಿಜೆಪಿ ನಾಯಕರಿಗೆ ಜನರ ಮುಂದೆ ನಿಂತು ಮತ ಯಾಚಿಸುವ ಮುಖವಿಲ್ಲ. ಏಕೆಂದರೆ ಭ್ರಷ್ಟಾಚಾರದ ಸರ್ಕಾರ. ಇವರಿಂದ ಕರ್ನಾಟಕವು ಭ್ರಷ್ಟಾಚಾರದ ತಾಣವಾಯಿತು. ಪ್ರಧಾನಿಯವರ ಪ್ರಚಾರ ಕಾರ್ಯಕ್ರಮಗಳಿಗೆ ರಾಜ್ಯದ ಬೊಕ್ಕಸದಲ್ಲಿದ್ದ ತೆರಿಗೆ ಹಣ ಹೋಯಿತು. ಕೇವಲ ಬೆಂಗಳೂರು ಕಾರ್ಯಕ್ರಮಕ್ಕೆ 60 ಕೋಟಿ ರೂ. ವೆಚ್ಚವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ಕರ್ನಾಟಕದ ಬ್ಯಾಂಕ್‌ಗಳನ್ನು ಉತ್ತರದ ಒಡೆತನಕ್ಕೆ ಕೊಡಲಾಗಿದೆ. ರಾಜ್ಯದ ಬಿಜೆಪಿಯವರು ಕರ್ನಾಟಕವನ್ನು ಉತ್ತರದವರಿಗೆ ಮಾರಲು ನಿಂತಿದ್ದಾರೆ. ಇದನ್ನು ತಡೆಯಲು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದೆ. ರಾಜ್ಯದ ಜನತೆ ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಮನವಿ ಮಾಡಿದರು.

ಮಾಜಿ ಸಿಎಂ ಸಿದ್ದರಾಮಯ್ಯನವರು ತಮ್ಮ ಪುತ್ರ ಸೇರಿ ಮೂರು ಬಾರಿ ವರುಣ ಕ್ಷೇತ್ರ ಪ್ರತಿನಿಧಿಸಿದರೂ ಅಭಿವೃದ್ಧಿ ಶೂನ್ಯ ಎಂದು ವಿ.ಸೋಮಣ್ಣ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ಇದನ್ನು ಹೇಳಬೇಕಿರುವುದು ಕ್ಷೇತ್ರದ ಜನತೆಯೇ ಹೊರತು ಸೋಮಣ್ಣ ಅಲ್ಲ. ಗೋವಿಂದರಾಜನಗರ ಕ್ಷೇತ್ರದ ಅಭಿವೃದ್ಧಿ ಮಾಡಿದ್ದರೆ ಅವರನ್ನು ಇಲ್ಲಿಗೇಕೆ ಕಳುಹಿಸುತ್ತಿದ್ದರು ಎಂದು ಪ್ರಶ್ನಿಸಿದರು.

ವರುಣದಲ್ಲಿ ಕಣಕ್ಕಿಳಿಸಿ ಸೋಮಣ್ಣರನ್ನು ಹರಕೆ ಕುರಿ ಮಾಡಲಾಗುತ್ತಿದೆ ಎನ್ನಲಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ಹೌದು, ಮಾರಿ ಹಬ್ಬಕ್ಕೆ ಕಡಿಯೋಕೆ ಕರೆತಂದಿದ್ದಾರೆ ಎಂದು ಲೇವಡಿ ಮಾಡಿದರು. ಕಾಂಗ್ರೆಸ್ ಮುಖಂಡರಾದ ನವೀನ್‌ಕುಮಾರ್, ಅಣ್ಣಯ್ಯ, ಮಾಜಿ ಮೇಯರ್ ನಾರಾಯಣ್, ಮುಖಂಡ ರೇವಣ್ಣ ಗೋಷ್ಠಿಯಲ್ಲಿದ್ದರು.


ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್‌ಗೌಡ ಅವರು ಭಾನುವಾರ ಕೆಲ್ಲಹಳ್ಳಿ ಗ್ರಾಮದ ಮಾರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಸನ್ಮಾನ ಸ್ವೀಕರಿಸಿದ ನಂತರ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ವೇಳೆ ಗ್ರಾಮದ ಬಿಜೆಪಿ ಕಾರ್ಯಕರ್ತರಾದ ರವಿಚಂದ್ರ ಭಗವದ್ಗೀತೆಯನ್ನು ಉಡುಗೊರೆಯಾಗಿ ನೀಡಿದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಬೂತ್ ಅಧ್ಯಕ್ಷ ರಘೋತ್ತಮ, ಮಾರ್ಬಳ್ಳಿ ಕುಮಾರ್, ಮಹದೇವೇಗೌಡ, ಭೈರೇಗೌಡ, ಪ್ರಸನ್ನ, ನವೀನ್, ಜಯಪುರದ ರುದ್ರ, ಅನೀಲ್, ದಾರಿಪುರ ಡಿ.ಎಂ.ಗಿರೀಶ್, ಹರೀಶ್, ಸಿದ್ದರಾಜು, ಅಭಿಷೇಕ್, ಮಹೇಂದ್ರ, ಕುಮಾರ್ ಇತರರಿದ್ದರು.


ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ ಅವರ ಪರ ವಾರ್ಡ್ ನಂ.23ರಲ್ಲಿ ಬಿಜೆಪಿ ಫಲಾನುಭವಿಗಳ ಪ್ರಕೋಷ್ಠದ ನಗರ ಸಂಚಾಲಕ ಆರ್.ಪರಮೇಶ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಮತಯಾಚನೆ ಮಾಡಲಾಯಿತು. ವಾರ್ಡ್ ಅಧ್ಯಕ್ಷ ಸುರೇಂದ್ರ ಕಾರ್ಯದರ್ಶಿ ಶ್ರೀನಿವಾಸ್, ಮುಖಂಡರಾದ ಪ್ರಮೋದ್, ವಿಜಯ್, ನಾಗರಾಜ್, ವಿನೋದ್, ಪ್ರವೀಣ್, ಸಚಿನ್ ಇತರರಿದ್ದಾರೆ.


ಮೈಸೂರಿನ ಮಂಚೇಗೌಡನಕೊಪ್ಪಲು ವ್ಯಾಪ್ತಿಯಲ್ಲಿ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ.ರಮೇಶ್ ಅವರು ಸೋಮವಾರ ಮನೆ ಮನೆಗೆ ತೆರಳಿ ಮತಯಾಚಿಸಿದರು. ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ, ಮುಖಂಡರಾದ ರಾಮಚಂದ್ರು, ಕಾಳಲಿಂಗೇಗೌಡ, ಪೂಜಾರಿ ನಾಗಪ್ಪ ಇನ್ನಿತರರು ಇದ್ದರು.


ಚಾಮರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡರು ವಿಜಯನಗರ ಮೊದಲ ಹಂತದಲ್ಲಿ ಮತ ಯಾಚಿಸಿದರು.


ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಅವರ ಪರವಾಗಿ ವಿದ್ಯಾರಣ್ಯಪುರಂ ಸುತ್ತಮುತ್ತ ಪ್ರದೇಶದಲ್ಲಿ ನಗರಪಾಲಿಕೆ ಸದಸ್ಯ ಜಗದೀಶ್, ಮೈಸೂರು ನಗರ ಹಿಂದುಳಿದ ವರ್ಗಗಳ ಮೋರ್ಚಾ ಉಪಾಧ್ಯಕ್ಷ ಹಾಗೂ ವಕೀಲ ಶಿವರಾಜ್, ಬೂತ್ ಅಧ್ಯಕ್ಷ ಶಿವಲಿಂಗ ಸ್ವಾಮಿ ಇನ್ನಿತರರು ಸೋಮವಾರ ಮನೆ ಮನೆಗೆ ತೆರಳಿ ಮತಯಾಚಿಸಿದರು.


ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಪರವಾಗಿ ಮಾಜಿ ಕಾರ್ಪೊರೇಟರ್ ಧ್ರುವರಾಜ್, ಸಿಟಿ ಕೋ–ಆಪರೇಟಿವ್ ಉಪಾಧ್ಯಕ್ಷ ಕುರುಬಾರಹಳ್ಳಿ ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ಅರವಿಂದ್, ಇದಾಯತ್ ಇನ್ನಿತರರು ಸೋಮವಾರ ಪಾದಯಾತ್ರೆ ಮೂಲಕ ಮನೆ ಮನೆಗೆ ತೆರಳಿ ಮತಯಾಚನೆ ಮಾಡಿದರು.

ಕೃಷ್ಣರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆ; ಎಂಕೆಎಸ್



ಮೈಸೂರು,ಮೇ 8(ಪಿಎಂ)– ಕೃಷ್ಣರಾಜ ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಇದ್ದು, ಕಾಂಗ್ರೆಸ್‌ಗೆ ಈ ಬಾರಿ ಗೆಲುವು ಖಚಿತ ಎಂದು ಪಕ್ಷದ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕ ಮತಗಳ ಅಂತರದಲ್ಲಿ ನನ್ನ ಗೆಲುವು ಸಾಧ್ಯವಾಗಲಿದೆ. ಇದರಲ್ಲಿ ಅನುಮಾನವಿಲ್ಲ. ಕಾಂಗ್ರೆಸ್ ಗ್ಯಾರಂಟಿ ಭರವಸೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂದು ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ನುಡಿದಂತೆ ನಡೆದಿದ್ದು, ಮುಂದೆಯೂ ಅದೇ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ ಎಂದರು.

ಕ್ಷೇತ್ರದಲ್ಲಿ ಸರ್ವರಿಗೂ ಸೂರು ಕಲ್ಪಿಸುವಲ್ಲಿ ಹಾಗೂ ಸಿವೇಜ್ ಫಾರಂ ತ್ಯಾಜ್ಯ ಸಮಸ್ಯೆ ನಿವಾರಿಸುವ ನಿಟ್ಟಿನಲ್ಲಿ ಕೆಲಸ ಮಾಡಲು ಸಿದ್ಧನಿದ್ದೇನೆ. ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿದ್ದೇನೆ. ಹಾಗಾಗಿ ಮತದಾರರು ಈ ಬಾರಿ ತಮಗೆ ಬೆಂಬಲ ನೀಡಬೇಕೆಂದು ಕೋರಿದರು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಪರವಾಗಿ ಈ ನಾಡಿನ ಹೆಸರಾಂತ ಸಾಹಿತಿಗಳು, ಪ್ರಗತಿಪರ ಚಿಂತಕರು ಸ್ವಯಂಪ್ರೇರಣೆಯಿಂದ ಪ್ರಚಾರ ಮಾಡಿದ್ದಾರೆ. ಸಿದ್ದರಾಮಯ್ಯ ಮೂಲಕ ಈ ರಾಜ್ಯಕ್ಕೆ ಒಳಿತಾಗಬೇಕು ಎಂಬುದು ಅವರ ಉದ್ದೇಶ. 2013–18ರ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಉತ್ತಮ ಆಡಳಿತ ನೀಡಿದರು. ಈ ಬಗ್ಗೆ ಪ್ರಸ್ತುತ ಚುನಾವಣೆಯಲ್ಲಿ ಜನ ಹೆಚ್ಚು ಚರ್ಚೆ ಮಾಡುತ್ತಿದ್ದಾರೆ. ಹಾಗಾಗಿ ಕಾಂಗ್ರೆಸ್ ಭಾರೀ ಬಹುಮತದೊಂದಿಗೆ ಆಡಳಿತದ ಚುಕ್ಕಾಣಿ ಹಿಡಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಎಸ್.ಎ.ರಾಮದಾಸ್ ಅವರಿಗೆ ಕೆಆರ್ ಕ್ಷೇತ್ರದ ಬಿಜೆಪಿ ಟಿಕೆಟ್ ತಪ್ಪಿಸಿ ಈಗ ಅವರ ಕನಸು ನನಸು ಮಾಡುತ್ತೇನೆಂದು ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ ಕ್ಷೇತ್ರದಲ್ಲಿ ಮತಯಾಚನೆ ಮಾಡುತ್ತಿದ್ದಾರೆ. ಕೆಆರ್ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸಿ ಎಂದು ಒಬ್ಬರು ಶ್ರೀವತ್ಸರನ್ನು ಅವರ ಪಕ್ಷದ ವರಿಷ್ಠರಲ್ಲಿಗೆ ಕರೆದುಕೊಂಡು ಹೋದರೆ, ಶ್ರೀವತ್ಸ ತಾವೇ ಬಿ–ಫಾರಂ ಬರೆಸಿಕೊಂಡು ಬಂದರು ಎಂದು ವ್ಯಂಗ್ಯವಾಡಿದರು. ಮಾಜಿ ಮೇಯರ್ ನಾರಾಯಣ್, ಕಾಂಗ್ರೆಸ್ ಮುಖಂಡರಾದ ಮಂಜುಳಾ ಮಾನಸ, ಡಾ.ಸುಜಾತ, ಪ್ರತಿಧ್ವನಿ ಪ್ರಸಾದ್ ಗೋಷ್ಠಿಯಲ್ಲಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮೇ 8– ನಗರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ದೊಡ್ಡಕಾನ್ಯದಲ್ಲಿರುವ ಡಾ॥ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಪಿರಿಯಾಪಟ್ಟಣದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶೈಕ್ಷಣಿಕ ವರ್ಷ 2023–24ರ ಸಾಲಿಗೆ 6ನೇ ತರಗತಿ ಪ್ರವೇಶಕ್ಕಾಗಿ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಂದ ಸೇವಾ ಸಿಂಧು ಪೋರ್ಟಲ್ ಮೂಲಕ ಏ.27ರಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಿದ್ದು, ಮೇ 13 ಅರ್ಜಿ ಸಲ್ಲಿಕೆಗೆ ಕಡೇ ದಿನ.

ಸೇವಾ ಸಿಂಧು ಪೋರ್ಟಲ್ ಲಿಂಕ್: https://sevasindhuservies, karnataka.gov.in ಮೂಲಕ ಅರ್ಜಿಗಳನ್ನು ಸಲ್ಲಿಸಲು, ಉಚಿತವಾಗಿ ಸೇವೆ ಬಳಸಿಕೊಳ್ಳಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮತ್ತು ಪಾಲಕರು ಪ್ರತಿ ತಾಲೂಕುಗಳಲ್ಲಿರುವ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಹಾಗೂ ಜಿಲ್ಲಾ ಮಾಹಿತಿ ಕೇಂದ್ರಕ್ಕೆ ಅಥವಾ ಸದರಿ ಶಾಲೆಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ ಜಿಲ್ಲಾ ಮತ್ತು ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು ಅಥವಾ ಶೋಭ ಗಾರ್ಡನ್ ಪಕ್ಕದಲ್ಲಿನ ದಂಡಿನ ಮಾರಮ್ಮನ ದೇವಸ್ಥಾನದ ಎದುರಿಗಿರುವ (ಬೆಂಗಳೂರು–ಮೈಸೂರು ರಸ್ತೆ) ಮೌಲಾನ ಆಜಾದ್ ಭವನ, ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಸಂಪರ್ಕಿಸಿ. ಅಥವಾ ದೂಸಂ: 0821–2422088 https: //dom.karnataka.gov.in/mysuru ಸಂಪರ್ಕಿಸಿ.

ವಿಪ್ರರ ಕಡ್ಡಾಯ ಮತದಾನದ ಜಾಗೃತಿ ಸಭೆ

ಮತದಾನ ಪ್ರಜಾಪ್ರಭುತ್ವದ ಶ್ರೇಷ್ಠ ಹಬ್ಬ



ಮೈಸೂರು, ಮೇ 8– ಧಾರ್ಮಿಕ ಹಬ್ಬಗಳಿಗಿಂತ ಶ್ರೇಷ್ಠವಾದದ್ದು ಪ್ರಜಾಪ್ರಭುತ್ವದ ಹಬ್ಬವಾದ ಮತದಾನದಲ್ಲಿ ಪ್ರಜ್ಞಾವಂತ ನಾಗರಿಕರೆಲ್ಲರೂ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಕಡ್ಡಾಯವಾಗಿ ಮತವನ್ನು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಖ್ಯಾತ ವಾಗ್ಮಿ ಕೆ.ಎಸ್.ಮುಕುಂದ ಅಭಿಪ್ರಾಯಪಟ್ಟರು,

ನಗರದ ಸರಸ್ವತಿಪುರಂನಲ್ಲಿರುವ ಶ್ರೀಕೃಷ್ಣ ಧಾಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಆಯೋಜಿಸಿದ್ದ ವಿಪ್ರರ ಕಡ್ಡಾಯ ಮತದಾನದ ಜಾಗೃತಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಸಮಾಜದಲ್ಲಿ ಸರ್ವರೂ ಸಮಾನತೆಯಿಂದ ಲಿಂಗಭೇದವಿಲ್ಲದೆ ಬಾಳಲು ಸಾಧ್ಯವಾಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಿಂದ. ಇಂತಹ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಲು ನಾವು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಕಡ್ಡಾಯವಾಗಿ ಅರ್ಹ ವ್ಯಕ್ತಿಗಳಿಗೆ ಮತದಾನ ಮಾಡುವ ಮೂಲಕ ನಮ್ಮ ನೈತಿಕ ಜವಾಬ್ದಾರಿಯನ್ನು ಪೂರೈಸಬೇಕು. ಹೀಗೆ ಎಲ್ಲ ಕ್ಷೇತ್ರದಲ್ಲೂ ಶೇಕಡವಾರು ಮತದಾನ ಪ್ರಮಾಣವನ್ನು ಹೆಚ್ಚಿಸಬೇಕು ಎಂದರು.

ಮೈಸೂರು ಗ್ರಾಮಾಂತರ ಬ್ರಾಹ್ಮಣ ಸಂಘದ ಅಧ್ಯಕ್ಷ ಗೋಪಾಲ್ ರಾವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಾಜ್ಯ ನಿರ್ದೇಶಕ ಎಂ.ಆರ್.ಬಾಲಕೃಷ್ಣ, ಜಿಎಸ್‌ಎಸ್ ಸಂಸ್ಥೆಯ ಸಂಸ್ಥಾಪಕ ಶ್ರೀ ಹರಿ ದ್ವಾರಕನಾಥ್, ವಿಪ್ರ ಇಪ್ರೊಫೆಷನಲ್ ಫೋರಂನ ಅಧ್ಯಕ್ಷರಾದ ಶ್ರೀನಿವಾಸ್ ಭಾಷ್ಯಂ, ತುಳು ಶಿವಳ್ಳಿ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ರವಿಶಾಸ್ತ್ರಿ, ಮೋಹನ್ ಭಟ್, ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾಕ್ಟರ್ ಲಕ್ಷ್ಮಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಮುಳ್ಳೂರು ಗುರುಪ್ರಸಾದ್, ವಸಂತ್ ಕುಮಾರ್, ವಿಪ್ರ ಜಾಗೃತಿ ವೇದಿಕೆ ಅಧ್ಯಕ್ಷ ಮುಳ್ಳೂರು ಸುರೇಶ್, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕಡಕೊಳ ಜಗದೀಶ್, ಸುಚೇಂದ್ರ, ಚಕ್ರಪಾಣಿ ಇತರರು ಸಭೆಯಲ್ಲಿ ಭಾಗಿಯಾಗಿದ್ದರು.


ಮೈಸೂರು ಲಕ್ಷ್ಮಿಕಾಂತನಗರ ವ್ಯಾಪ್ತಿಯಲ್ಲಿ ಚಲನಚಿತ್ರ ನಟ ಮುನಿರಾಜ್‌ಗೌಡ, ಸುಜಿತ್‌ಕುಮಾರ್, ದೇವರಾಜ ಮಾರ್ಕೆಟ್ ಅಧ್ಯಕ್ಷ ದಿನೇಶ್, ರಾಜಕೀಯ ರವಿ, ದೀಕ್ಷಿತ್ ಗೌಡ, ವೆಂಕಿ ಮಾಮು, ನಿರಂಜನ್, ಕಾಂತ ಇತರರು ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡರ ಪರ ಮತಯಾಚಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ: ಡಾ.ಯತೀಂದ್ರ ವಿಶ್ವಾಸ

ವರುಣಾ, ಮೇ 8– ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲಿದ್ದು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗುವ ಅವಕಾಶವಿರುವುದರಿಂದ ಹೆಚ್ಚಿನ ಮತಗಳ ಅಂತರದಿಂದ ಅವರ ಆಯ್ಕೆ ಮಾಡಬೇಕೆಂದು ವರುಣಾ ಕ್ಷೇತ್ರದ ಶಾಸಕರಾದ ಡಾ. ಯತೀಂದ್ರ ಸಿದ್ಧರಾಮಯ್ಯ ಮನವಿ ಮಾಡಿದರು.

ವರುಣಾ ಕ್ಷೇತ್ರದ ಇನಾಂ ಉತ್ತನಹಳ್ಳಿ, ಮೇಗಳಾಪುರ, ಕೀಳನಪುರ, ಮಾಧವಗೆರೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯನವರ ಪರವಾಗಿ ರೋಡ್ ಶೋ ನಡೆಸಿ ಮತಯಾಚಿಸಿ ಮಾತನಾಡಿದ ಅವರು, ಸಂವಿಧಾನವನ್ನು ಬದಲಾಯಿಸುತ್ತೇವೆ ಎನ್ನುವ ಭ್ರಷ್ಟ ಬಿಜೆಪಿ ಸರ್ಕಾರವನ್ನು ಪ್ರತಿಯೊಬ್ಬರೂ ತಿರಸ್ಕರಿಸಬೇಕು. ಸಾಮಾಜಿಕ ನ್ಯಾಯಕ್ಕಾಗಿ ಸಮಸಮಾಜದ ನಿರ್ಮಾಣಕ್ಕಾಗಿ ತಳ ಸಮುದಾಯದವರ, ಹಿಂದುಳಿದವರ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸಿದ್ಧರಾಮಯ್ಯನವರನ್ನು ಬೆಂಬಲಿಸಬೇಕು. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಬಡಜನರಿಗೆ ಕಾಂಗ್ರೆಸ್ ಪಕ್ಷ ಗ್ಯಾರಂಟಿ ಭರವಸೆಗಳನ್ನು ನೀಡಿದ್ದು, ಕುಟುಂಬದ ಮಹಿಳೆಗೆ 2 ಸಾವಿರ ರೂ, ತಲಾ 10 ಕೆಜಿ ಅಕ್ಕಿ, 200 ಯುನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3000ರೂ ನೀಡುತ್ತೇವೆ. ಇದರಿಂದ ಬಡವರ ಬದುಕು ಸುಧಾರಿಸುತ್ತದೆ. ಆದ್ದರಿಂದ ಕಾಂಗ್ರೆಸ್ ಬಡವರ ಪಕ್ಷ. ಈ ಚುನಾವಣೆಯು ಸಿದ್ದರಾಮಯ್ಯನವರ ಕೊನೇ ಚುನಾವಣೆ ಆಗಿರುವುದರಿಂದ ತಾವೆಲ್ಲರೂ ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕೆಂದು ಮನವಿ ಮಾಡಿದರು. ಮಾಜಿ ಸಂಸದ ಶಿವಣ್ಣ, ತಾಪಂ ಮಾಜಿ ಸದಸ್ಯ ಮಹದೇವು, ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಸೋಮಣ್ಣ, ಬಿ.ಎಂ.ನಟರಾಜು, ಎಂ.ಟಿ. ರವಿಕುಮಾರ್, ಮಹೇಶ್, ಮಹದೇವ, ಪುಟ್ಟಯ್ಯ, ಲಿಂಗಯ್ಯ, ದುದ್ದಗೆರೆ ಮಹದೇವ, ನಾಡನಹಳ್ಳಿ ರವಿ, ಶಾಂತಮ್ಮ, ನಿರ್ಮಲ, ಪುಟ್ಟಣ್ಣ, ಶಿಂಷಾ ದಿನೇಶ್ ಇದ್ದರು.



'ಬಲರಾಮ' ಅಜರಾಮರ; ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ


● ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಮರ್ಪಣೆ ● ಜೆಸಿಬಿಯಲ್ಲಿ ಗುಂಡಿ ತೋಡಿ ಅಂತ್ಯಸಂಸ್ಕಾರ ● ಧಾರ್ಮಿಕ ಪೂಜಾ ವಿಧಿವಿಧಾನದ ಬಳಿಕ ಮಣ್ಣಲ್ಲಿ ಮಣ್ಣಾದ ದಸರಾ ಆನೆ





ಬಿಕ್ಕಿ ಬಿಕ್ಕಿ ಅತ್ತ ಮಾವುತ ತಿಮ್ಮ, ಕುಟುಂಬ ಸದಸ್ಯರು

ಬಲರಾಮನ ಅಂತ್ಯಕ್ರಿಯೆ ನಡೆಯುತ್ತಿದ್ದ ವೇಳೆ ಸ್ಥಳದಲ್ಲೇ ಇದ್ದ ಬಲರಾಮನನ್ನು ಕಳೆದ 30 ವರ್ಷದಿಂದ ಪಾಲನೆ ಮಾಡುತ್ತಿದ್ದ ಮಾವುತ ತಿಮ್ಮ ಹಾಗೂ ಅವರ ಪತ್ನಿ, ಮಕ್ಕಳು ಬಿಕ್ಕಿಬಿಕ್ಕಿ ಅಳುತ್ತಿದ್ದರು. ಮನೆ ಮಗನನ್ನು ಕಳೆದುಕೊಂಡಂತೆ ರೋದಿಸಿದರು. ತಿಮ್ಮ ಮಾತ್ರವಲ್ಲದೆ ಅವರ ಚಿಕ್ಕ ಮಕ್ಕಳೆಲ್ಲರೂ ಬಲರಾಮನ ಆರೈಕೆಯಲ್ಲಿ ತೊಡಗಿರುತ್ತಿದ್ದರು. ಉತ್ತಮ ಒಡನಾಟದೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಕಾವಾಡಿ ಮಂಜುನಾಥ್ ಅವರು ಕೂಡ ಕಂಬನಿ ಮಿಡಿದರಲ್ಲದೆ, ಅರಣ್ಯ ಇಲಾಖೆಯ ಕೆಲವು ಸಿಬ್ಬಂದಿಗಳ ಕಣ್ಣಾಲಿಗಳು ತೇವಗೊಂಡಿದ್ದವು.



ಮೈಸೂರು,ಮೇ8(ಎಂಟಿವೈ)– ಅನಾರೋಗ್ಯದಿಂದಾಗಿ ಮೃತಪಟ್ಟಿದ್ದ ದಸರಾ ಆನೆ 'ಬಲರಾಮ' ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

13 ಬಾರಿ ಚಿನ್ನದ ಅಂಬಾರಿ ಹೊತ್ತು ನಾಡಿನ ಮನೆಮಾತಾಗಿದ್ದ ಬಲರಾಮನ ಅಂತ್ಯಕ್ರಿಯೆಯನ್ನು ಭೀಮನಕಟ್ಟೆ ಆನೆ ಕ್ಯಾಂಪ್ ಸಮೀಪ ನೆರವೇರಿಸಲಾಯಿತು. ಮೈಸೂರು, ಕೊಡಗು ಜಿಲ್ಲೆಗಳ ಅರಣ್ಯಾಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ದೈವ ಸ್ವರೂಪಿಗೆ ಸಾಂಪ್ರದಾಯಿಕ ಪೂಜೆ: ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ 25 ವರ್ಷ ಪಾಲ್ಗೊಂಡು ಸತತ 13 ಬಾರಿ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಹೊತ್ತು ಸಾಗಿದ್ದ ಬಲರಾಮ ಅತ್ಯಂತ ಮೃದು ಹಾಗೂ ಸೌಮ್ಯ ಸ್ವಭಾವದಿಂದಲೇ ದೈವ ಸ್ವರೂಪಿ ಆನೆ ಎಂದು ನಂಬಲಾಗಿತ್ತು. ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ತನ್ನ ಭುಜಬಲದ ಸಾಮರ್ಥ್ಯವನ್ನು ತೋರ್ಪಡಿಸಿದ್ದ ಬಲರಾಮ ಎಲ್ಲರ ಅಚ್ಚುಮೆಚ್ಚಿನ ಆನೆಯಾಗಿತ್ತು. ಅನಾರೋಗ್ಯ ಹಾಗೂ ವಯೋಸಹಜ ಸಮಸ್ಯೆಯಿಂದ ಬಳಲುತ್ತಿದ್ದ ಬಲರಾಮ ಭಾನುವಾರ ಸಂಜೆ ಅಸುನೀಗಿತ್ತು.

ಇಂದು ಬೆಳಗ್ಗೆ ಬಲರಾಮನ ಪಾರ್ಥಿವ ಶರೀರಕ್ಕೆ ಪೂಜೆ ನೆರವೇರಿಸಲಾಯಿತು. ದಸರಾ ಆನೆಗಳ ಪೂಜೆ ಮಾಡುವ ಕಾಯಕ ನಿಭಾಯಿಸುವ ಅರ್ಚಕ ಎಸ್.ವಿ.ಪ್ರಹ್ಲಾದ ರಾವ್ ಬಲರಾಮನಿಗೆ ಅಂತಿಮ ವಿಧಿವಿಧಾನ ಪೂರೈಸಿದರು. ಅಮೆರಿಕಾದಲ್ಲಿರುವ ಭಾನುಪ್ರಕಾಶ್ ಶರ್ಮಾ ಅವರ ಸಲಹೆ ಪಡೆದು ಪೂಜೆ ನೆರವೇರಿಸಿದರು.

ಬಲರಾಮನ ಮೃತದೇಹವಿದ್ದ ಸ್ಥಳದಲ್ಲಿ ಪುಣ್ಯಾಹ, ಭೂಮಿ ಪೂಜೆ, ಅಷ್ಟದಿಕ್ಪಾಲಕ ಪೂಜೆ, ಪಂಚಗವ್ಯ ಪ್ರೋಕ್ಷಣೆ, ಅಭಿಷೇಕ, ಪಂಚಾಮೃತ ಅಭಿಷೇಕ ನೆರವೇರಿಸಿದರು. ಬಳಿಕ ಬಲರಾಮನಿಗೆ ವಸ್ತ್ರ ಧರಿಸಿ, ಅತಪ್ರಶಿಷ್ಯ ಹೋಮ ಮಾಡಿದರು. ಅಂತ್ಯಸಂಸ್ಕಾರಕ್ಕಾಗಿ ತೋಡಲಾಗಿದ್ದ ಗುಂಡಿಗೆ ಪೂಜೆ ಮಾಡಿ, ದರ್ಬೆ, ಎಳ್ಳು ಹಾಕಿ ಒಂಟಿ ಬಾಳೆಎಲೆ ಹಾಸಲಾಯಿತು. ನಂತರ ಕ್ರೇನ್ ಸಹಾಯದಿಂದ ಬಲರಾಮನ ದೇಹವನ್ನು ಗುಂಡಿಗೆ ಇಳಿಸಿ ದಕ್ಷಿಣ ದಿಕ್ಕಿಗೆ ತಲೆ ಇರುವಂತೆ ಮಲಗಿಸಿ ಅಂತಿಮ ಪೂಜೆ ಸಲ್ಲಿಸಲಾಯಿತು.

ಗಾಳಿಯಲ್ಲಿ ಗುಂಡು: ಬಲರಾಮ ಆನೆಯ ಅತ್ಯುತ್ತಮ ಸೇವೆಯೊಂದಿಗೆ ನಾಡಹಬ್ಬ ಜಂಬೂಸವಾರಿ ಮೆರವಣಿಗೆಯ ಯಶಸ್ಸಿಗೆ 25 ವರ್ಷ ಸೇವೆ ಸಲ್ಲಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಗೌರವವನ್ನು ಸಮರ್ಪಿಸಲಾಯಿತು. ಮೂವರು ಸಿಬ್ಬಂದಿಗಳಿಂದ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಲಾಯಿತು. ಬಳಿಕ ಎಲ್ಲಾ ಸಿಬ್ಬಂದಿಗಳು, ಅಧಿಕಾರಿಗಳು ಮೌನಾಚರಣೆ ಮಾಡಿ ಬಲರಾಮನ ಆತ್ಮಕ್ಕೆ ಶಾಂತಿ ಕೋರಿದರು. ನಂತರ ಎಲ್ಲರೂ ಬಲರಾಮನ ಮೃತ ದೇಹಕ್ಕೆ ಪೂಜೆ ಸಲ್ಲಿಸಿ ನಮಿಸಿದರು.

ದಂತ ಕತ್ತರಿಸಲಾಯಿತು: ಬಲರಾಮನ ಸಾವಿಗೆ ಕಾರಣ ಮೊದಲೇ ತಿಳಿದಿದ್ದ ಹಿನ್ನೆಲೆಯಲ್ಲಿ ಮರಣೋತ್ತರ ಪರೀಕ್ಷೆ ಮಾಡಲಿಲ್ಲ. ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತಿದ್ದ ಬಲರಾಮನ ದೇಹ ಕುಯ್ಯಬಾರದು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅನೇಕರು ಆಗ್ರಹಿಸಿದ್ದರು. ದೇಹ ಭಿನ್ನ ಮಾಡದೆ ಅಂತ್ಯಸಂಸ್ಕಾರ ಮಾಡುವಂತೆ ಮನವಿ ಮಾಡಿದ್ದರು. ಅದಕ್ಕೆ ಪೂರಕವಾಗಿ ಹಿರಿಯ ಅಧಿಕಾರಿಗಳು ಚರ್ಚಿಸಿ, ಬಲರಾಮನ ಅನಾರೋಗ್ಯಕ್ಕೆ ಕಾರಣ ಮೊದಲೇ ತಿಳಿದಿದ್ದರಿಂದ ಮರಣೋತ್ತರ ಪರೀಕ್ಷೆ ಮಾಡುವ ಅಗತ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದರು. ಬಳಿಕ ದಂತವನ್ನು ಕತ್ತರಿಸಲಾಯಿತು. ದೇಹಕ್ಕೆ ಸಣ್ಣ ಹಾನಿ ಮಾಡದೇ ಕ್ರೇನ್‌ನಲ್ಲಿ ನಿಧಾನವಾಗಿ ಗುಂಡಿಗೆ ಇಟ್ಟು ಸಂಸ್ಕಾರ ಮಾಡಲಾಯಿತು.

ವಿಶೇಷ ದಿನದಲ್ಲೇ ಮಣ್ಣಾದ ಬಲರಾಮ: ಗಣಪತಿಗೆ ಸಂಬಂಧಿಸಿದಂತೆ ವಿಶೇಷವಾದ ದಿನವಾಗಿದ್ದು, ಆ ದಿನವೇ ಬಲರಾಮ ಅಂತ್ಯಸಂಸ್ಕಾರ ನಡೆದಿದೆ. ಪೂರ್ಣ ಪ್ರಮಾಣದಲ್ಲಿ ಮಣ್ಣು ಮಾಡಿದ ಮೇಲೆ ತುಳಸಿ ಗಿಡ ನೆಡಲಾಗಿದೆ.

ಈ ಸಂದರ್ಭದಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯ, ನಾಗರಹೊಳೆ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಡಿಸಿಎಫ್‌ಗಳಾದ ಪಿ.ಎ. ಸೀಮಾ, ಸೌರಭ್ ಕುಮಾರ್, ಶರಣ ಬಸಪ್ಪ ರಾಜಮನೆತನದ ವಿಶಾಲಾಕ್ಷಿದೇವಿ ಅವರ ಪುತ್ರಿ ಶೃತಿಕೀರ್ತಿದೇವಿ ಅರಸ್, ನಾಗರಹೊಳೆಯ ವಿವಿಧ ವಲಯಗಳ ಆರ್‌ಎಫ್, ಡಿಆರ್‌ಎಫ್‌ಓ, ಬಲರಾಮ ಆನೆಯ ಮಾವುತ ತಿಮ್ಮ ಹಾಗೂ ಕುಟುಂಬದ ಸದಸ್ಯರು, ಕಾವಾಡಿ ಮಂಜುನಾಥ, ಬಲರಾಮ ಆನೆಯ ಆರೈಕೆ ಮಾಡಿದ್ದ ಪಶುವೈದ್ಯಾಧಿಕಾರಿಗಳಾದ ಡಾ.ರಮೇಶ್, ಡಾ.ಡಿ.ಎನ್. ನಾಗರಾಜು ಹಾಗೂ ಡಾ. ಮುಜೀಬ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಬೆಂಬಲಿಸಲು ರಾಜ್ಯದ ಉಪ್ಪಾರ ಸಮುದಾಯ ಮನವಿ



ಮೈಸೂರು,ಮೇ 8(ಪಿಎಂ)– ಉಪ್ಪಾರ ಸಮುದಾಯ ಶ್ರೇಯೋಭಿವೃದ್ಧಿಗಾಗಿ ಕಾಂಗ್ರೆಸ್ ಕೊಡುಗೆ ನೀಡಿದ್ದು, ಹಾಗಾಗಿ ಈ ಚುನಾವಣೆಯಲ್ಲಿ ರಾಜ್ಯದ ಉಪ್ಪಾರ ಸಮುದಾಯವು ಕಾಂಗ್ರೆಸ್ ಬೆಂಬಲಿಸಬೇಕೆಂದು ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್.ಯೋಗೀಶ ಉಪ್ಪಾರ, ಕಾಂಗ್ರೆಸ್ ಪಕ್ಷವು ಹಿಂದುಳಿದ ಉಪ್ಪಾರ ಜನಾಂಗಕ್ಕೆ ಕಳೆದ 50 ವರ್ಷಗಳಿಂದ ಅನೇಕ ಕೊಡುಗೆಗಳನ್ನು ನೀಡಿದೆ. 2013–18ರ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯನವರು ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಹಲವು ಕೊಡುಗೆ ನೀಡಿದ್ದಾರೆ ಎಂದರು.

ಉಪ್ಪಾರ ಸಮಾಜದ ಆರಾಧ್ಯದೈವ ಶ್ರೀ ಭಗೀರಥ ಮಹರ್ಷಿ ಅವರ ಜಯಂತಿಯನ್ನು ರಾಜ್ಯದಲ್ಲಿ ಆಚರಿಸಲು ಸಿದ್ದರಾಮಯ್ಯ ಕ್ರಮ ವಹಿಸಿದರು. ಉಪ್ಪಾರ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಸೇರಿದಂತೆ ಹತ್ತಾರು ಕಾರ್ಯಕ್ರಮಗಳನ್ನು ಸಮಾಜಕ್ಕಾಗಿ ನೀಡಿದ್ದಾರೆ. ಆದರೆ ಬಿಜೆಪಿ ಕೇವಲ ಆಶ್ವಾಸನೆ ನೀಡಿ ಸಮುದಾಯವನ್ನು ವಂಚಿಸಿತು ಎಂದು ದೂರಿದರು. ಸಂಘದ ಮುಖಂಡರಾದ ಸಿದ್ದಪ್ಪ, ಮರಿಸ್ವಾಮಿ, ನಂಜುಂಡಸ್ವಾಮಿ, ಶಿವಲಿಂಗಪ್ಪ ಮತ್ತಿತರರು ಗೋಷ್ಠಿಯಲ್ಲಿದ್ದರು.

ಮತದಾನ ಸಿಬ್ಬಂದಿಗಳಿಗೆ ಬಸ್ ವ್ಯವಸ್ಥೆ

ಮೈಸೂರು, ಮೇ 8– ಮತದಾನ ಅಧಿಕಾರಿಗಳನ್ನು ಮತಗಟ್ಟೆಗಳಿಗೆ ತಲುಪಿಸಲು ಒಟ್ಟು 481 ಕೆಎಸ್.ಆರ್.ಟಿ.ಸಿ ಬಸ್‌ಗಳು, 84 ಮ್ಯಾಕ್ಸಿಕ್ಯಾಬ್‌ಗಳು ಹಾಗೂ 29 ಜೀಪ್ ವ್ಯವಸ್ಥೆಯನ್ನು ಮಾಡಲಾಗಿದೆ. ಜಿಲ್ಲೆಯ 11 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 2905 ಮತಗಟ್ಟೆಗಳಿಗೆ ಮೀಸಲು 3156 ಅಧ್ಯಕ್ಷಾಧಿಕಾರಿಗಳು, 3250 ಸಹಾಯಕ ಮತಗಟ್ಟೆ ಅಧ್ಯಕ್ಷಾಧಿಕಾರಿಗಳು ಹಾಗೂ 6352 ಮತದಾನಾಧಿಕಾರಿಗಳನ್ನು ನೇಮಕ ಮಾಡಲಾಗಿದೆ (ಮೀಸಲು ಸೇರಿ).

ಎಲ್ಲಾ ಮತಗಟ್ಟೆ ಅಧಿಕಾರಿಗಳಿಗೆ ಎರಡು ಹಂತದಲ್ಲಿ ತರಬೇತಿಯನ್ನು ನೀಡಲಾಗಿದೆ. 600 ಕೇಂದ್ರ ಸರ್ಕಾರದ ಅಧಿಕಾರಿ, ನೌಕರರನ್ನು Micro Observer ಆಗಿ ನೇಮಕ ಮಾಡಲಾಗಿದ್ದು, ಅವರಿಗೂ ಸಹ ತರಬೇತಿಯನ್ನು ನೀಡಲಾಗಿದೆ. ಮತಗಟ್ಟೆ ಅಧಿಕಾರಿಗಳು ಮತ್ತು Micro Observer ಗಳಿಗೆ ಅವರು ಕರ್ತವ್ಯ ನಿರ್ವಹಿಸುತ್ತಿರುವ ಕ್ಷೇತ್ರದಿಂದ ಮಸ್ಟರಿಂಗ್ ಕೇಂದ್ರಕ್ಕೆ ಹೋಗಲು ಮೇ 9 ರ ಬೆಳಗ್ಗೆ 6 ಗಂಟೆಗೆ ಬಸ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ಬಸ್‌ಗಳು ಹೊರಡುವ ಸ್ಥಳ

ಪಿರಿಯಾಪಟ್ಟಣದಲ್ಲಿರುವ ಪುಷ್ಪ ವಿದ್ಯಾಸಂಸ್ಥೆ, ಕೃಷ್ಣರಾಜನಗರದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಟೌನ್ ಬಳಿ ಇರುವ ಸಂತ ಜೋಸೆಫರ ಶಾಲೆ, ಹೆಚ್.ಡಿ.ಕೋಟೆ ತಾಲೂಕಿನ ಸೆಂಟ್ ಮೇರಿಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ನಂಜನಗೂಡಿನಲ್ಲಿರುವ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ನಗರದ ಜೆ.ಎಲ್.ಬಿ.ರಸ್ತೆಯಲ್ಲಿರುವ ಮಹಾರಾಜ ಕಾಲೇಜು, ಶತಮಾನೋತ್ಸವ ಭವನ ಹಾಗೂ ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗವಿರುವ ಬೇಡನ್ ಪೊವೆಲ್ ಪಬ್ಲಿಕ್ ಸ್ಕೂಲ್, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಊಟಿ ರಸ್ತೆಯಲ್ಲಿರುವ ಜೆ.ಎಸ್.ಎಸ್. ವಿದ್ಯಾಪೀಠ ಜೆ.ಎಸ್.ಎಸ್. ನಂಜನಗೂಡು ತಾಲೂಕಿನಲ್ಲಿರುವ ದೇವಿರಮ್ಮನಹಳ್ಳಿಯಲ್ಲಿನ ಪ್ರಥಮ ದರ್ಜೆ ಕಾಲೇಜು ಹಾಗೂ ಟಿ.ನರಸೀಪುರದಲ್ಲಿನ ವಿದ್ಯೋದಯ ಶಿಕ್ಷಣ ಸಂಸ್ಥೆಗಳಿಂದ ಬಸ್‌ಗಳು ಹೊರಡಲಿವೆ. ಮತದಾನದ ಹಿಂದಿನ ದಿನ ಮತ್ತು ಮತದಾನ ದಿನದಂದು ಮಳೆ ಬರುವ ಸಾಧ್ಯತೆ ಇರುವುದರಿಂದ ಚುನಾವಣೆಗೆ ನಿಯೋಜನೆಗೊಂಡಿರುವ ಎಲ್ಲಾ ಮತಗಟ್ಟೆ ಅಧಿಕಾರಿಗಳು ಅವರೇ ಸ್ವಂತ ಛತ್ರಿ ಇಲ್ಲವೆ ಜರ್ಕಿನ್ (Rain coat) ಅನ್ನು ತರುವಂತೆ ತಿಳಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣಾ ಕರ್ತವ್ಯ ಲೋಪ ಶಿಕ್ಷಣಾಧಿಕಾರಿ ಅಮಾನತು

ಮೈಸೂರು, ಮೇ 8– ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯ ಮೇರೆಗೆ ಸರ್ಕಾರಿ ಕೆಲಸದಲ್ಲಿ ಕರ್ತವ್ಯ ಲೋಪವೆಸಗಿರುವ ಪಿರಿಯಾಪಟ್ಟಣ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಶಿಕ್ಷಣ ಸಂಯೋಜಕ ಅಧಿಕಾರಿ ಸೋಮಶೇಖರ್ ಅವರನ್ನು ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951 ರಡಿ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತಿನಲ್ಲಿಟ್ಟು ಆದೇಶಿಸಿದ್ದಾರೆ.

ವೇಗದ ಜಗತ್ತಿನಲ್ಲಿ ವಧುವರಾನ್ವೇಷಣೆಗೆ ವ್ಯವದಾನವಿಲ್ಲ

ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ಮೇ 8– ಇಂದು ಕಾಲ ಹಿಂದಿನಂತಿಲ್ಲ. ಇದು ವೇಗದ ಜಗತ್ತು ಬಿಡುವಿಲ್ಲದ ಸಮಾಜ. ಹಾಗಾಗಿ ಸ್ವಂತ ಮಕ್ಕಳಿಗೇ ಗಂಡಿಗೆ ಹೆಣ್ಣು ಹುಡುಕಿ, ಹೆಣ್ಣಿಗೆ ಗಂಡು ಹುಡುಕಿ ಮದುವೆ ಮಾಡುವಷ್ಟು ವ್ಯವದಾನ ಬಹಳಷ್ಟು ಮಂದಿ ತಂದೆ ತಾಯಿಗಳಿಗೆ, ಪೋಷಕರಿಗಿಲ್ಲದೇ ಇರುವುದರಿಂದ ಇಂತಹವರಿಗೆಲ್ಲ ವಧು–ವರಾನ್ವೇಷಣಾ ಸಮಾವೇಶಗಳು ಅತ್ಯಂತ ಪ್ರಯೋಜನಕಾರಿಯಾಗಿವೆ ಎಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ಸಮಸ್ತ ಬ್ರಾಹ್ಮಣ ಸಮಾಜ ಕರ್ನಾಟಕ, ಸಪ್ತಪದಿ ಫೌಂಡೇಶನ್ ಟ್ರಸ್ಟ್ ಮತ್ತು ಜಿಲ್ಲಾ ಬ್ರಾಹ್ಮಣ ಸಂಘಟನೆಗಳು ಮೈಸೂರು, ವಿಶ್ವ ಮಧ್ವಮತ ವೆಲ್‌ಫೇರ್ ಅಸೋಸಿಯೇಷನ್, ಶ್ರೀ ಶಂಕರ ಸೇವಾ ಸಮಿತಿ, ಅಖಿಲ ಭಾರತೀಯ ಶುಕ್ಲ ಯಜುರ್ವೇದಿಯ ಕಣ್ವ ಪರಿಷತ್ ಬೆಂಗಳೂರು, ಕರ್ನಾಟಕ ರಾಜ್ಯ ಬ್ರಾಹ್ಮಣ ಕ್ಷೇಮಾಭಿವೃದ್ಧಿ ಸಂಘ ವಿಜಯಪುರ ಹಾಗೂ ಪರಶುರಾಮ ಬ್ರಾಹ್ಮಣ ಸೇವಾ ಟ್ರಸ್ಟ್ ಬಳ್ಳಾರಿ ಇವರುಗಳು ಸಂಯುಕ್ತವಾಗಿ ನಗರದ ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ 46ನೇ ರಾಜ್ಯಮಟ್ಟದ ಬ್ರಾಹ್ಮಣ ವಧು ವರಾನ್ವೇಷಣಾ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪರಿಪೂರ್ಣ ಜೀವನದ ಸಾರ್ಥಕತೆ ಎಂಬುದು ವೈವಾಹಿಕ ಬದುಕಿನಲ್ಲಿದ್ದು ಇಂತಹ ಕಲ್ಯಾಣ ಕಾರ್ಯಕ್ಕೆ ವಧು ವರಾನ್ವೇಷಣೆಯೇ ಇಂದಿನ ದಿನಗಳಲ್ಲಿ ತುಂಬಾ ಕಷ್ಟಕರವಾಗಿದೆಯೆಂದರು.

ಹಿಂದೆಲ್ಲಾ ಬಂಧು,ಬಳಗ, ಸ್ನೇಹಿತರು, ನೆಂಟರು, ಇಷ್ಟರು ಇವರೆಲ್ಲಾ ದೂರದಲ್ಲಿದ್ದರೂ ಹತ್ತಿರದಲ್ಲೇ ಇದ್ದಷ್ಟು ಆತ್ಮೀಯತೆ ಇತ್ತು. ಒಂದು ಹುಡುಗನ ಅಥವಾ ಒಂದು ಹುಡುಗಿಯ ಮದುವೆ ಎಂದರೆ ಎಲ್ಲರೂ ಕೂಡಿ ಒಬ್ಬರಿಗೊಬ್ಬರು ಹೇಳಿಕೊಂಡು ಬಹುಬೇಗನೆ ವಧು ವರರನ್ನು ಸೇರಿಸಿ ಮದುವೆಯನ್ನು ಮಾಡಿ ಮುಗಿಸಿಬಿಡುತ್ತಿದ್ದರು. ಆದರೆ ಈಗ ಕಾಲ ಮೊದಲಿನಂತಿಲ್ಲ. ಪಕ್ಕದ ಬೀದಿಯಲ್ಲಿ ಅಥವಾ ನೆರೆ ಮನೆಯಲ್ಲೇ ಬಂಧು, ಬಳಗ, ಸ್ನೇಹಿತರು, ನೆಂಟರಿಷ್ಟರು ಹತ್ತಿರದಲ್ಲೇ ಇದ್ದರೂ ಕೂಡ ದೂರದವರಾಗಿರುತ್ತಾರೆ. ಒಬ್ಬರಿಗೊಬ್ಬರು ನೆರವಾಗುವಂತಹ ಆತ್ಮೀಯತೆ ಎಂಬುದನ್ನು ಯಾರಿಂದಲೂ ಇಂದು ನಿರೀಕ್ಷಿಸಲಾಗುತ್ತಿಲ್ಲ. ಅವರಿಗೆ ಅವರದೇ ಆದ ನೂರಾರು ಸಮಸ್ಯೆಗಳು. ಇಂತಹ ಕಾಲಘಟ್ಟದಲ್ಲಿ ಮಕ್ಕಳಿಗೆ ಮದುವೆ ಮಾಡಬೇಕಾದರೆ ತಕ್ಷಣಕ್ಕೆ ಸಹಾಯಕ್ಕೆ ಬರುತ್ತಿರುವುದು ವಿವಾಹ ವೇದಿಕೆಗಳಂತಹ ವಧು–ವರಾನ್ವೇಷಣೆಯ ಸಮಾವೇಶಗಳೆಂದ ಅವರು, ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಇಂತಹ ವೇದಿಕೆಗಳನ್ನು, ಸಮಾವೇಶಗಳನ್ನು ತಮ್ಮ ಮಕ್ಕಳಿಗೆ ಮದುವೆ ಮಾಡಲಿಚ್ಛಿಸುವ ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಇದಕ್ಕೂ ಮುನ್ನ ಮೇಲುಕೋಟೆಯ ವಂಗಿಪುರ ನಂಬಿ ಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸಂಸ್ಕೃತಿ ಚಿಂತಕ ಡಾ.ರಘುರಾಮ್ ವಾಜಪೇಯಿ ಅವರು ಸಮಾವೇಶವನ್ನು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಶುಭ ಹಾರೈಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಹಾಗೂ ಖ್ಯಾತ ವಕೀಲೆ ಹಾಗೂ ಚಿಂತಕಿ ಜಯಶ್ರೀ ಶಿವರಾಮ್ ಅವರು ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ರಾಘವೇಂದ್ರ ನಗರದ ಶ್ರೀ ಪಾಳ್ಯಮ್ ಪೀಠದ ಡಾ.ಮುರಳಿಧರ ಶಾಸ್ತ್ರಿ, ಕಾರ್ಮಿಕ ಸಂಘಟನೆಯ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ಜಗದೀಶ್, ಸಪ್ತಪದಿ ಫೌಂಡೇಶನ್ ಟ್ರಸ್ಟ್‌ನ ವ್ಯವಸ್ಥಾಪಕ ಬಾಲಕೃಷ್ಣ ಸಂಗಾಪುರ, ಪತ್ರಕರ್ತ ಹೊಮ್ಮ ಮಂಜುನಾಥ್ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಪ್ತಪದಿ ಫೌಂಡೇಶನ್ ಟ್ರಸ್ಟ್‌ನ ಅಧ್ಯಕ್ಷ ಎಸ್. ಶ್ರೀನಿವಾಸ ಭಾರದ್ವಾಜ್ ಅಧ್ಯಕ್ಷತೆ ವಹಿಸಿದ್ದರು. ಅಂತಿಮವಾಗಿ ಇಳೈ ಆಳ್ವಾರ್ ಸ್ವಾಮೀಜಿ ಅವರು ಆಶೀರ್ವಚನದ ನುಡಿಗಳನ್ನಾಡಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರಾದ ಸಾಹಿತಿ ಬನ್ನೂರು ಕೆರಾಜು, ಹಿರಿಯ ಚಲನಚಿತ್ರ ಪತ್ರಕರ್ತ ಎಂ. ಆರ್. ಸುಬ್ರಹ್ಮಣ್ಯ, ವಿಪ್ರ ಮುಖಂಡರಾದ ರಘುರಾಮ್ ವಾಜಪೇಯಿ, ನಂ.ಶ್ರೀಕಂಠಕುಮಾರ್, ಜ್ಯೋತಿಷಿ ಡಾ.ರಾಘವನ್ ಶಾಸ್ತ್ರಿ, ಸಮಾಜ ಸೇವಕ ಡಾ. ಆರ್. ಚಕ್ರಪಾಣಿ, ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದ ವ್ಯವಸ್ಥಾಪಕ ರವಿಶಂಕರ್ ಅವರುಗಳನ್ನು ಸನ್ಮಾನಿಸಲಾಯಿತು.

ಮೈಸೂರಲ್ಲಿ 92 ರೌಡಿಶೀಟರ್ ಮನೆಗಳ ಪರಿಶೀಲನೆ



ಮೈಸೂರು, ಮೇ 8(ಆರ್‌ಕೆ)– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಇಂದು ಮುಂಜಾನೆ ಮೈಸೂರು ನಗರದ ಎಲ್ಲಾ 92 ರೌಡಿಶೀಟರ್‌ಗಳ ಮನೆಗಳಿಗೆ ಏಕಕಾಲದಲ್ಲಿ ದಿಢೀರ್ ದಾಳಿ ಮಾಡಿದ ಪೊಲೀಸರು, ಪರಿಶೀಲನೆ ನಡೆಸಿದರು.


ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರ ಮಾರ್ಗದರ್ಶನದಂತೆ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್ ನೇತೃತ್ವದಲ್ಲಿ ಎಲ್ಲಾ ಉಪವಿಭಾಗಗಳ ಎಸಿಪಿಗಳು, ಪೊಲೀಸ್ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳು ತಮ್ಮ ವ್ಯಾಪ್ತಿಯ ರೌಡಿಶೀಟರ್‌ಗಳ ಮನೆಗಳಿಗೆ ಮುಂಜಾನೆ 5 ಗಂಟೆಗೆ ದಾಳಿ ನಡೆಸಿದರು.

ಕಾರ್ಯಾಚರಣೆ ವೇಳೆ ಒಬ್ಬರ ಮನೆಯಲ್ಲಿ ಮಾರಕಾಸ್ತ್ರ ಪತ್ತೆಯಾಗಿದ್ದು, ಮತ್ತೊಂದೆಡೆ ಗಡಿಪಾರಾಗಿದ್ದ ರೌಡಿಶೀಟರ್ ಓರ್ವ ಆದೇಶ ಉಲ್ಲಂಘಿಸಿ ಬಂದು ಮನೆಯಲ್ಲಿ ಮಲಗಿದ್ದುದು ಕಂಡು ಬಂದಿತು. ಈ ಇಬ್ಬರಿಗೂ ಪ್ರಕರಣ ದಾಖಲಾಗಿದ್ದು ಕ್ರಮವಹಿಸಲಾಗಿದೆ ಎಂದು ಮುತ್ತುರಾಜ್ ತಿಳಿಸಿದ್ದಾರೆ.

ಚುನಾವಣೆ ಸಂಬಂಧ ಅಶಾಂತಿ ಉಂಟು ಮಾಡುವುದು, ಮತದಾರರಿಗೆ ಗಾಬರಿ ಹುಟ್ಟಿಸುವುದು, ಹಣಕಾಸು ವ್ಯವಹಾರ, ಗುಂಪು ಘರ್ಷಣೆಯಂತಹ ಕೃತ್ಯಗಳಲ್ಲಿ ಭಾಗಿಯಾದಲ್ಲಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದು ರೌಡಿಶೀಟರ್‌ಗಳಿಗೆ ಎಚ್ಚರಿಕೆ ನೀಡಲಾಗಿದೆ. ಈಗಾಗಲೇ 3 ಬಾರಿ ರೌಡಿಶೀಟರ್‌ಗಳ ಮನೆ ಮೇಲೆ ದಾಳಿ ನಡೆಸಿ ಎಚ್ಚರಿಕೆ ನೀಡಿರುವ ಪೊಲೀಸರು, ಅಪರಾಧ ಕೃತ್ಯಗಳಲ್ಲಿ ಸಕ್ರಿಯರಾಗಿರುವವರ ವಿರುದ್ಧ ಪ್ರಕರಣ ದಾಖಲಿಸಿ ಜಿಲ್ಲೆಯಿಂದ ಗಡಿಪಾರು ಮಾಡಿದ್ದರಲ್ಲದೆ, ಓರ್ವನ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ರಾಜ್ಯದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಸೂರ್ಯ–ಚಂದ್ರರಿರುವಷ್ಟೇ ಸತ್ಯ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ



ಬೆಂಗಳೂರು, ಮೇ 8(ಕೆಎಂಶಿ)– ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯುವುದು ಸೂರ್ಯ–ಚಂದ್ರರಿರುವಷ್ಟೇ ಸತ್ಯ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜ್ಯ ಚುನಾವಣಾ ಉಸ್ತುವಾರಿ ಹೊಣೆ ಹೊತ್ತ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಜೊತೆಗೂಡಿ, ಸುದ್ದಿಗೋಷ್ಠಿ ನಡೆಸಿದ ಯಡಿಯೂರಪ್ಪ, ಬಿಜೆಪಿ ರಾಜ್ಯದಲ್ಲಿ 130 ರಿಂದ 135 ಸ್ಥಾನಗಳನ್ನು ಗಳಿಸಿ, ಸ್ವತಂತ್ರವಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿಗೆ ತಕ್ಕಂತೆ ಹೆಜ್ಜೆಗೆ ಹೆಜ್ಜೆ ಹಾಕುವ ಸರಕಾರ ಕರ್ನಾಟಕದಲ್ಲಿ ಬೇಕಾಗಿದೆ. ಇದನ್ನು ಅರಿತು ರಾಜ್ಯದ ಜನತೆ ಮತ್ತೆ ಬಿಜೆಪಿಗೆ ಅಧಿಕಾರ ನೀಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಡಬಲ್ ಇಂಜಿನ್ ಸರ್ಕಾರ ಇರುವುದರಿಂದಲೇ ಕರ್ನಾಟಕದಲ್ಲಿ ರಸ್ತೆ, ರೈಲ್ವೆ, ವಿಮಾನ ನಿಲ್ದಾಣ, ಬಂದರು ಸೇರಿ ಮೂಲಸೌಕರ್ಯ ಅಭಿವೃದ್ಧಿ ವೇಗವಾಗಿ ಸಾಗಿದೆ. ಮನೆಮನೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದೇವೆ. ಶೌಚಾಲಯಗಳ ಸೌಕರ್ಯ ಕೊಡಲಾಗುತ್ತಿದೆ. ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುವ ನಾಯಕ ನಮಗೆ ಸಿಕ್ಕಿರುವುದು ನಮ್ಮ ಸೌಭಾಗ್ಯ ಎಂದು ನುಡಿದರು.

ಕೋವಿಡ್ ಬಂದಾಗ ನಮ್ಮ ಜೊತೆಗಿದ್ದು ಪ್ರಧಾನಿಯವರು ಪರಿಹಾರ ನೀಡಿದ್ದಾರೆ. ನಮ್ಮ ಆರೋಗ್ಯ, ದೇಶ ರಕ್ಷಿಸಿದವರು ಮೋದಿಜಿ. ಅವರ ಸರಕಾರ ಬಂದ ಬಳಿಕ ದೇಶ ಆರ್ಥಿಕ ಪ್ರಗತಿ ಹೊಂದಿದೆ. ಪ್ರಪಂಚದಲ್ಲಿ ಆರ್ಥಿಕ ಸದೃಢ ದೇಶಗಳ ಪೈಕಿ ನಮ್ಮ ದೇಶ 5ನೇ ಸ್ಥಾನಕ್ಕೇರಿದೆ. ಮುಂದಿನ ಒಂದೆರಡು ದಶಕದಲ್ಲಿ ನಮ್ಮ ದೇಶವು ಪ್ರಪಂಚದಲ್ಲಿ ಒಂದು ಅಥವಾ ಎರಡನೇ ಸ್ಥಾನಕ್ಕೆ ಏರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಇದು ಪ್ರಧಾನಿಯವರ ಸಂಕಲ್ಪವೂ ಆಗಿದೆ ಎಂದರು.

ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಲಾಗಿದೆ. ಇದರಿಂದ ಇತಿಹಾಸ ಸೃಷ್ಟಿಯಾಗಿದೆ. ಶೇ 75–80 ರಷ್ಟು ಎಸ್‌ಸಿ, ಎಸ್‌ಟಿ ಸಮುದಾಯ ಬಿಜೆಪಿಯನ್ನು ಬೆಂಬಲಿಸಲಿದೆ ಎಂದು ಯಡಿಯೂರಪ್ಪ ಅವರು ತಿಳಿಸಿದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ನೀಡಿದ ಭಾಗ್ಯಲಕ್ಷ್ಮಿ ಯೋಜನೆ, ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ, ರೈತರಿಗೆ ಪ್ರತ್ಯೇಕ ಬಜೆಟ್, ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ನೀಡಿದ್ದೆ. ಇಂದಿನ ನಮ್ಮ ಸರಕಾರ ರೈತ ವಿದ್ಯಾನಿಧಿ ಜಾರಿ ಮಾಡಿದೆ. ಸಂಧ್ಯಾ ಸುರಕ್ಷಾದಡಿ ಮಾಸಿಕ ವೇತನ ಹೆಚ್ಚಿಸಿದ್ದೇವೆ ಎಂದು ವಿವರಿಸಿದರು. ನಾವು ಯಾವತ್ತೂ ಜಾತಿ ರಾಜಕೀಯ ಮಾಡಿಲ್ಲ. ಸರ್ವರಿಗೂ ಸಮಪಾಲು, ಸಾಮಾಜಿಕ ನ್ಯಾಯದಡಿ ಕೆಲಸ ಮಾಡುತ್ತಿದ್ದೇವೆ ಎಂದರು.

ನಮ್ಮ ಸರಕಾರ ಅಧಿಕಾರಕ್ಕೆ ಬಂದೊಡನೆ ಹಾಲಿನ ಬೆಂಬಲ ಬೆಲೆ ಹೆಚ್ಚಿಸುತ್ತೇವೆ ಪಿಎಂ ಕಿಸಾನ್ ಯೋಜನೆಯಡಿ 10 ಸಾವಿರ ನೀಡುತ್ತಿದ್ದು ಲಕ್ಷಾಂತರ ರೈತರಿಗೆ ಪ್ರಯೋಜನ ಆಗಲಿದೆ. ರೈತ ಸಿರಿ ಯೋಜನೆಯಡಿ ನೆರವು ಕೊಡಲಿದ್ದೇವೆ ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಅಡಿಕೆ ಮಂಡಳಿ ಸ್ಥಾಪಿಸುತ್ತೇವೆ ಎಂದು ತಿಳಿಸಿದರು.

ಲಿಂಗಾಯತ, ಒಕ್ಕಲಿಗರಿಗೆ 2ಡಿ ಮೀಸಲಾತಿ ತರಲಾಗಿದೆ ಎಂದ ಅವರು, ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಮುಳುಗುತ್ತಿರುವ ಹಡಗು. ರಾಹುಲ್ ಗಾಂಧಿ ಮತ್ತು ಪ್ರಿಯಾಂಕ ಗಾಂಧಿ ಕಳೆದ ಬಾರಿ ಉತ್ತರಪ್ರದೇಶದಲ್ಲಿ ಓಡಾಡಿದರೂ ಬೆರಳೆಣಿಕೆಯ ಸೀಟನ್ನಷ್ಟೇ ಕಾಂಗ್ರೆಸ್ ಪಕ್ಷ ಗೆದ್ದಿದೆ ಎಂದು ವಿವರಿಸಿದರು.

ಕಾಂಗ್ರೆಸ್ ಪಕ್ಷ ಸಮರ್ಥ ನಾಯಕರನ್ನು ಹೊಂದಿಲ್ಲ. ರಾಹುಲ್ ಗಾಂಧಿ, ಮೋದಿಜಿ, ಅಮಿತ್ ಶಾ ಅವರಿಗೆ ಸರಿಸಾಟಿಯಾದ ನಾಯಕರಲ್ಲ ಎಂಬುದು ಜಗತ್ತಿಗೇ ಗೊತ್ತಿದೆ ಎಂದರು. ಮೋದಿಜಿ ಅವರು ಪ್ರಧಾನಿಯಾದ ಬಳಿಕ ಸಣ್ಣ ಭ್ರಷ್ಟಾಚಾರದ ಆರೋಪವೂ ಇಲ್ಲದೆ ದೇಶದ ಜನರಿಗಾಗಿ ಹಗಲು ರಾತ್ರಿ ದುಡಿಯುತ್ತಿದ್ದಾರೆ ಎಂದು ತಿಳಿಸಿದರು.